ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 28 ಶುಕ್ರವಾರ 2025

ಸಂಪುಟ: 45 | ಸಂಚಿಕೆ: 310 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜಗ್ಗಿ ವಾಸುದೇವ್ ಸಾನ್ನಿಧ್ಯದಲ್ಲಿ ಡಿಕೆಶಿ; ಕಾಂಗ್ರೆಸ್‌ನಲ್ಲಿ ಆಕ್ಷೇಪ

ರಾಹುಲ್ ಗಾಂಧಿ ಯಾರು...?; ಜಗ್ಗಿ ವಾಸುದೇವ್ ಸಂದರ್ಶನವೊಂದರಲ್ಲಿ ಪ್ರಶ್ನಿಸಿದ್ದ ಪ್ರಸಂಗ ಪಕ್ಷ, ಸಾಮಾಜಿಕ ಜಾಲತಾಣದಲ್ಲಿ ಮತ್ತೆ ಮುನ್ನೆಲೆಗೆ

ಬೆಂಗಳೂರು, ಫೆ.27– ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆದಿದ್ದ ಈಶಾ ಫೌಂಡೇಷನ್ ಜಗ್ಗಿ ವಾಸುದೇವ್ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗಿಯಾಗಿರುವುದು ಕಾಂಗ್ರೆಸ್‌ನಲ್ಲೇ ವಿರೋಧಕ್ಕೆ ಕಾರಣವಾಗಿದೆ.


ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಯಾರು ಎಂದು ಸಂದರ್ಶನವೊಂದರಲ್ಲಿ ವಾಸುದೇವ್ ಪ್ರಶ್ನೆ ಮಾಡಿದ್ದೇ ಕೈ ನಾಯಕರ ಅಸಮಾಧಾನಕ್ಕೆ ಕಾರಣವಾಗಿದೆ. ಈ ನಡುವೆ ಈ ಸಂದರ್ಶನದ ವಿಡಿಯೋ ಅಂಶಗಳೂ ವೈರಲ್ ಆಗುತ್ತಿವೆ. ಹೀಗಿರುವಾಗ ಕೆಪಿಸಿಸಿ ಅಧ್ಯಕ್ಷರಾಗಿ ಡಿಕೆಶಿ ಈ ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಏನು ಸಂದೇಶ ನೀಡಲಿದೆ ಎಂಬುದು ಪ್ರಶ್ನೆಯಾಗಿದೆ. ತಮಿಳುನಾಡಿನ ಕೊಯಮತ್ತೂರಿನಲ್ಲಿ ಇಶಾ ಫೌಂಡೇಶನ್ ಮಹಾಶಿವರಾತ್ರಿ ■ 6ನೇ ಪುಟಕ್ಕೆ



ತಮಿಳುನಾಡಿನ ಕೊಯಮತ್ತೂರಿನಲ್ಲಿರುವ ಇಶಾ ಫೌಂಡೇಶನ್‌ನಲ್ಲಿ ಬುಧವಾರ ನಡೆದ ಶಿವರಾತ್ರಿ ಉತ್ಸವದಲ್ಲಿ ಸದ್ಗುರು ಜಗ್ಗಿ ವಾಸುದೇವ್ ಅವರೊಂದಿಗೆ ಡಿಸಿಎಂ ಡಿ.ಕೆ.ಶಿವಕುಮಾರ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ್ದರು.

ಬೆಂಗಳೂರು ಅರಮನೆ ಭೂಮಿ ವಿವಾದ

ಸುಪ್ರೀಂಕೋರ್ಟ್‌ಗೆ 3400 ಕೋಟಿಯ ಟಿಡಿಆರ್ ಹಸ್ತಾಂತರಿಸಿದ ರಾಜ್ಯ ಸರ್ಕಾರ



ನವದೆಹಲಿ, ಫೆ.27(ಬಿಎಲ್‌ಯು)– ರಸ್ತೆ ಅಗಲೀಕರಣಕ್ಕಾಗಿ ಬೆಂಗಳೂರು ಅರಮನೆಯ ಭೂಮಿ ಸ್ವಾಧೀನಕ್ಕೆ 3,400 ಕೋಟಿ ಮೌಲ್ಯದ ಟಿಡಿಆರ್ ಅನ್ನು ಮೈಸೂರು ರಾಜವಂಶಸ್ಥರಿಗೆ ನೀಡುವ ಬದಲು ಸುಪ್ರೀಂ ಕೋರ್ಟ್ ರಿಜಿಸ್ಟ್ರಾರ್‌ಗೆ ಸರ್ಕಾರ ಹಸ್ತಾಂತರಿಸಿದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಅರವಿಂದ್ ಕುಮಾರ್ ಹಾಗೂ ನ್ಯಾಯಮೂರ್ತಿ ಸುಂದರೇಶ್ ದ್ವಿಸದಸ್ಯ ಪೀಠ ರಾಜ್ಯ ಸರ್ಕಾರಕ್ಕೆ ಈ ನಿರ್ದೇಶನ ನೀಡಿತ್ತು.

ಶತಾಯಗತಾಯ ಮೈಸೂರು ರಾಜವಂಶಸ್ಥರಿಗೆ ಟಿಡಿಆರ್ ನೀಡಬಾರದು ಎಂಬ ರಾಜ್ಯ ಸರ್ಕಾರದ ಧೋರಣೆಗೆ ಇದರಿಂದ ಹಿನ್ನಡೆಯಾಗಿದೆ. ರಸ್ತೆ ಅಗಲೀಕರಣಕ್ಕಾಗಿ ಬೆಂಗಳೂರು ಅರಮನೆಯ 15.7 ಎಕರೆ ಭೂಮಿ ಸ್ವಾಧೀನಕ್ಕೆ ಪರಿಹಾರವಾಗಿ 3,400 ಕೋಟಿ ರೂಪಾಯಿ ಮೌಲ್ಯದ ಟಿಡಿಆರ್ ನೀಡುವಂತೆ ಸುಪ್ರೀಂಕೋರ್ಟ್ ರಾಜ್ಯ ಸರ್ಕಾರಕ್ಕೆ ಆದೇಶ ನೀಡಿತ್ತು. ಆದರೆ ಮೈಸೂರು ರಾಜವಂಶಸ್ಥರಿಗೆ ಟಿಡಿಆರ್ ನೀಡಲು ಒಪ್ಪದ ರಾಜ್ಯ ಸರ್ಕಾರ ಇಡೀ ಬೆಂಗಳೂರು ಅರಮನೆ ವಶಕ್ಕೆ ಸುಗ್ರೀವಾಜ್ಞೆ ಹೊರಡಿಸಿತ್ತು. ಇದಕ್ಕೆ ರಾಜ್ಯಪಾಲರು ಕೂಡ ಅಂಕಿತ ಹಾಕಿದ್ದರು. ಇದರಿಂದ ಇಡೀ ಬೆಂಗಳೂರು ಅರಮನೆಯ 472.16 ಎಕರೆ ಭೂಮಿ ತಮ್ಮ ವಶಕ್ಕೆ ಬರುವುದರಿಂದ ರಸ್ತೆ ಅಗಲೀಕರಣಕ್ಕೆ ಬೇಕಾದಷ್ಟು ಅರಮನೆಯ ಜಾಗವನ್ನು ಸುಲಭವಾಗಿ ಬಳಸಿಕೊಳ್ಳಬಹುದು ಎಂದು ರಾಜ್ಯ ಸರ್ಕಾರ ಲೆಕ್ಕಾಚಾರ ಹಾಕಿತ್ತು.

ಆದರೆ ಟಿಡಿಆರ್ ನೀಡದ ರಾಜ್ಯ ಸರ್ಕಾರದ ಧೋರಣೆಯನ್ನು ಮೈಸೂರು ರಾಜವಂಶಸ್ಥರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ಇಂದು ವಿಚಾರಣೆ ನಡೆಯಿತು. ಈ ವೇಳೆ ರಾಜ್ಯ ಸರ್ಕಾರದಿಂದ ಹಲವು ಅಧಿಕಾರಿಗಳು ಹಾಜರಿದ್ದರು. ಟಿಡಿಆರ್ ನೀಡುವಂತೆ ನಾವು ಆದೇಶ ನೀಡಿದ್ದರೂ ಏಕೆ ಪಾಲಿಸಿಲ್ಲ ಎಂದು ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

ಈ ವೇಳೆ ರಾಜ್ಯ ಸರ್ಕಾರದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಹಾಗೂ ರಾಜೀವ್ ಧವನ್, ಮೈಸೂರು ರಾಜವಂಶಸ್ಥರಿಗೆ ನಾವು ಟಿಡಿಆರ್ ನೀಡುವುದಿಲ್ಲ. ಆದರೆ ನಿಮ್ಮ ಸುಪರ್ದಿಗೆ ಒಪ್ಪಿಸುತ್ತೇವೆ. ■ 6ನೇ ಪುಟಕ್ಕೆ



ನ್ಯಾಯಾಲಯದ ಸುಪರ್ದಿಗೆ ಟಿಡಿಆರ್ ಸಲ್ಲಿಸುವುದಾಗಿ ರಾಜ್ಯ ಸರ್ಕಾರ ತನ್ನ ನಿರ್ಧಾರ ತಿಳಿಸಿರುವ ಕಾರಣ ಸದ್ಯಕ್ಕೆ ನ್ಯಾಯಾಂಗ ನಿಂದನೆಯಿಂದ ಪಾರಾಗಿದೆ. ನಮಗೆ ಟಿಡಿಆರ್ ಕೊಡಬಾರದು ಎಂಬ ಒಂದೇ ಉದ್ದೇಶದಿಂದ ರಾಜ್ಯ ಸರ್ಕಾರ ಹಲವು ಮಾರ್ಗ ಅನುಸರಿಸುತ್ತಿದೆ. ಆದರೆ ಮೈಸೂರು ರಾಜಮನೆತನಕ್ಕೆ ನ್ಯಾಯಾಲಯದಲ್ಲಿ ನಂಬಿಕೆ ಇದ್ದು, ನ್ಯಾಯ ಸಿಗಲಿದೆ ಎಂಬ ವಿಶ್ವಾಸದಲ್ಲಿದೆ.

–ರಾಜಾಚಂದ್ರ, ಮೈಸೂರು ರಾಜವಂಶಸ್ಥ.

ಸದ್ಯ ಡಿ.ಕೆ.ಶಿವಕುಮಾರ್ ಸಾಮೂಹಿಕ ನಾಯಕತ್ವ ಜಪ!

ಬೆಂಗಳೂರು: ಮುಂದಿನ ಚುನಾವಣೆಗೆ ತಮ್ಮದೇ ನಾಯಕತ್ವ ಎನ್ನುವ ಮೂಲಕ ಕಾಂಗ್ರೆಸ್‌ನಲ್ಲಿ ಚರ್ಚೆಯ ಕೇಂದ್ರಬಿಂದುವಾಗಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿ ಪ್ರವಾಸದಿಂದ ಮರಳುತ್ತಿದ್ದಂತೆ ಧಾಟಿ ಬದಲಿಸಿದ್ದು, ಸಾಮೂಹಿಕ ನಾಯಕತ್ವ ಜಪಿಸುವ ಮೂಲಕ ಮತ್ತೆ ಗಮನ ಸೆಳೆದಿದ್ದಾರೆ. ಪಕ್ಷ ನನಗೆ ಈವರೆಗೆ ಸ್ಥಾನಮಾನ ನೀಡಿ ಬೆಳೆಸಿದೆ. ನನ್ನ ವೈಬ್ರೇಷನ್, ಸಾಮರ್ಥ್ಯ, ಅನುಭವವನ್ನು ಪಕ್ಷ ಬಳಸಿಕೊಳ್ಳಬೇಕು. ಯಾವುದೇ ಹುದ್ದೆಯಲ್ಲಿದ್ದರೂ ನಾನು ಪಕ್ಷ ಮುನ್ನಡೆಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೂಡ ಪಕ್ಷವನ್ನು ಮುನ್ನಡೆಸಲಿದ್ದು, ■ 6ನೇ ಪುಟಕ್ಕೆ

ಕರ್ನಾಟಕದಲ್ಲಿ ಡಿಕೆಶಿ ಕೂಡ ಒಬ್ಬ ಏಕನಾಥ್ ಶಿಂಧೆ

ಬೆಂಗಳೂರು: ಕರ್ನಾಟಕದಲ್ಲಿ ಏಕನಾಥ್ ಶಿಂಧೆ ರೀತಿ ಬಹಳ ಜನರಿದ್ದಾರೆ. ಅವರಲ್ಲಿ ಡಿಕೆಶಿಯವರು ಕೂಡ ಒಬ್ಬರು ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹೇಳಿದರು. ವಿಧಾನಸೌಧದಲ್ಲಿ ಮಾತನಾಡಿದ ಅವರು, ಸಿಎಂ ಪದವಿಯನ್ನು ಒದ್ದು ಕಿತ್ತುಕೊಳ್ಳುತ್ತೀನಿ ಎಂದು ಡಿಕೆಶಿ ಹೇಳಿದ್ದಾರೆ. ಇನ್ನೂ ಖರ್ಗೆ ಕುಂಭಮೇಳಕ್ಕೆ ಹೋಗಬಾರದು ಎಂದು ಹೇಳಿದ್ದಾರೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಕುಂಭಮೇಳಕ್ಕೆ ಹೋಗಿಲ್ಲ. ಆದರೆ, ಡಿಕೆಶಿ ಕುಟುಂಬ ಸಮೇತ ಕುಂಭಮೇಳಕ್ಕೆ ಹೋಗಿ ಮುಳುಗಿ ಬಂದಿದ್ದಾರೆ. ■ 6ನೇ ಪುಟಕ್ಕೆ



ಅಶೋಕ್

ಡಿಕೆಶಿ ಬಿಜೆಪಿ ಸೇರುವ ಕುರಿತು ಯಾವುದೇ ಚರ್ಚೆ ಇಲ್ಲ


ಬೆಂಗಳೂರು: ಡಿಕೆಶಿ, ಅಮಿತ್ ಶಾ ಇಶಾ ಫೌಂಡೇಶನ್‌ನ ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ರಾಜಕೀಯ ಅರ್ಥ ಕಲ್ಪಿಸುವ ಅಗತ್ಯ ಇಲ್ಲ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಸದ್ಗುರು ಕಾರ್ಯಕ್ರಮದಲ್ಲಿ ಮೋದಿ ಅವರು ಹಿಂದೆ ಭಾಗವಹಿಸಿದ್ದರು. ಈಗ ಅಮಿತ್ ಶಾ ಅವರು ಭಾಗಿಯಾಗಿದ್ದರು. ನಾವೂ ಸಾಕಷ್ಟು ಸಲ ಭಾಗಿವಹಿಸಿದ್ದೆವು. ಆದರೆ, ಕಾಂಗ್ರೆಸ್‌ನಲ್ಲಿ ಬೇರೆ ಬೇರೆ ವ್ಯಾಖ್ಯಾನ ನಡೆಯುತ್ತಿರುವುದು ಅವರ ಪಕ್ಷದ ವಿಚಾರ ಎಂದು ■ 6ನೇ ಪುಟಕ್ಕೆ



ಬೊಮ್ಮಾಯಿ

ಮಾರ್ಚ್ 2ನೇ ವಾರ ಮೈಸೂರು ಪಾಲಿಕೆ ಬಜೆಟ್

ಪೂರ್ವಭಾವಿ ಸಭೆಯಲ್ಲಿ ಮಾಹಿತಿ ಸಂಗ್ರಹ



ಮೈಸೂರು, ಫೆ.27(ಆರ್‌ಕೆ)–ಮಾರ್ಚ್ 7ರ ನಂತರ ಮೈಸೂರು ಮಹಾ ನಗರ ಪಾಲಿಕೆಯ 2025–26ನೇ ಸಾಲಿನ ಆಯ–ವ್ಯಯ ಮಂಡಿಸಲಾಗುವುದು ಎಂದು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ತಿಳಿಸಿದ್ದಾರೆ. ಈಗಾಗಲೇ ಎರಡು ಬಾರಿ ಮಾಜಿ ಮೇಯರ್‌ಗಳು, ಹೋಟೆಲ್ ಅಸೋಷಿಯೇಷನ್, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ(ಎಮ್‌ಸಿಸಿಐ), ಮೈಸೂರು ಕೈಗಾರಿಕಾ ಸಂಸ್ಥೆ, ಮೈಸೂರು ಟ್ರಾವೆಲ್ ಏಜೆಂಟ್ಸ್(ಎಮ್‌ಟಿಎ) ಸೇರಿದಂತೆ ಹಲವು ಸಂಘ–ಸಂಸ್ಥೆಗಳೊಂದಿಗೆ ಬಜೆಟ್ ಪೂರ್ವ ಸಭೆ ನಡೆಸಿ ಅಭಿಪ್ರಾಯ, ಸಲಹೆಗಳನ್ನು ಪಡೆಯಲಾಗಿದ್ದು, ಮೈಸೂರಿನ ನಾಗರಿಕರಿಗೆ ಮೂಲ ಸೌಲಭ್ಯ ಅಭಿವೃದ್ಧಿ ನಿರ್ವಹಣೆಯನ್ನು ಗುರಿಯಾಗಿರಿಸಿ 2025ನೇ ಸಾಲಿನ ಬಜೆಟ್ ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ವಿವಿಧ ತೆರಿಗೆ, ಬಾಡಿಗೆ, ಜಾಹೀರಾತು ಶುಲ್ಕ, ಉದ್ದಿಮೆ ರಹದಾರಿ ಶುಲ್ಕ, ಪ್ಲಾನ್ ಲೈಸನ್ಸ್, ಖಾತಾ–ಕಂದಾಯ ಸೇರಿದಂತೆ ವಿವಿಧ ಬಾಬತ್ತಿನ ಶುಲ್ಕ ಸಂಗ್ರಹಕ್ಕೆ ಒತ್ತು ನೀಡಿ ಪಾಲಿಕೆಯನ್ನು ಆರ್ಥಿಕವಾಗಿ ಸದೃಢಪಡಿಸಿ ನಗರವನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡಲು ಆದ್ಯತೆ ನೀಡಲಾಗುವುದು ಎಂದು ಆಯುಕ್ತರು ತಿಳಿಸಿದರು.

ವಕ್ಫ್ ತಿದ್ದುಪಡಿ ಮಸೂದೆಗೆ ಕೇಂದ್ರ ಸಂಪುಟ ಒಪ್ಪಿಗೆ

ನವದೆಹಲಿ, ಫೆ.27– ಜಂಟಿ ಸಂಸದೀಯ ಸಮಿತಿ ನೀಡಿದ ವರದಿ ಮೇರೆಗೆ ವಕ್ಫ್ (ತಿದ್ದುಪಡಿ) ಮಸೂದೆಗೆ ಕೇಂದ್ರ ಸಂಪುಟ ಒಪ್ಪಿಗೆ ಸೂಚಿಸಿದೆ.

ಸಂಸತ್ತಿನಲ್ಲಿ 2025ರ ಬಜೆಟ್ ಅಧಿವೇಶನದ ಮೊದಲಾರ್ಧದಲ್ಲಿ ಪ್ರತಿಪಕ್ಷಗಳ ಗದ್ದಲದ ನಡುವೆ ವರದಿಯನ್ನು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ಈ ವೇಳೆ ವಿಕ್ಷಗಳು ಗದ್ದಲದಿಂದಾಗಿ ಸ್ವಲ್ಪ ಸಮಯದವರೆಗೆ ಕಲಾಪವನ್ನು ಮುಂದೂಡಲಾಯಿತು. ಅಲ್ಲದೇ ವಿಪಕ್ಷ ಸಂಸದರು ತಮ್ಮ ಭಿನ್ನಾಭಿಪ್ರಾಯವನ್ನು ಜೆಪಿಸಿ ವರದಿಯಲ್ಲಿ ತಿರುಚಲಾಗಿದೆ ಎಂದು ದೂರಿದರು. ಆದರೆ, ಕೇಂದ್ರವು ಈ ಆರೋಪವನ್ನು ನಿರಾಕರಿಸಿತು.

ಬಿಜೆಪಿ ನಾಯಕ ಜಗದಾಂಬಿಕಾ ಪಾಲ್ ನೇತೃತ್ವದ ಜೆಪಿಸಿ, ಪ್ರತಿಪಕ್ಷಗಳ ಭಿನ್ನಾಭಿಪ್ರಾಯದ ನಡುವೆ ಶಾಸನಕ್ಕೆ ಹಲವು ತಿದ್ದುಪಡಿಗಳನ್ನು ಸೂಚಿಸಿದೆ. ಕಳೆದ ಜನವರಿಯಲ್ಲಿ ಜೆಪಿಸಿ ಸಭೆಯಲ್ಲಿ ವಿಪಕ್ಷ ಸಂಸದರು ಸೇರಿ ಇತರರು 44 ತಿದ್ದುಪಡಿಗಳಿಗೆ ಸೂಚಿಸಿದ್ದರು. ಈ ಪೈಕಿ ಬಿಜೆಪಿ ನೇತೃತ್ವದ ಎನ್‌ಡಿಎ ಸದಸ್ಯರು ಪ್ರಸ್ತಾಪಿಸಿದ 14 ತಿದ್ದುಪಡಿಗಳನ್ನು ಮಾತ್ರವೇ ಜಂಟಿ ಸಂಸದೀಯ ಸಮಿತಿ ಅಂಗೀಕರಿಸಿತು.

ಇಡ್ಲಿ ಸೇರಿ ಹೋಟೆಲ್‌ನ ಬಿಸಿಬಿಸಿ ತಿಂಡಿ ಪಾರ್ಸೆಲ್‌ಗೆ ಬಳಸುವ ವಿಷಕಾರಿ ಪ್ಲಾಸ್ಟಿಕ್ ನಿಷೇಧ

- ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆದೇಶ
- ಮೈಸೂರಲ್ಲಿ ಪ್ಲಾಸ್ಟಿಕ್ ನಿಷೇಧಿಸಿದ್ದರೂ ನಿಷೇಧವಾಗಿಲ್ಲ!



ಬೆಂಗಳೂರು, ಫೆ.27(ಕೆಎಂಶಿ) – ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಇನ್ನು ಮುಂದೆ ಪ್ಲಾಸ್ಟಿಕ್ ಬಳಸದಂತೆ ರಾಜ್ಯ ಸರ್ಕಾರ ನಿಷೇಧಿಸಿದೆ.

ಈ ಸಂಬಂಧ ಸುದ್ದಿಗಾರರಿಗೆ ಮಾಹಿತಿ ನೀಡಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಇಡ್ಲಿ, ವಡೆ, ಸಾಂಬಾರ್, ಕಾಫಿ, ಟೀ ಸೇರಿದಂತೆ ಪ್ಲಾಸ್ಟಿಕ್ ಚೀಲಗಳಲ್ಲಿ ಬಿಸಿ ಬಿಸಿ ತಿಂಡಿ ಪಾರ್ಸೆಲ್ ನೀಡುವುದು ಮಾರಣಾಂತಿಕ ರೋಗಕ್ಕೆ ಕಾರಣವಾಗಲಿದೆ ಎಂದಿದ್ದಾರೆ. ಇಡ್ಲಿ ತಯಾರಿಕೆ ವೇಳೆ ಪ್ಲಾಸ್ಟಿಕ್ ಬಳಸುತ್ತಿರುವುದು ಅನೇಕ ರೋಗಗಳಿಗೆ ಎಡೆಮಾಡಿದೆ, ಅದರಲ್ಲೂ, ರಸ್ತೆ ಬದಿಯ ತಿಂಡಿ ಅಂಗಡಿಗಳು ಪ್ಲಾಸ್ಟಿಕ್ ಬಳಕೆ ಮಾಡಿ ಆಹಾರ ತಯಾರಿಕೆ ಹಾಗೂ ಪಾರ್ಸಲ್‌ಗಳಿಗೆ ಬಳಸುತ್ತಿರುವುದು ಅಪಾಯಕಾರಿಯಾಗಿದೆ.

ಹೋಟೆಲ್ ಇಡ್ಲಿ ಮತ್ತಿತರ ಆಹಾರಗಳನ್ನು ಪರೀಕ್ಷೆಗೆ ಒಳಪಡಿಸಿದಾಗ ಅದರಲ್ಲಿ ಅಪಾಯಕಾರಿ ಪ್ಲಾಸ್ಟಿಕ್ ಅಂಶಗಳಿರುವುದು ಪತ್ತೆಯಾಗಿದೆ. ಪ್ರಯೋಗಾಲಯದ ಪರೀಕ್ಷೆ ವೇಳೆ ಇಡ್ಲಿ ಮತ್ತಿತರ ಆಹಾರಗಳಲ್ಲಿ ಕಾರ್ಸಿನೋಜೆನಿಕ್ ■ 6ನೇ ಪುಟಕ್ಕೆ



ದಿನೇಶ್ ಗುಂಡೂರಾವ್

ಜಗತ್ತಿನ ಅತೀ ದೊಡ್ಡ ಧಾರ್ಮಿಕ ಉತ್ಸವ ಮಹಾ ಕುಂಭಮೇಳಕ್ಕೆ ತೆರೆ


66 ಕೋಟಿ ಜನರು ಪುಣ್ಯಸ್ನಾನ



ಪ್ರಯಾಗ್‌ರಾಜ್, ಫೆ.27– ಜಗತ್ತು ಕಂಡ ಅತ್ಯಂತ ದೊಡ್ಡ ಉತ್ಸವ, ಭಕ್ತಿ, ಅಧ್ಯಾತ್ಮ, ನಂಬಿಕೆ, ಶ್ರದ್ಧೆ, ತಂತ್ರಜ್ಞಾನದ ಮಹಾ ಸಂಗಮವಾದ ಮಹಾ ಕುಂಭ ಮೇಳಕ್ಕೆ ಬುಧವಾರ ತೆರೆ ಬಿದ್ದಿದೆ. ಕಳೆದ 45 ದಿನಗಳಿಂದ ಜಗತ್ತಿನ ಆಕರ್ಷಣೆಯ ಕೇಂದ್ರವಾಗಿದ್ದ ಕುಂಭಮೇಳ ಕೋಟ್ಯಾಂತರ ಜನರನ್ನು ತನ್ನತ್ತ ಬರಸೆಳೆದು ಇತಿಹಾಸ ಸೃಷ್ಟಿಸಿದೆ. ಜ.13ರಂದು ಆರಂಭವಾಗಿ ಶಿವರಾತ್ರಿಯ ಮಹಾಪರ್ವದವರೆಗೆ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ಬರೋಬ್ಬರಿ 66 ಕೋಟಿ ಜನ ಪುಣ್ಯಸ್ನಾನ ಮಾಡಿದ್ದಾರೆ. ಗಂಗಾ, ಯಮುನಾ ಹಾಗೂ ಗುಪ್ತಗಾಮಿನಿ ಸರಸ್ವತಿಯ ಪವಿತ್ರ ಸಂಗಮದಲ್ಲಿ ಮಿಂದೆದ್ದು ಸಾರ್ಥಕತೆ ಪಡೆದಿದ್ದಾರೆ.

ಪ್ರಧಾನಿಯಿಂದ ಸಾಮಾನ್ಯನವರೆಗೆ: ಹಲವಾರು ಟೀಕೆ, ಅನಿರೀಕ್ಷಿತ ದುರ್ಘಟನೆ, ರಾಜಕೀಯ ಕೆಸರೆರಚಾಟ ಇವೆಲ್ಲವುಗಳ ನಡುವೆಯೂ, ಜನರ ಭಾವನೆಗಳನ್ನು ಬೆಸೆಯುವಲ್ಲಿ ಕುಂಭ ಯಶಸ್ವಿಯಾಗಿದೆ. ಪಕ್ಷಭೇದ ಮರೆತು ದೇಶಾದ್ಯಂತ ರಾಜಕಾರಣಿಗಳು ಮಹಾಕುಂಭದಲ್ಲಿ ಭಾಗವಹಿಸಿದ್ದಾರೆ. ಎಲ್ಲ ಜಾತಿ, ಮತ, ಧರ್ಮಗಳ ಜನ ಪವಿತ್ರ ಸ್ನಾನ ಮಾಡಿದ್ದಾರೆ. ದೇಶದ ರಾಷ್ಟ್ರಪತಿ, ಪ್ರಧಾನಿಯಿಂದ ಸಾಮಾನ್ಯ ರೈತನೊಬ್ಬನವರೆಗೂ ದೇಶದ ಮೂಲೆಮೂಲೆಗಳಿಂದ ಆಗಮಿಸಿದ ಜನತೆ ಕುಂಭಮೇಳ ಯಶಸ್ವಿಗೊಳಿಸಿದ್ದಾರೆ. ದೇಶದ ಉದ್ದಗಲದ ಆಗಮಿಸಿದ ಸಾಮಾನ್ಯ ವ್ಯಕ್ತಿಗೂ ಮಹಾಕುಂಭ ಅನ್ಯಾದೃಶ ಅನುಭವವನ್ನು ಕಟ್ಟಿಕೊಟ್ಟಿದೆ. ಪರಂಪರೆ, ಆಧುನಿಕತೆಯ ■ 6ನೇ ಪುಟಕ್ಕೆ

ಹೊಸ ಆರಂಭಕ್ಕೆ ಮುನ್ನುಡಿ



ನವದೆಹಲಿ, ಫೆ.27– ಕಳೆದ 45 ದಿನಗಳಿಂದ ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆಯುತ್ತಿದ್ದ ಮಹಾಕುಂಭ ಮೇಳಕ್ಕೆ ನಿನ್ನೆ (ಫೆ.26–ಬುಧವಾರ) ಮಹಾ ಶಿವರಾತ್ರಿಯ ಶುಭದಿನದಂದು ಅಧಿಕೃತ ತೆರೆ ಬಿದ್ದಿದೆ. ಇಂದು(ಫೆ.27) ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ತಮ್ಮ ಸಂಪುಟದ ಸಹೋದ್ಯೋಗಿಗಳೊಂದಿಗೆ, ಪ್ರಯಾಗರಾಜ್ ಅರೈಲ್ ಘಾಟ್–ಸಂಗಮ್‌ನಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಈ ಮೂಲಕ ಮಹಾ ಕುಂಭಮೇಳಕ್ಕೆ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರಪ್ರದೇಶ ಬಿಜೆಪಿ ಸರ್ಕಾರ ಅಂತಿಮ ತೆರೆ ಎಳೆದಿದೆ.

ಈ ಮಧ್ಯೆ ಪ್ರಧಾನಮಂತ್ರಿ ನರೇಂದ್ರ ಮೋದಿ ಕೂಡ, ಪ್ರಯಾಗರಾಜ್ ಮಹಾ ಕುಂಭಮೇಳ ಮುಕ್ತಾಯವಾಗಿರುವುದರ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಈ ಕುರಿತು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, ಈ ಬಾರಿಯ ಮಹಾ ಕುಂಭಮೇಳವು ಏಕತೆಯ ಮಹಾ ಯಜ್ಞವಾಗಿತ್ತು ಎಂದು ಹೇಳಿದ್ದಾರೆ. ಪ್ರಯಾಗರಾಜ್ ಮಹಾಕುಂಭ ಮೇಳಕ್ಕೆ ವಿಧ್ಯುಕ್ತ ತೆರೆ ಬಿದ್ದಿರುವ ಹಿನ್ನೆಲೆಯಲ್ಲಿ ■ 6ನೇ ಪುಟಕ್ಕೆ

ಶೌಚಾಲಯ ಗುಂಡಿಯಲ್ಲಿ ಮನುಷ್ಯನ ತಲೆಬುರುಡೆ, ಮೂಳೆಗಳು ಪತ್ತೆ

ಕಾಣೆಯಾಗಿದ್ದ ಮನೆ ಮಾಲೀಕನ ಪಳಯುಳಿಕೆ ಶಂಕೆ




ಶೌಚಾಲಯ ಗುಂಡಿಯಲ್ಲಿ ಬಿದ್ದಿರುವ ಮನುಷ್ಯನ ಬುರುಡೆ, ಮೂಳೆಗಳು.

ಹೆಚ್.ಡಿ.ಕೋಟೆ, ಫೆ.27(ಆರ್‌ಕೆ)– ಹೆಚ್.ಡಿ.ಕೋಟೆ ತಾಲೂಕಿನ ಜೊಂಪನ ಹಳ್ಳಿಯ ಚಿನ್ನಪ್ಪಪಾಳ್ಯ ಗ್ರಾಮದ ಶೌಚಾಲಯ ಗುಂಡಿಯಲ್ಲಿ ಮನುಷ್ಯನ ಬುರುಡೆ, ಮೂಳೆಗಳು ಪತ್ತೆಯಾಗಿವೆ.

ಗ್ರಾಮದ ದಾಸಪ್ರಕಾಶ್ ಎಂಬುವರ ಮನೆಯ ಹಿತ್ತಲಿನ ಶೌಚಾಲಯದ ಗುಂಡಿಯಲ್ಲಿ ಮನುಷ್ಯನ ತಲೆಬುರುಡೆ, ಮೂಳೆಗಳು ಪತ್ತೆಯಾಗಿದ್ದು, ಶೌಚಾಲಯದ ಗುಂಡಿ ಕುಸಿದು ಬಿದ್ದ ಹಿನ್ನೆಲೆಯಲ್ಲಿ ದುರಸ್ತಿ ಕಾರ್ಯ ನಡೆಸಲು ಮನೆ ಮಾಲೀಕರು ಮುಂದಾದಾಗ ಅಲ್ಲಿ ಮಾನವನ ಈ ಪಳಯುಳಿಕೆ ಪತ್ತೆಯಾಗಿವೆ. ಕಾಮಗಾರಿ ನಿರತರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆ ಠಾಣೆ ಇನ್‌ಸ್ಪೆಕ್ಟರ್ ಶಬೀರ್ ಹುಸೇನ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿದರು.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದು, ಕಳೆದ 7 ತಿಂಗಳ ಹಿಂದೆ ದಾಸಪ್ರಕಾಶ್ ಎಂಬುವರು ಕಾಣೆಯಾಗಿದ್ದು, ಈವರೆಗೆ ಪತ್ತೆಯಾಗಿರಲಿಲ್ಲ. ಈಗ ತಲೆಬುರುಡೆ ಮತ್ತು ಮೂಳೆಗಳು ಪತ್ತೆಯಾಗಿರುವುದರಿಂದ ದಾಸಪ್ರಕಾಶ್ ಅವರದೇ ಇರಬಹುದೆಂದು ಶಂಕಿಸಲಾಗಿದೆ. ಕಳೇಬರದ ಈ ಸ್ಯಾಂಪಲ್‌ಗಳನ್ನು ಬೆಂಗಳೂರಿನ ಪ್ರಯೋಗಾಲಯಕ್ಕೆ ರವಾನೆ ಮಾಡಲಾಗಿದ್ದು, ವರದಿಗಾಗಿ ನಿರೀಕ್ಷಿಸಲಾಗಿದೆ ಎಂದು ಇನ್‌ಸ್ಪೆಕ್ಟರ್ ಶಬೀರ್ ಹುಸೇನ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ರೈತರಿಂದ ನೇರವಾಗಿ ಗ್ರಾಹಕರಿಗೆ ಹಣ್ಣು, ತರಕಾರಿ, ಸೊಪ್ಪು ಪೂರೈಕೆ

ಕಿಸಾನ್ ಬಂಡಿಗೆ ಉತ್ತಮ ಪ್ರತಿಕ್ರಿಯೆ

ಮೈಸೂರು,ಫೆ.27(ಎಂಟಿವೈ)– ರೈತರಿಂದ ತಾಜಾ ಹಣ್ಣು, ತರಕಾರಿ ಹಾಗೂ ವಿವಿಧ ಬಗೆಯ ಸೊಪ್ಪನ್ನು ಗ್ರಾಹಕರಿಗೆ ತಲುಪಿಸಲು 'ಕಿಸಾನ್ ಬಂಡಿ' ಆರಂಭಿಸಿರುವ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ರೈತರಿಗೆ ನೆರವಾಗುತ್ತಿದೆ ಎಂದು ಕಿಸಾನ್ ಬಂಡಿ ಸಂಸ್ಥೆಯ ಚೇತನ್ ರಂಗಸ್ವಾಮಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಿಸಾನ್ ಬಂಡಿ ಹಾಗೂ ಎಕೋ ಗ್ರೀನ್ ಯೂನಿಟ್ ಸಂಸ್ಥೆ ತಾಜಾ ತರಕಾರಿ, ಸೊಪ್ಪನ್ನು ಗ್ರಾಹಕರಿಗೆ ತಲುಪಿಸುವ ವ್ಯವಸ್ಥೆ ಆರಂಭಿಸಿದೆ. ಕೃಷಿ ಕ್ಷೇತ್ರವನ್ನು ಉತ್ತೇಜಿಸುವ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಮುಂದಾಗಿದೆ. ರೈತರಿಂದ ನೇರವಾಗಿ ತರಕಾರಿ, ಸೊಪ್ಪು ಖರೀದಿಸಿ, ಅವುಗಳನ್ನು ಅಪಾರ್ಟ್‌ಮೆಂಟ್ ಹಾಗೂ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸ್ಥಳದಲ್ಲಿ ಈ ಕಿಸಾನ್ ಬಂಡಿ ವಾಹನದಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದರು.


ಸುದ್ದಿಗೋಷ್ಠಿಯಲ್ಲಿ ಕಿಸಾನ್ ಬಂಡಿ ಸಂಸ್ಥೆಯ ಎಸ್.ಕೆ.ಬಾಬು, ಮೋಹನ್ ಕುಮಾರ್, ದಿವ್ಯಾ ಉಪಸ್ಥಿತರಿದ್ದರು.

ಭೂಮಿ ನೀಡಿದ ರೈತ ಕುಟುಂಬದವರಿಗೆ ಉದ್ಯೋಗ ನೀಡದ ಕೈಗಾರಿಕೆಗಳಿಗೆ 'ನೀರು ಬಂದ್'!

ಮೈಸೂರು, ಫೆ.27(ಎಂಟಿವೈ)– ಕೈಗಾರಿಕೆಗಳಿಗೆ ಭೂಮಿ ನೀಡಿದ ರೈತರ ಕುಟುಂಬದ ಸದಸ್ಯರಿಗೆ ನಿಯಮಾನುಸಾರ ಉದ್ಯೋಗ ನೀಡದ ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳಿಗೆ ಮಾ.5ರಂದು ಕುಡಿಯುವ ನೀರು ಸರಬರಾಜು ಮಾಡುವ ವಾಲ್ವ್ ಬಂದ್ ಮಾಡುವ ಹೋರಾಟ ನಡೆಸಲು ನಿರ್ಧರಿಸಲಾಗಿದೆ ಎಂದು ಜನಾಂದೋಲನಗಳ ಮಹಾಮೈತ್ರಿ ಸಂಘಟನೆಯ ರಾಜ್ಯ ಸಂಚಾಲಕ ಉಗ್ರನರಸಿಂಹೇಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಐಎಡಿಬಿಗೆ ಭೂಮಿ ನೀಡಿದ ರೈತರ ಹಕ್ಕುಗಳ ಹೋರಾಟ ವೇದಿಕೆ ವತಿಯಿಂದ ಕೈಗಾರಿಕೆ ಸ್ಥಾಪನೆಗೆ ಭೂಮಿ ನೀಡಿದ ರೈತ ಕುಟುಂಬದ ಸದಸ್ಯರಿಗೆ ನಿಯಮಾನುಸಾರ ಉದ್ಯೋಗಾವಕಾಶ ಕಲ್ಪಿಸುವಂತೆ ಒತ್ತಾಯಿಸಿ ಹಲವು ಬಾರಿ ಹೋರಾಟ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಹಲವಾರು ಬಾರಿ ಸಭೆ ನಡೆದರೂ ಕಂಪನಿಗಳು ನಿರ್ಲಕ್ಷಿಸಿರುವ ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕೆಗಳಿಗೆ ಕುಡಿಯುವ ನೀರು ಪೂರೈಸುವ ವಾಲ್ವ್ ಬಂದ್ ಮಾಡುವ ಪ್ರತಿಭಟನೆ ರೈತರು ಹಮ್ಮಿಕೊಳ್ಳಲಿದ್ದಾರೆ. ಯುನೈಟೆಡ್ ಬ್ರಿವರೀಸ್, ಕಾರ್ಲ್ಸ್ ಬರ್ಗ್, ಏಷಿಯನ್ ಪೈಂಟ್ಸ್, ಐಟಿಸಿ, ಪಾರ್ಲೆ ಆಗ್ರೋ, ಚಿಯರ್ ಬ್ರಿವರೀಸ್, ಗ್ರೋ ಮ್ಯಾಕ್ಸ್ ಇಂಡಿಯಾ, ಸ್ಟ್ರಾಟೆಜಿ ಆಟೋಮೇಷನ್ ಸಲ್ಯೂಷನ್ ಮೊದಲಾದವು ಉದ್ಯೋಗ ನೀಡಿಕೆ ನಿಯಮ ಉಲ್ಲಂಘಿಸಿವೆ. ಈಗಾಗಲೇ ಫಲವತ್ತಾದ ಭೂಮಿ ಕಳೆದುಕೊಂಡ ರೈತರಿಗೆ ಅನ್ಯಾಯವಾಗಿದೆ. ಈ ಕುರಿತು ಹೋರಾಟ ನಡೆಸಿದ ವೇಳೆ ಕೇವಲ 22 ಮಂದಿಯ ಪಟ್ಟಿ ಅಂತಿಮಗೊಳಿಸಲಾಗಿದೆ. ಆದರೆ ಇನ್ನೂ 160ರಷ್ಟು ಮಂದಿಗೆ ಉದ್ಯೋಗ ನೀಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹೋರಾಟ ನಡೆಸಿದಾಗ ಹಲವಾರು ಸಭೆ ಕರೆದು ಮಾತುಕತೆ ನಡೆಸಿ ಭರವಸೆ ನೀಡಿದ್ದರೂ ಈಡೇರಿಸಿಲ್ಲ. ಹೀಗಾಗಿ ಈಗ ಉಗ್ರ ಹೋರಾಟ ನಡೆಸುತ್ತಿದ್ದು, ಒಂದು ವೇಳೆ ಅಂದು ಏನಾದರೂ ಅನಾಹುತ ಸಂಭವಿಸಿದರೆ ಅದಕ್ಕೆ ಸಂಬಂಧಿಸಿದವರೇ ಹೊಣೆಯಾಗುತ್ತಾರೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ರೈತ ಮುಖಂಡರಾದ ಹೆಚ್.ಎಂ. ಬಸವರಾಜ್, ಬೊಕ್ಕಳ್ಳಿ ನಂಜುಂಡ ಸ್ವಾಮಿ, ಉಮೇಶ್, ರವಿ ಹಾಗೂ ಭೂಮಿ ನೀಡಿದ ಕುಟುಂಬಗಳ ಮಹಿಳೆಯರು ಇದ್ದರು.

ಪ್ರೊ.ಆರ್.ಎನ್.ಅಚ್ಯುತ್ ಇನ್ನಿಲ್ಲ




ಮೈಸೂರು, ಫೆ.27(ಆರ್‌ಕೆ)– ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಮೈಸೂರು ವಿಶ್ವವಿದ್ಯಾನಿಲಯದ ಪ್ರಾದೇಶಿಕ ಯೋಜನೆ, ಅಭಿವೃದ್ಧಿ ಅಧ್ಯಯನ ಸಂಸ್ಥೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಆರ್.ಎನ್.ಅಚ್ಯುತ್ (75) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಅವಿವಾಹಿತರಾದ ಅವರು ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಅವರ ಪಾರ್ಥಿವ ಶರೀರವನ್ನು ಇಂದು ಜೆಎಸ್‌ಎಸ್ ಮೆಡಿಕಲ್ ಕಾಲೇಜಿಗೆ ದಾನ ಮಾಡಲಾಯಿತು ಎಂದು ಸಂಬಂಧಿಕರು ತಿಳಿಸಿದ್ದಾರೆ.

ರಾಮಸ್ವಾಮಿ ಕನಿವ್ (ಕೊಡಗು) ನರಸಿಂಹ ಶೆಟ್ಟಿ ಅಚ್ಯುತ್ ಅವರು ಹಿಂದುಳಿದ ವರ್ಗಗಳ ಸಮುದಾಯದಿಂದ ಬಂದವರಾಗಿದ್ದು, ಅವರ ತಂದೆ ಬಿಜಾಪುರ ಜಿಲ್ಲೆಯಲ್ಲಿ ಶಿರಸ್ತೇದಾರರಾಗಿ ಸೇವೆ ಸಲ್ಲಿಸಿದ್ದರು. ಉನ್ನತ ವ್ಯಾಸಂಗ ಕ್ಕಾಗಿ ಮೈಸೂರಿಗೆ ಬರುವ ಮೊದಲು, ಪ್ರೊ.ಅಚ್ಯುತ್ ಅವರು ಬಿಜಾಪುರ (ಈಗ ವಿಜಯಪುರ) ದಲ್ಲಿ ಶಾಲಾ ಶಿಕ್ಷಣ ಪೂರೈಸಿದ್ದರು. ಮಹಾರಾಜ ಕಾಲೇಜಿನಲ್ಲಿ ಪದವಿ ಗಳಿಸಿದ್ದ ಅವರು 1970ರಲ್ಲಿ ಜಿಯೋಗ್ರಫಿಯ ಸ್ನಾತಕೋತ್ತರ ಪದವಿಯಲ್ಲಿ 3ನೇ ರ್‍ಯಾಂಕ್ ಗಳಿಸಿದ್ದರು. ನಂತರ ಖಾರಗ್‌ಪುರನ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಸೇರಿದ್ದ ಪ್ರೊ.ಅಚ್ಯುತ್ ಅವರು, ರೀಜನಲ್ ಪ್ಲಾನಿಂಗ್ ವಿಷಯದಲ್ಲಿ ಎಂ.ಟೆಕ್ ಮಾಡಿದರಲ್ಲದೆ, ನಂತರ 1972ರಲ್ಲಿ ರೀಜನಲ್ ಪ್ಲಾನಿಂಗ್ ವಿಷಯದ ಉಪನ್ಯಾಸಕರಾಗಿ ದಿ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್‌ಗೆ ಸೇರಿದ್ದರು.

1978ರಲ್ಲಿ ಜಪಾನಿನ ಯುನೈಟೆಡ್ ಸೆಂಟರ್ ಫಾರ್ ರೀಜನಲ್ ಡೆವಲಪ್‌ಮೆಂಟ್‌ನಲ್ಲಿ 3 ತಿಂಗಳ ಕಾಲ ಸಂಶೋಧನೆ ಮಾಡಿದ್ದ ಪ್ರೊ.ಅಚ್ಯುತ್ ಅವರು 1978ರಿಂದ 1979ರವರೆಗೆ ಇಸ್ರೇಲಿನ ರೆಹವೋಟ್‌ನಲ್ಲಿ ಗ್ರಾಮೀಣಾಭಿವೃದ್ಧಿ ಯೋಜನೆ ವಿಷಯದಲ್ಲಿ ಉನ್ನತ ತರಬೇತಿ ಪಡೆಯಲು ಆಯ್ಕೆಯಾಗಿದ್ದರು.

ಎನ್.ಆರ್.ಸುರೇಶ್ ನಿಧನ



ಮೈಸೂರು, ಫೆ.27– ನಗರದ ಯಾದವಗಿರಿ ನಿವಾಸಿ ಎನ್.ಆರ್. ಸುರೇಶ್(69) ಅವರು ಫೆ.24ರಂದು ನಿಧನರಾದರು. ಇವರು ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ನಗುವನಹಳ್ಳಿಯ ಜಮೀನಿನಲ್ಲಿ ಬುಧವಾರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಬೆಳಗಾವಿಯಲ್ಲಿ ಕನ್ನಡಿಗರ ಮೇಲೆ ಹಲ್ಲೆಗೆ ವಿರೋಧ

ಮೈಸೂರಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ಪ್ರತಿಭಟನೆ



ಬೆಳಗಾವಿಯಲ್ಲಿ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಮೇಲೆ ಹಲ್ಲೆ ಮಾಡಿ ಭಾಷೆ ವಿಚಾರವಾಗಿ ಖ್ಯಾತೆ ತೆಗೆದಿರುವುದನ್ನು ಖಂಡಿಸಿ ಮೈಸೂರಿನಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.27(ಜಿಎ)–ಬೆಳಗಾವಿಯಲ್ಲಿ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಮೇಲೆ ಹಲ್ಲೆ ಮಾಡಿ ಭಾಷೆ ವಿಚಾರವಾಗಿ ಖ್ಯಾತೆ ತೆಗೆದಿರುವುದನ್ನು ಖಂಡಿಸಿ ಮೈಸೂರಿನ ಅಗ್ರಹಾರದ ವೃತ್ತದಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮಹಾರಾಷ್ಟ್ರ ಅಭಿವೃದ್ಧಿ ಮಂಡಳಿಯನ್ನು ರದ್ದುಗೊಳಿಸಿ, ಮರಾಠಿ ಪುಂಡರಿಗೆ ಧಿಕ್ಕಾರ, ಬೇಕೇ ಬೇಕು ನ್ಯಾಯ ಬೇಕು, ಕನ್ನಡ ವಿರೋಧಿಗಳಿಗೆ ಧಿಕ್ಕಾರ, ಎಂಇಎಸ್ ಪುಂಡರಿಗೆ ಧಿಕ್ಕಾರ, ಕನ್ನಡ ವಿರೋಧಿಗಳಿಗೆ ಧಿಕ್ಕಾರ, ಬೆಳಗಾವಿ ರಾಜಕಾರಣಿಗಳಿಗೆ ಧಿಕ್ಕಾರ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ವೇದಿಕೆಯ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ಮಾತನಾಡಿ, ರಾಜ್ಯದಲ್ಲಿ ಬಹಳಷ್ಟು ಮಂದಿ ಮರಾಠಿಗಳು ಉದ್ಯಮ ನಡೆಸುತ್ತಿದ್ದಾರೆ. ಅವರಿಗೆ ಈವರೆಗೂ ಯಾವುದೇ ತೊಂದರೆಯಾಗಿಲ್ಲ. ಮರಾಠಿಗರು ಏಕೆ ಈ ರೀತಿ ಕನ್ನಡಿಗರ ಮೇಲೆ ಹಲ್ಲೆ ಮಾಡುತ್ತಿದ್ದೀರಾ? ನಾವಿಬ್ಬರು ಅಣ್ಣ–ತಮ್ಮಂದಿರಂತೆ ಸೌಹಾರ್ದತೆಯಿಂದ ಇರಬೇಕು. ಈ ರೀತಿಯ ಘಟನೆ ಮತ್ತೆ ಮರುಕಳಿಸಿದರೆ, ಮಹಾರಾಷ್ಟ್ರ ಬಸ್‌ಗಳಿಗೆ ಬೆಂಕಿ ಹಚ್ಚಬೇಕಾಗುತ್ತದೆ ಎಂದು ಎಚ್ಚರಿಸಿದರು.


ಬೆಳಗಾವಿ ಭಾಗದಲ್ಲಿರುವ ರಾಜಕಾರಣಿಗಳಿಂದ ಕನ್ನಡಿಗರಿಗೆ ಈ ಸ್ಥಿತಿ ನಿರ್ಮಾಣವಾಗಿದ್ದು, ಕನ್ನಡಿಗರ ಮತದಿಂದ ಗೆದ್ದು, ಮರಾಠಿಯಲ್ಲಿ ಭಾಷಣ ಮಾಡುವ ಮೂಲಕ ಅವರನ್ನು ಪ್ರಚೋದನೆಗೊಳಿಸುತ್ತಿದ್ದೀರಾ, ಅಧಿಕಾರಿಗಳು ಅದಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆ. ಮತ್ತೊಂದೆಡೆ ಮರಾಠ ಪ್ರಾಧಿಕಾರವನ್ನು ಮಾಡಿದ್ದಾರೆ. ಅದನ್ನು ಕೂಡಲೇ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಮರಾಠಿಗರ ದೌರ್ಜನ್ಯ ಇಂದಿನಿಂದ ಆರಂಭವಾಗಿಲ್ಲ. ಏಕೀಕರಣವಾಗುವುದಕ್ಕಿಂತ ಮುಂಚಿನಿಂದ ಇದೆ. ಈ ಬಗ್ಗೆ ಕರ್ನಾಟಕ ಏಕೀಕರಣವಾಗುವ ಮೊದಲೇ ಆಲೂರು ವೆಂಕಟರಾಯರು ಮರಾಠಿಗರ ವಿರುದ್ಧ ಧ್ವನಿ ಎತ್ತಿ ಪ್ರತಿಭಟಿಸಿದರು. ಇಂದಿನ ಪರಿಸ್ಥಿತಿಗೆ ರಾಜಕಾರಣಿಗಳ ಇಚ್ಛಾಶಕ್ತಿ ಕೊರತೆ ಕಾರಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮಹಾಜನ್ ಆಯೋಗದ ವರದಿ ಪ್ರಕಾರ ಬೆಳಗಾವಿ ನಮ್ಮ ಕರ್ನಾಟಕದ ಅವಿಭಾಜ್ಯ ಅಂಗವಾಗಿದೆ. ರಾಜಕಾರಣಿಗಳು ಗಮನ ಹರಿಸಲಿಲ್ಲವಾದರೆ ಬೆಳಗಾವಿ ಕಳೆದುಕೊಳ್ಳಬೇಕಾಗುತ್ತದೆ. ಕನ್ನಡಿಗರಿಗೆ ಕರ್ನಾಟಕದಲ್ಲಿ ರಕ್ಷಣೆ ಇಲ್ಲವಾದರೆ ಹೇಗೆ? ರಾಜಕಾರಣಿಗಳು ಬೆಳಗಾವಿಯನ್ನು ಮಾರಿಕೊಳ್ಳುತ್ತಾರೆ. ಕನ್ನಡದ ಬಗ್ಗೆ ಧ್ವನಿ ಎತ್ತುವವರು ಯಾರು ಇಲ್ಲ. ರಾಜಕಾರಣಿಗಳಿಂದ ಹೊಡೆದು ಆಳುವ ಕೆಲಸ ನಡೆಯುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಡಿಪಿಕೆ ಪರಮೇಶ್, ಸಿಂಧುವಳ್ಳಿ ಶಿವಕುಮಾರ್, ನಂಜುಂಡ, ಅನುರಾಜ್‌ಗೌಡ, ಮಂಜುಳ, ಕೃಷ್ಣಪ್ಪ, ರಾಧಾಕೃಷ್ಣ, ಭಾಗ್ಯ, ಕಿರಣ್, ರಾಮು, ಮಹದೇವಸ್ವಾಮಿ, ಗಿರೀಶ್, ರಾಜು, ಶ್ರೀನಿವಾಸ್, ವಿಷ್ಣು ಮತ್ತಿತರರು ಉಪಸ್ಥಿತರಿದ್ದರು.

ಹುಟ್ಟುಹಬ್ಬದ ಶುಭಾಶಯ



ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ (ಬಲತುದಿ) ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಬೆಂಗಳೂರು ನಿವಾಸದಲ್ಲಿ ಭೇಟಿ ಮಾಡಿ, 82ನೇ ಹುಟ್ಟುಹಬ್ಬದ ಶುಭಾಶಯ ಕೋರಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಶಂಕರ್‌ರಾವ್, ಸತೀಶ್, ತಮ್ಮೇಶ್‌ಗೌಡ, ಶರಣ್ ತಳ್ಳಿಕೆರೆ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

8ನೇ ತರಗತಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಫೆ.27–ಜಂಟಿ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜಾತಿಯ ಅನೈರ್ಮಲ್ಯಕರ ವೃತ್ತಿಯಲ್ಲಿ ತೊಡಗಿರುವ ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾವಂತ ಗಂಡು ಮಕ್ಕಳಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಶ್ರೀ ರಾಮಕೃಷ್ಣ ವಿದ್ಯಾಶಾಲೆ ಮೈಸೂರು ಇಲ್ಲಿಗೆ 8ನೇ ತರಗತಿಗಾಗಿ ಪ್ರವೇಶ ಪರೀಕ್ಷೆ ಮುಖಾಂತರ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅರ್ಜಿಗಳನ್ನು ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಕಚೇರಿಯಲ್ಲಿ ಅಥವಾ ಆಯಾಯ ತಾಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಇಲ್ಲಿಗೆ ಮಾ.25ರೊಳಗೆ ಅರ್ಜಿ ಸಲ್ಲಿಸುವುದು. ಏ.12 ಬೆಳಿಗ್ಗೆ 10 ಗಂಟೆಗೆ ಪ್ರವೇಶ ಪರೀಕ್ಷೆಯನ್ನು ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಯಾದವಗಿರಿ ಮೈಸೂರು ಇಲ್ಲಿ ನಡೆಸಲಾಗುವುದು. **ಸಲ್ಲಿಸಬೇಕಾಗಿರುವ ದಾಖಲೆಗಳು:** ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, 7ನೇ ತರಗತಿ ಅಂಕಪಟ್ಟಿ, ಅಭ್ಯರ್ಥಿಯ ಭಾವಚಿತ್ರ, ಆಧಾರ್ ಕಾರ್ಡ್, ವಿಳಾಸ ದೃಢೀಕರಣ ಪತ್ರದೊಂದಿಗೆ ಸಲ್ಲಿಸಬೇಕು.

ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು,ಫೆ.27–ಮೈಸೂರಿನ ಸುರುಚಿ ರಂಗಮನೆಯ ಕಲಾಸುರುಚಿಯಲ್ಲಿ ಮಾ.1ರಂದು ಸಂಜೆ 4.30ಕ್ಕೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ನಡೆಯಲಿದೆ. ನಿವೃತ್ತ ಪ್ರಾಂಶುಪಾಲೆ ಹಾಗೂ ವಿಜ್ಞಾನ ಲೇಖಕಿ ಡಾ.ಎಸ್.ಸುಧಾ ಕಥೆ ಹೇಳುವರು. ಮಾಹಿತಿಗೆ ಮೊ.9243581097 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.


ನರಸಿಂಹರಾಜ ಮೊಹಲ್ಲಾದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ತನ್ವೀರ್ ಸೇಠ್ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ತನ್ವೀರ್ ಸೇಠ್ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಫೆ.27(ಜಿಎ)–ಮೈಸೂರಿನ ನರಸಿಂಹರಾಜ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ತನ್ವೀರ್ ಸೇಠ್ ಗುರುವಾರ ಗುದ್ದಲಿ ಪೂಜೆ ನೆರವೇರಿಸಿದರು. ಎಸ್‌ಎಫ್‌ಸಿ ಯೋಜನೆ ಅನುದಾನದಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಿವಾಜಿ ಮುಖ್ಯ ರಸ್ತೆ ಜಿಲಾನಿ ಪೆಟ್ರೋಲ್ ಬಂಕ್‌ನಿಂದ ಎಸ್‌ಬಿಎಂವರೆಗೆ ಹಾಗೂ ರೇಡಿಯೋ ಪಾರ್ಕ್ ಅಕ್ಕಪಕ್ಕದ ಅಡ್ಡ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ವಾರ್ಡ್ ನಂ.15ರ ವ್ಯಾಪ್ತಿಯ ಅಡ್ಡ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ. 11ರ ವ್ಯಾಪ್ತಿಯ ಕೈಫ್ ಮಸೀದಿ ಹಾಗೂ ದಾರು ಸಲಾಂ ಮಸೀದಿ ಸುತ್ತಮುತ್ತ ಅಡ್ಡ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ತನ್ವೀರ್‌ಸೇಠ್ ಚಾಲನೆ ನೀಡಿದರು. ಈ ವೇಳೆ ಮುಖಂಡರಾದ ಸೈಯದ್ ಹಸ್ರತ್ ಉಲ್ಲಾ, ಆರೀಫ್ ಹುಸೇನ್, ಸೈಯದ್ ಇಕ್ಬಾಲ್, ವಾಸೀಂ ಖಾನ್, ಶೆಹನ್ ಷಾ, ರಸೂಲ್, ಪ್ರದೀಪ್ ಚಂದ್ರ, ಇರ್ಫಾನ್ ಪಾಷ, ಶೌಕತ್ ಅಲಿಖಾನ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.02.2025 ಶುಕ್ರವಾರ, ಮಳೆ ನಕ್ಷತ್ರ: ಶತಭಿಷ, 19.02.2025 ರಿಂದ 03.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ, ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಹಸಿರಂಬುವಿನ ಗಾಯಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ಕಾಲೇಜು :** ಬಜೆಟ್ ವಿಶ್ಲೇಷಣೆ, ಉದ್ಘಾಟನೆ : ವಿಶ್ರಾಂತ ಕುಲಪತಿ ಪ್ರೊ. ಟಿ.ಕೆ. ಉಮೇಶ್, ವಿಶೇಷ ಅತಿಥಿಗಳು : ಕಾರ್ಯದರ್ಶಿ ಆರ್. ದಿನೇಶ್, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ. ಸತ್ಯನಾರಾಯಣ, ನಿವೃತ್ತ ಪ್ರಿನ್ಸಿಪಾಲ್ ಪ್ರೊ. ಬಿ.ಎಂ. ಕುಮಾರಸ್ವಾಮಿ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ವೆಂಕಟಕೃಷ್ಣಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ :** ಶಿವರಾತ್ರಿ ಅಮಾವಾಸ್ಯೆ ಪ್ರಯುಕ್ತ ಕಾಳಸರ್ಪ ಶಾಂತಿ, ಮೃತ್ಯುಂಜಯ ಹೋಮ, ಮಾಂಗಲ್ಯ ಮಂಗಳ ಚಂಡಿಕಾ ಹೋಮ, ಸ್ವಯಂವರ ಪಾರ್ವತಿ ಹೋಮ, ದಕ್ಷಿಣಾಮೂರ್ತಿ, ಧನ್ವಂತರಿ ಹೋಮ, ಸುಬ್ರಮಣ್ಯ ಕುಜ ಶಾಂತಿ ಹೋಮ, ನವಗ್ರಹ ಹೋಮ, ಸ್ಥಳ: ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ, ದೇವರಾಜ ಮೊಹಲ್ಲಾ.

■ **ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂತ್ರ ಫಾರ್ ಚೇಂಜ್ :** ಜಿಲ್ಲಾ ಮಟ್ಟದ ವಿಜ್ಞಾನ ಕಲಿಕೋಪಕರಣಗಳ ಮೇಳ, ಅಧ್ಯಕ್ಷತೆ : ಪ್ರಾಂಶುಪಾಲ ಸಿ.ಆರ್. ನಾಗರಾಜಯ್ಯ, ಮುಖ್ಯ ಅತಿಥಿಗಳು : ಹೆಚ್.ಎನ್. ಗೀತಾಂಬ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಟಿ. ಜವರೇಗೌಡ, ಪ್ರಧಾನ ಭಾಷಣ : ಹಿರಿಯ ವಿಜ್ಞಾನಿ ಡಾ. ತಿಪ್ಪೇಸ್ವಾಮಿ, ಸ್ಥಳ: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಸಂತ ಮಹಲ್, ಬೆಳಗ್ಗೆ 10ಕ್ಕೆ.

■ **ಎಂ.ಕೆ. ರಾಮಸ್ವಾಮಿರವರ ಸ್ನೇಹ ಬಳಗ :** ವಿಜ್ಞಾನ ಲೇಖಕ ಎಂ.ಕೆ. ರಾಮಸ್ವಾಮಿ ಅವರಿಗೆ 75ನೇ ವಸಂತಾಚರಣೆಯ ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ವಿಧಾನಪರಿಷತ್ ಮಾಜಿ ಸಭಾಪತಿ ಮರಿತಿಬ್ಬೇಗೌಡ, ಉದ್ಘಾಟನೆ : ಕರಾಮುವಿವಿ ವಿಶ್ರಾಂತ ಕುಲಪತಿ ಡಾ. ಎನ್.ಎಸ್. ರಾಮೇಗೌಡ, ಅಭಿನಂದನಾ ನುಡಿ : ಪದವಿಪೂರ್ವ ಶಿಕ್ಷಣ ಇಲಾಖೆ ವಿಶ್ರಾಂತ ನಿರ್ದೇಶಕ ಬಿ.ಎಸ್. ಶ್ರೀಧರ ರಾಜೇ ಅರಸ್, ಅಭಿನಂದಿತರು : ಶೈಕ್ಷಣಿಕ ನಿರ್ದೇಶಕ ಎಂ.ಕೆ. ರಾಮಸ್ವಾಮಿ, ಸ್ಥಳ: ಎಸ್.ಪಿ. ಭಟ್ ಸಭಾಂಗಣ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮಲಬಾರ್ ಚಾರಿಟಬಲ್ ಟ್ರಸ್ಟ್ :** ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಸಂಸ್ಥೆಯ ಸಿಎಸ್‌ಆರ್ ಯೋಜನೆ ಅಡಿಯಲ್ಲಿ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಅಪರಾಧ ಮತ್ತು ಸಂಚಾರ ಉಪ ಪೊಲೀಸ್ ಆಯುಕ್ತ ಎಸ್. ಜಾಹ್ನವಿ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ. ರಂಗೇಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಿ. ಬಸವರಾಜು, ಸ್ಥಳ: ಕಲಾಮಂದಿರ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಪ್ರತಿಭಾನ್ವೇಷಣಾ ಸಮಾರಂಭ, ಸಾನ್ನಿಧ್ಯ : ಶ್ರೀನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ವಿಶ್ವ ಕಪ್ ಚಾಂಪಿಯನ್ ಖೋ ಖೋ ಆಟಗಾರ್ತಿ ಕು. ಬಿ. ಚೈತ್ರಾ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಶಾರದಾ, ಸಂಚಾಲಕರಾದ ಶ್ರೀಮತಿ ಎಂ.ಎಸ್. ಸಂಧ್ಯಾರಾಣಿ, ಸ್ಥಳ: ಶ್ರೀನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಅಮಾವಾಸ್ಯೆ ವಿಶೇಷ ಪೂಜೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾ.

■ **ಮೈಸೂರು ವಿಶ್ವವಿದ್ಯಾನಿಲಯ :** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಇಸ್ರೋ ವಿಜ್ಞಾನಿ ಡಾ.ವಿ.ರಾಧಾಕೃಷ್ಣ ಅವರಿಂದ 'ವಿಜ್ಞಾನ ದಿನ' ಕುರಿತು ವಿಶೇಷ ಉಪನ್ಯಾಸ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಮೈಸೂರು ವಿವಿ ಕ್ರಾಫರ್ಡ್ ಭವನದ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ :** ವಿಶೇಷ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮ, ಸಂದರ್ಶಕ ಪ್ರಾಧ್ಯಾಪಕ ಪ್ರೊ. ರಹಮತ್ ತರೀಕೆರೆ ಅವರಿಂದ ಸಂಸ್ಕೃತಿ ನಿರ್ಮಾಣದಲ್ಲಿ ಪ್ರಸಾರಾಂಗದ ಪಾತ್ರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಸ್ಥಳ: ಕುವೆಂಪು ಸಭಾಂಗಣ ಪ್ರಸಾರಾಂಗ, ಮಧ್ಯಾಹ್ನ 3ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು :** ನರ್ಸಿಂಗ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ. ಬೆಟಸೂರ ಮಠ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಮಧ್ಯಾಹ್ನ 3ಕ್ಕೆ

■ **ಶ್ರೀ ಕೃಷ್ಣ ಗಾನಸಭಾ :** ಮಹಾರಾಜ ಶ್ರೀ 10ನೇ ಚಾಮರಾಜ ಒಡೆಯರ್ ಜಯಂತಿ, ಉದ್ಘಾಟನೆ : ಕರಾಮುವಿವಿ ಕುಲಪತಿ ಡಾ. ಶರಣಪ್ಪ ವಿ. ಹಲಸೆ, ವಿದುಷಿ ಗಮಕಿ ಡಾ. ಪದ್ಮಾವತಿ ನರಸಿಂಹನ್ ಅವರಿಂದ ಭೀಷ್ಮ ಪರ್ವ ಕುರಿತು ವಾಚನ, ವಿದ್ವಾನ್ ಡಾ. ಎಚ್.ವಿ. ನಾಗರಾಜರಾವ್ –ವ್ಯಾಖ್ಯಾನ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು:** ತ್ರಿಮೂರ್ತಿ ಶಿವ ಜಯಂತಿ ಮಹೋತ್ಸವದ ಪ್ರಯುಕ್ತ ಜ್ಞಾನ ವಿಜ್ಞಾನ ದಿವ್ಯ ದರ್ಶನ ಮೇಳ, ಸಂಜೆ 6.15 ರಿಂದ ವಲ್ಲಭಬಾಯಿ ನಗರದ ರಶ್ಮಿ ಅವರಿಂದ ಸಂತುಷ್ಟತೆ ಕುರಿತು ಚಿಂತನ ಕಾರ್ಯಕ್ರಮ, ಸಂಜೆ 6.45 ರಿಂದ ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಸಂಜೆ 7.45 ರಿಂದ ಅಮ್ಮ ರಾಮಚಂದ್ರ ಅವರಿಂದ ಜಾನಪದ ಹಾಡುಗಳು, ಸ್ಥಳ: ಭಾರತೀಯ ವಿದ್ಯಾಭವನದ ಮುಂಭಾಗದ ನಿವೇಶನ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ:ಡಾ.ಕಲೀಂವುಲ್ಲ, ಪ್ರಸ್ತುತಿ:ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಸಿ.ವಿಶ್ವನಾಥ್, ಎಸ್. ಸಂಗೀತಾ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 KABHI–ಕರ್ನಾಟಕ–ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ–ವಿಶೇಷ ಅಗತ್ಯವುಳ್ಳ ಮಕ್ಕಳ ದಂತ ರಕ್ಷಣೆ ಕುರಿತು ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯದ ಮಕ್ಕಳ ದಂತ ಚಿಕಿತ್ಸಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಹೆಚ್.ಪಿ. ಚಂಚಲಾ ಅವರೊಂದಿಗೆ ಮಾತುಕತೆ ಮತ್ತು ರೋಗಿಗಳು ಮತ್ತು ವೈದ್ಯರ ಬಾಂಧವ್ಯ ಕುರಿತು ಡಾ. ಕೇಶವಮೂರ್ತಿ. ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 9.40 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಸ್. ರಾಜಲಕ್ಷ್ಮೀ–ವೀಣಾ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಎನ್. ರಮಣಿ–ಕೊಳಲು ವಾದನ, 4.00 ಮಹಿಳಾರಂಗ–ಸಖೀ ಸಂವಾದ–ದೈನಂದಿನ ಬದುಕಿನಲ್ಲಿ ಹವ್ಯಾಸಗಳ ಪಾತ್ರ, ಪ್ರಸ್ತುತಿ : ಕೀರ್ತನಾ ಮತ್ತು ಸಹನ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ, ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಸೆಮಿನಾರ್ ಹಾಲ್‌ನಲ್ಲಿ ಏರ್ಪಾಡಾಗಿದ್ದ ವೇದ ಕೃಷಿ ಕಾರ್ಯಾಗಾರದ ಬಾನುಲಿ ಅವತರಣಿಕೆಗಳು, ಪ್ರಸ್ತುತಿ : ಆರ್. ಲೋಕೇಶ್ವರಿ, 7.45 ಯಾರು ಕಾಣದ ಪ್ರವಾಸಿ ತಾಣ–ಮದ್ದೂರು ತಾಲೂಕು ಅರೆತಿಪ್ಪೂರಿನ ಜೈನ ಬಸದಿ ಹಾಗೂ ಅವಶೇಷಗಳನ್ನು ಪರಿಚಯಿಸುತ್ತಾರೆ ತೈಲೂರು ವೆಂಕಟಕೃಷ್ಣ, 8.00 ಸಂಧ್ಯಾರಾಗ–ನಿವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಹೆಚ್.ಸಿ.ಕಾಂತರಾಜು ಹಾಗೂ ಅವರ ಮಡದಿ ಕೆ.ಎಸ್.ಗೀತಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಜಿ.ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಸುರಭಿ. ಪಿ–ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

ಕೊಡಗಿನಲ್ಲಿ ನವೀಕೃತ ಕಂಡಂಡ ಐನ್‌ಮನೆ ಉದ್ಘಾಟನೆ


ಕಂಡಂಡ ಕುಟುಂಬದ ನವೀಕೃತ ಐನ್‌ಮನೆ


ಕಂಡಂಡ ಕುಟುಂಬದ ಪೂರ್ವಜರ ಹಳೆಯ ಐನ್‌ಮನೆ

ಮಡಿಕೇರಿ, ಫೆ.27–ಕೊಡಗು ಜಿಲ್ಲೆ ನಾಪೋಕ್ಲು–ನಾಡ್, ಕೊಳಕೇರಿ ಗ್ರಾಮದ ಹೃದಯ ಭಾಗದಲ್ಲಿ ನವೀಕೃತಗೊಳಿಸಿದ ತಮ್ಮ ಐನ್‌ಮನೆ (ಪೂರ್ವಜರ ಮನೆ)ಯನ್ನು ಕೊಡಗಿನ ಕಂಡಂಡ ಕುಟುಂಬದವರು ಇತ್ತೀಚೆಗೆ ಉದ್ಘಾಟಿಸಿದರು.

ಸುಮಾರು 600 ವರ್ಷಗಳಷ್ಟು ಹಳೆಯದು ಎಂದು ನಂಬಲಾದ ಮೂಲ ಐನ್‌ಮನೆ, ತನ್ನ ಪರಂಪರೆಯ ಸೌಂದರ್ಯವನ್ನು ಉಳಿಸಿಕೊಂಡು ಪುನರ್‌ನಿರ್ಮಿಸಲಾಗಿದೆ. ಸುಮಾರು 1 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪೂರ್ಣಗೊಂಡ ಈ ನಿರ್ಮಾಣಕ್ಕೆ ಕುಟುಂಬ ಸದಸ್ಯರು ಮತ್ತು ನಿಕಟ ಸಂಬಂಧಿಗಳ ದೇಣಿಗೆಯಿಂದ ಹಣಕಾಸು ಒದಗಿಸಲಾಗಿದೆ.

ಪಟ್ಟೇದಾರ (ಕುಟುಂಬದ ಹಿರಿಯ ಪುರುಷ ಸದಸ್ಯರು), ಕಂಡಂಡ ಎ. ಸುಬ್ಬಯ್ಯ ಅವರು ನವೀಕೃತ ಐನ್‌ಮನೆಯನ್ನು ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಕಂಡಂಡ ಪರಿಧಿ ಪೂವಮ್ಮ ಪ್ರಾರ್ಥನೆ ಹಾಡನ್ನು ಹಾಡಿ, ತಾಯಿ ಕಾವೇರಿ ಆಶೀರ್ವಾದ ಪಡೆದರು. ಕಾರ್ಯಕ್ರಮಕ್ಕೂ ಮುನ್ನ, ಅತಿಥಿಗಳು ಮತ್ತು ಹಿತೈಷಿಗಳು ತಾಮನೆ ಪುತ್ರಿಯರನ್ನು (ಮದುವೆಯಾದ ಕಂಡಂಡ ಮಹಿಳೆಯರು) ಔಪಚಾರಿಕವಾಗಿ ಸ್ವಾಗತಿಸಿದರು. ಮತ್ತು ಕೈಮಾಡ (ಪೂರ್ವಜರಿಗೆ ಸಮರ್ಪಿತವಾದ ಕುಟುಂಬ ದೇವಾಲಯ)ದಿಂದ ಕೊಂಬ್ ಕೋಟ್ (ಸಾಂಪ್ರದಾಯಿಕ ಡ್ರಮ್ಸ್)ನ ಲಯಬದ್ಧ ವಾದ್ಯದ ನಡುವೆ ಐನ್‌ಮನೆಗೆ ಕರೆದೊಯ್ಯಲಾಯಿತು.

ಕಂಡಂಡ ಮಹಿಳೆಯರು, ಅವರ ಪುತ್ರಿಯರು ವರ್ಣರಂಜಿತ ಸಾಂಪ್ರದಾಯಿಕ ಉಡುಪಿನಲ್ಲಿ ನೃತ್ಯದ ಮೂಲಕ ಸ್ವಾಗತಿಸಿದ್ದು, ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು. ಕ್ಷೀಣಿಸುತ್ತಿರುವ ಕೊಡವ ಸಮುದಾಯದ ಸಂಪ್ರದಾಯಗಳು ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಬಗ್ಗೆ ಅತಿಥಿಗಳು ಮತ್ತು ಸಂಬಂಧಿಕರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಹಳ್ಳಿಯ ಕುಟುಂಬಗಳ ಅಭಿವೃದ್ಧಿಗಾಗಿ ಸಾಮೂಹಿಕ ಪ್ರಯತ್ನಗಳ ಬಗ್ಗೆ ಒತ್ತಿ ಹೇಳಿದರು.


ಕಂಡಂಡ ಕುಟುಂಬದ ನವೀಕೃತ ಐನ್‌ಮನೆಯನ್ನು ಕಂಡಂಡ ಸುಬ್ಬಯ್ಯ (ಬಲತುದಿ) ಉದ್ಘಾಟಿಸಿದರು. ಚಿತ್ರದಲ್ಲಿ ಕಂಡಂಡ ಜೋಯಪ್ಪ, ಬಿದ್ದಾತಂಡ ಸೋಮಯ್ಯ, ಕಂಡಂಡ ಚೇರ್ಮಣ್ಣ ಅವರನ್ನು ಕಾಣಬಹುದು.


ಕಂಡಂಡ ಎಂ. ಪೊನ್ನಣ್ಣ ಮತ್ತು ರೇಖಾ ಪೊನ್ನಣ್ಣ ಅವರು ಕಾರ್ಯಕ್ರಮ ನಿರ್ವಹಿಸಿದರು. ಕುಂಡ್ಯೋಲಂಡ ಎಸ್. ಸುಬ್ಬಯ್ಯ, ಬೋಲಿಯಾದಿರ ರಾಜಾ ಸೋಮಯ್ಯ, ಪುಚಿಮಂಡ ಸಾಬು ಕುಟ್ಟಪ್ಪ, ಮಂಡೇಪಂಡ ಸುಂದರಿ ಕುಟ್ಟಪ್ಪ, ಬಿಡ್ಡಟಂಡ ಡಿಕ್ಕಿ ಸೋಮಯ್ಯ, ಬೋಲಿಯಾದಿರ ಬೋಳವ್ವ, ಕನ್ನಂಬಿರಾ ಚಂಗಪ್ಪ, ಬೋಟೋಳಂಡ ಅಪ್ಪಣ್ಣ, ಕೆಟೋಲಿರಾ ಕುಟ್ಟಪ್ಪ, ಕಲಿಯಂಡ ಶಾಂಬು ಮಾದಪ್ಪ, ಅಪ್ಪಚ್ಚಿರ ಸುರೇಶ್ ಬೆಳ್ಳಿಯಪ್ಪ, ಕುಂಬಾರದ ಚೋಮುನಿ, ಕಂಡಂಡ ಅಮ್ಮುನು ಚೋಂದವ್ವ, ಚೇರ್ಮಣ್ಣ, ಜೋಯಪ್ಪ ಮತ್ತು ಬೋಪಣ್ಣ ಸೇರಿದಂತೆ ಪ್ರಮುಖ ಹಿರಿಯ ಅತಿಥಿಗಳನ್ನು ಸನ್ಮಾನಿಸಲಾಯಿತು.

ಕಂಡಂಡ ಕುಟುಂಬದ ಕಾರ್ಯದರ್ಶಿ ಜಯ ಕರುಂಬಯ್ಯ ಅವರ ಕೊಡುಗೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಇದೇ ವೇಳೆ ಈ ಯೋಜನೆ ಸುಲಲಿತವಾಗಿ ಸಂಪೂರ್ಣವಾಗಲು ಅವಿರತವಾಗಿ ಶ್ರಮಿಸಿದ ಐನ್‌ಮನೆ ನವೀಕರಣ ಸಮಿತಿ ಕಾರ್ಯದರ್ಶಿ ಕಂಡಂಡ ಎಂ. ಪೊನ್ನಣ್ಣ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮವು ಕಂಡಂಡ ಬಿ. ಜೋಯಪ್ಪ ಅವರ ವಂದನಾರ್ಪಣೆ, ನಂತರ ರಾಷ್ಟ್ರಗೀತೆಯೊಂದಿಗೆ ಸಂಪನ್ನವಾಯಿತು.

ಕುಮಾರಸ್ವಾಮಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಗೆ

ರಾಜ್ಯಪಾಲರ ಅನುಮತಿ ಕೋರಿದ ಲೋಕಾಯುಕ್ತ

ಬೆಂಗಳೂರು, ಫೆ.27– ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ (ಎಸ್‌ಎಸ್‌ವಿಎಂ) ಕಂಪನಿಗೆ ಗಣಿಗಾರಿಕೆ ಗುತ್ತಿಗೆ ನೀಡಿದ ಅಕ್ರಮ ಆರೋಪ ಪ್ರಕರಣದಲ್ಲಿ ಕೇಂದ್ರ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಅನುಮತಿ ಕೋರಿ ರಾಜ್ಯಪಾಲರಿಗೆ ಲೋಕಾಯುಕ್ತ ವಿಶೇಷ ತನಿಖಾ ತಂಡ (ಎಸ್‌ಐಟಿ) ಪ್ರಸ್ತಾವನೆ ಸಲ್ಲಿಸಿದೆ.



ವಿಶೇಷ ತನಿಖಾ ತಂಡ ಪ್ರಸ್ತಾವನೆ ಸಲ್ಲಿಸಿ ಒಂದು ತಿಂಗಳು ಕಳೆದಿದ್ದರೂ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್‌ರಿಂದ ಇದುವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ತಿಳಿದು ಬಂದಿದೆ.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಅಭಿಯೋಜನಾ ಮಂಜೂರಾತಿ ನೀಡುವಂತೆ ಸುಮಾರು 10 ಸಾವಿರ ಪುಟಗಳ ಆಂಗ್ಲ ಭಾಷೆ ತರ್ಜುಮೆಯ ತನಿಖಾ ವರದಿ ಸಮೇತ ವಿಶೇಷ ತನಿಖಾ ತಂಡ ಸಲ್ಲಿಸಿರುವ ಮೂರನೇ ಪ್ರಸ್ತಾವನೆ ರಾಜ್ಯಪಾಲರ ಅಂಗಳದಲ್ಲಿದೆ. ಹೀಗಾಗಿ, ರಾಜಕೀಯ ಜಟಾಪಟಿಗೂ ಕಾರಣವಾಗಿರುವ ಈ ಪ್ರಕರಣದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮುಂದಿನ ನಡೆ ಕುತೂಹಲ ಮೂಡಿಸಿದೆ.

ಏನಿದು ಪ್ರಕರಣ: 2007ರಲ್ಲಿ ಮುಖ್ಯಮಂತ್ರಿ ಆಗಿದ್ದ ಹೆಚ್.ಡಿ.ಕುಮಾರಸ್ವಾಮಿ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನಲ್ಲಿ 550 ಎಕರೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಕಂಪನಿಗೆ ಗುತ್ತಿಗೆ ನೀಡಿದ್ದರು. ಈ ಗುತ್ತಿಗೆ ನೀಡಿದ ಕ್ರಮದಲ್ಲಿ ಅಕ್ರಮ ನಡೆದಿದೆ ಎಂದು 2011ರಲ್ಲಿ ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಕ್ರಮ ಗಣಿಗಾರಿಕೆ ವರದಿಯಲ್ಲಿ ಉಲ್ಲೇಖಿಸಿದ್ದರು.

ಈ ಪ್ರಕರಣದಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮತ್ತಿತರರನ್ನು ಆರೋಪಿಗಳನ್ನಾಗಿ ಪರಿಗಣಿಸಿ ತನಿಖೆ ನಡೆಸಿದ್ದ ವಿಶೇಷ ತನಿಖಾ ತಂಡ, ಕುಮಾರಸ್ವಾಮಿ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲು ಅನುಮತಿ ನೀಡುವಂತೆ 2023ರ ನವೆಂಬರ್ 21ರಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರಿಗೆ ಪ್ರಸ್ತಾವನೆ ಸಲ್ಲಿಸಿತ್ತು.

ಹೆಚ್.ಡಿ.ಕುಮಾರಸ್ವಾಮಿ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ಕೆಲವು ಸ್ಪಷ್ಟೀಕರಣ ಕೋರಿ ರಾಜ್ಯಪಾಲರು ಪ್ರಸ್ತಾವನೆ ವಾಪಸ್ ಕಳುಹಿಸಿದ್ದರು. ಇದರಿಂದ ವಿಶೇಷ ತನಿಖಾ ತಂಡ 2024ರ ಆಗಸ್ಟ್‌ನಲ್ಲಿ ಮತ್ತೊಂದು ಮನವಿ ಸಲ್ಲಿಸಿತ್ತು. ಬಳಿಕ ಇಡೀ ಪ್ರಕರಣದ ತನಿಖಾ ವರದಿಯನ್ನು ಆಂಗ್ಲ ಭಾಷೆಗೆ ಅನುವಾದಿಸಿ ಕೊಡುವಂತೆ ಪುನಃ ವಾಪಸ್ ಕಳಿಸಿದ್ದರಿಂದ ಅನುವಾದ ಕಾರ್ಯವನ್ನೂ ಪೂರ್ಣಗೊಳಿಸಿದ್ದ ಎಸ್‌ಐಟಿ, ಮೂರನೇ ಬಾರಿಗೆ ಇದೀಗ ಅನುಮತಿ ಕೋರಿದೆ.

ಅಭಿನಂದನೆ


ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ ಆಯ್ಕೆಯಾದ ಎಸ್‌ಬಿಎಂ ಮಂಜು ಅವರನ್ನು ಮೇಟಗಳ್ಳಿ ಬಡಾವಣೆಯ ಕರಕುಶಲನಗರದ ನಿವಾಸಿಗಳು ಅಭಿನಂದಿಸಿದರು. ಈ ವೇಳೆ ಮಹಾನಗರ ಪಾಲಿಕೆ ಮಾಜಿ ಸದಸ್ಯ ರಮೇಶ್, ಮಂಜುನಾಥ್, ಕೃಷ್ಣಚಾರಿ, ಮಂಜು, ಅಕ್ಷಯ್, ಕುಮಾರ್, ಚಂದ್ರು, ಜಗದೀಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಬೋಗಾದಿ ಬಳಿಯ ಶ್ರೀ ಭೋಗೇಶ್ವರ ಶ್ರೀ ಸಪ್ತಮಾತೃಕಾ ಹಿರಿದೇವಮ್ಮ ಸನ್ನಿಧಿಯಲ್ಲಿ ಅದ್ದೂರಿ ಶಿವರಾತ್ರಿ ಉತ್ಸವ

●ಸಾವಿರಾರು ಭಕ್ತರಿಂದ ಸರದಿ ಸಾಲಿನಲ್ಲಿ ನಿಂತು ದರ್ಶನ ●ಎಲ್ಲರಿಗೂ ಪ್ರಸಾದ ವಿನಿಯೋಗ; ಇಡೀ ದಿನ ಪೌರಾಣಿಕ ಶಿವಪುರಾಣ, ನಾಮಸ್ತೋತ್ರ ●ಅಚ್ಚುಕಟ್ಟಾದ ವ್ಯವಸ್ಥೆಯಿಂದ ಹೆಂಗಸರು–ಮಕ್ಕಳು ನಿರಾತಂಕವಾಗಿ ದೇವರ ದರ್ಶನ




ಮೈಸೂರಿನ ಬೋಗಾದಿ ರಿಂಗ್ ರಸ್ತೆಯಲ್ಲಿರುವ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಶ್ರೀ ಭೋಗೇಶ್ವರ ಶ್ರೀ ಸಪ್ತಮಾತೃಕಾ ಹಿರಿದೇವಮ್ಮ ದೇವಸ್ಥಾನದಲ್ಲಿ ನೆರವೇರಿದ ಮಹಾಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಮೈಸೂರು, ಫೆ27(ಎಸ್‌ಬಿಡಿ)– ಮೈಸೂರಿನ ಬೋಗಾದಿ ರಿಂಗ್ ರಸ್ತೆಯಲ್ಲಿರುವ ಇತಿಹಾಸ ಹಾಗೂ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಶ್ರೀ ಭೋಗೇಶ್ವರ ಶ್ರೀ ಸಪ್ತಮಾತೃಕಾ ಹಿರಿದೇವಮ್ಮ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿತು.

ಪ್ರತಿವರ್ಷದಂತೆ ಮಹಾಶಿವರಾತ್ರಿಯಂದು ನಡೆಯುವ ಜಾತ್ರಾ ಮಹೋತ್ಸವಕ್ಕೆ ಸಹಸ್ರಾರು ಭಕ್ತರು ಸಾಕ್ಷಿಯಾದರು. ಬುಧವಾರ ಮುಂಜಾನೆಯಿಂದಲೇ ಮಹಾಸಂಕಲ್ಪ, ಗಣಪತಿ ಪೂಜಾ, ಶ್ರೀ ಭೋಗೇಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ, ಅಲಂಕಾರ, ಅರ್ಚನೆ, ಸಹಸ್ರನಾಮ ಅರ್ಚನೆ ನಂತರ ಶಿವಪಂಚಾಕ್ಷರಿ ಹೋಮ, ತ್ರಿಶತಿ ಹೋಮ, ಗಣಪತಿ, ಮೃತ್ಯುಂಜಯ ಹೋಮ, ಮಹಾಮಂಗಳಾರತಿ, ತೀರ್ಥ ಪ್ರಸಾದ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು. ನಾಲ್ಕು ಯಾಮಗಳಲ್ಲಿ ವಿಶೇಷ ಪೂಜೆಯೊಂದಿಗೆ 24 ಗಂಟೆಗಳ ಕಾಲ ನಿರಂತರವಾಗಿ ಶಿವನನ್ನು ಆರಾಧಿಸಲಾಯಿತು.

ಬುಧವಾರ ಬೆಳಗ್ಗೆಯಿಂದ ಗುರುವಾರ ಬೆಳಗ್ಗೆವರೆಗೂ ಸಾವಿರಾರು ಭಕ್ತರು ಸರತಿಯಲ್ಲಿ ಸಾಗಿ ದೇವರ ದರ್ಶನ ಪಡೆದರು. ಮಹಿಳೆಯರು, ಮಕ್ಕಳು, ವೃದ್ಧರು ಸೇರಿದಂತೆ ಎಲ್ಲಾ ವಯೋಮಾನದ ಭಕ್ತರೂ ಗಂಟೆಗಟ್ಟಲೆ ಕಾದು ಶಿವ ದರ್ಶನ ಮಾಡಿದರು. ರಿಂಗ್ ರಸ್ತೆಯ ಸರ್ವೀಸ್ ರಸ್ತೆಯುದ್ದಕ್ಕೂ ಭಕ್ತರ ವಾಹನಗಳನ್ನು ನಿಲುಗಡೆ ಮಾಡಲಾಗಿತ್ತು. ದೇವರ ದರ್ಶನಕ್ಕೆ ಬರುವ ಭಕ್ತರಿಗೆ ತೊಂದರೆಯಾಗದಂತೆ ನೀರು, ಬೆಳಕು ಸೇರಿದಂತೆ ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿತ್ತು. ಹಲವು ಭಕ್ತರು ಪ್ರಸಾದಕ್ಕೆ ಬೇಕಾದ ಹಾಲು, ಮೊಸರು, ತುಪ್ಪ, ಎಣ್ಣೆ ಇತ್ಯಾದಿ ವಸ್ತುಗಳನ್ನು ಶಕ್ತಿಯನುಸಾರ ನೀಡಿದರು. ಪುರಾಣ ಪ್ರಸಿದ್ಧಿ ದೇವಾಲಯದ ಬಗ್ಗೆ ತಿಳಿದಿರುವ ಹೊರ ಊರುಗಳ ಭಕ್ತರೂ ಆಗಮಿಸಿದ್ದರು. ಭಕ್ತರಿಗೆ ದಿನಪೂರ್ತಿ ಪ್ರಸಾದ ವಿತರಿಸಿದ್ದು ವಿಶೇಷವಾಗಿತ್ತು.

ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ಶಿವಧ್ಯಾನದ ಜೊತೆಗೆ ಸಾಂಸ್ಕೃತಿ ಕಾರ್ಯಕ್ರಮಗಳ ಮೂಲಕವೂ ಶಿವ ನಾಮಸ್ಮರಣೆ ಮಾಡಲಾಯಿತು. ವಿವಿಧ ಕಲಾವಿದರು ಭಕ್ತಿಗೀತೆ, ದೇವರ ನಾಮ, ಭಜನೆ, ನೃತ್ಯ ರೂಪಕದ ಮೂಲಕ ಶಿವ–ಪಾರ್ವತಿಯನ್ನು ಆರಾಧಿಸಿದರು.



ಎಲ್ಲಾ ಜನಪ್ರತಿನಿಧಿಗಳ ಕಚೇರಿಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸಲು ಆಗ್ರಹ


ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಂರಕ್ಷಣಾ ಹೋರಾಟ ಸಮಿತಿ ವತಿಯಿಂದ ವಿವಿಧ ಸಂಘಟನೆ ಪ್ರತಿನಿಧಿಗಳ ಸಭೆ ನಡೆಸಲಾಯಿತು.

ಮೈಸೂರು, ಫೆ.27(ಎಸ್‌ಬಿಡಿ)– ಸಾಂವಿಧಾನಿಕ ಹುದ್ದೆಯಲ್ಲಿರುವ ಎಲ್ಲಾ ಜನಪ್ರತಿನಿಧಿಗಳ ಕಚೇರಿಗಳಲ್ಲೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರ ಅಳವಡಿಸುವುದನ್ನು ಕಡ್ಡಾಯಗೊಳಿಸಿ, ಶಾಸನ ರೂಪಿಸುವಂತೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಸಭೆಯಲ್ಲಿ ಆಗ್ರಹಿಸಲಾಯಿತು.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ಗುರುವಾರ ನಡೆದ ಸಭೆಯಲ್ಲಿ, ದೆಹಲಿಯ ನೂತನ ಮುಖ್ಯಮಂತ್ರಿ ಕಚೇರಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ತೆರವುಗೊಳಿಸಿದ್ದನ್ನು ಖಂಡಿಸಲಾಯಿತು. ಬಿಜೆಪಿಯ ದೆಹಲಿ ನೂತನ ಮುಖ್ಯಮಂತ್ರಿ ರೇಖಾಗುಪ್ತ ಅವರ ಮೂಲಕ ಕಚೇರಿ ಹಾಗೂ ವಿಧಾನಸಭೆಆವರಣದಲ್ಲಿದ್ದ ಅಂಬೇಡ್ಕರ್ ಅವರ ಫೋಟೋ ತೆಗೆಸಿದೆ ಎಂದು ಆರೋಪಿಸಿ, ಇದನ್ನು ಖಂಡಿಸಿ ಹೋರಾಟ ನಡೆಸುವ ನಿರ್ಧಾರ ಕೈಗೊಳ್ಳಲಾಯಿತು.

ಹಲವು ನಿರ್ಣಯಗಳು: ಕೇಂದ್ರ–ರಾಜ್ಯ ಸರ್ಕಾರಗಳ ಕಚೇರಿ ಹಾಗೂ ಸಾಂವಿಧಾನಿಕ ಹುದ್ದೆಯನ್ನು ಪಡೆದಿರುವ ಜನಪ್ರತಿನಿಧಿಗಳ ಕಚೇರಿಗಳಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನು ಅಳವಡಿಕೆಗೆ ಶಾಸನ ರೂಪಿಸುವ ನಿಟ್ಟಿನಲ್ಲಿ ಪ್ರಧಾನಿ ಮೋದಿಯವರು ಮುಂದಾಗಬೇಕು. ಈ ಹಿಂದೆ ಕೇಂದ್ರ ಗೃಹಸಚಿವ ಅಮಿತ್ ಶಾ, ರಾಜ್ಯಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಲಘುವಾಗಿ ಮಾತನಾಡಿದ್ದರು. ಈಗ ದೆಹಲಿಯ ನೂತನ ಮುಖ್ಯಮಂತ್ರಿ ರೇಖಾಗುಪ್ತ ಅವರ ಮೂಲಕ ಈ ಕೆಲಸ ಮಾಡಿಸಿದ್ದಾರೆ. ಬಿಜೆಪಿಯ ಈ ನಡೆ ಖಂಡಿಸಿ, ಐದು ಜಿಲ್ಲೆಗಳ ಹೋರಾಟಗಾರರು ಮೈಸೂರಲ್ಲಿ ಬೃಹತ್ ಪ್ರತಿಭಟನೆ ನಡೆಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಇದೇ ವೇಳೆ ಒಳ ಮೀಸಲಾತಿ ಸಂಬಂಧ ದಲಿತ ಸಚಿವರ ಬಗ್ಗೆ ಲಘುವಾಗಿ ಮಾತನಾಡಿರುವ ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಆರ್.ಭಾಸ್ಕರ್ ಪ್ರಸಾದ್ ವಿರುದ್ಧ ಪೊಲೀಸ್ ಆಯುಕ್ತರಿಗೆ ದೂರು ನೀಡಲು ತೀರ್ಮಾನಿಸಲಾಯಿತು.

ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆ.ಎಸ್.ಶಿವರಾಮು, ಹೆಡತಲೆ ಮಂಜುನಾಥ್, ಎಂ.ಶಿವಪ್ರಸಾದ್, ನಾಗನಹಳ್ಳಿ ರೇವಣ್ಣ, ದ್ಯಾವಪ್ಪ ನಾಯಕ, ಆರ್.ಸಿದ್ದಪ್ಪ, ಪ್ರಮೋದ್, ಎನ್.ರವಿಕುಮಾರ್, ಕೆ.ಮುರುಳಿ, ಮಂಜುಳಾ, ಉಮೇಶ್, ದೇವನೂರು ಪುಟ್ಟನಂಜಯ್ಯ ಮತ್ತಿತರರು ಭಾಗವಹಿಸಿದ್ದರು.

ಕಲಾಸುರುಚಿಯಲ್ಲಿ 'ನೀರ್ಮಾದಳ ಹೂವಿನೊಂದಿಗೆ' ನಾಟಕ ಪ್ರದರ್ಶನ

ಮೈಸೂರು, ಫೆ. 27 – ಮೈಸೂರಿನ ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗಮನೆಯ ಕಲಾಸುರುಚಿಯಲ್ಲಿ ಮಾ. 1 ರಂದು ಸಂಜೆ 7ಕ್ಕೆ 'ನೀರ್ಮಾದಳ ಹೂವಿನೊಂದಿಗೆ' ಏಕವ್ಯಕ್ತಿ ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ : ಎಣ್ಣೆ ಅಂಗಡಿ ಹತ್ತಿರ ಹುಡುಗಿಯರು ಬರಬಾರದು. ಬ್ಯೂಟಿ ಪಾರ್ಲರ್ ಹತ್ತಿರ ಹುಡುಗರು ಹೋಗಬಾರದು.

ಮಂಕ : ಯಾಕೆ?

ಗುಂಡ : ಹುಡುಗರ ನಿಜವಾದ ಮಾತು, ಹುಡುಗಿಯರ ನಿಜವಾದ ರೂಪ ಎರಡೂ ಬಯಲಾಗುತ್ತೆ!

ಮೈಸೂರು ಮಿತ್ರ

ಶುಕ್ರವಾರ, 28 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಹಿತವಾಗಿ ಮಾತನಾಡಿ ಶಾಂತಿ ಸಿಗುತ್ತದೆ. ಅಹಂಕಾರ ಬಿಡಿ ದೊಡ್ಡವರಾಗುವಿರಿ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕರೆದುಣ್ಣುವ ಕೆಚ್ಚಲನ್ನು ಕೊರೆದುಂಡ ಹಾಗೆ.

ನಿಮ್ಮ ಪತ್ರಗಳು

■ ಶಿಥಿಲ ಮರಗಳನ್ನು ತೆರವುಗೊಳಿಸುವಲ್ಲಿ ಇಲಾಖೆಗಳ ನಡುವೆ ಸಾಮರಸ್ಯದ ಕೊರತೆ

ಮಾನ್ಯರೆ,

ಮೈಸೂರಿನ ಸರಸ್ವತಿಪುರಂ 14ನೇ ಮುಖ್ಯ ರಸ್ತೆಯಲ್ಲಿ ಭಾರಿ ಗಾತ್ರದ ಮರವೊಂದು ಮುರಿದು ಬಿದ್ದು ಹಲವು ವಾಹನಗಳು ಜಖಂಗೊಂಡು ತರಕಾರಿ ವ್ಯಾಪಾರಿಯೊಬ್ಬರು ಗಾಯಗೊಂಡಿರುವ ಘಟನೆ ನಡೆದಿದೆ. (ಮೈ.ಮಿ. 22.02.2025). ಅದೃಷ್ಟವಶಾತ್ ಯಾರಿಗೂ ಪ್ರಾಣಾಪಾಯ ಸಂಭವಿಸಿಲ್ಲ. ಸಾಮಾನ್ಯವಾಗಿ ಹೆಚ್ಚು ಟೊಳ್ಳು ಬಿದ್ದು ಶಿಥಿಲಗೊಂಡಿರುವ ಮರಗಳಲ್ಲಿ ಗುಲ್‌ಮೊಹರ್ ಮರಗಳೇ ನಗರದಲ್ಲಿ ಕಂಡು ಬರುತ್ತವೆ. ಈಗ ಬಿದ್ದಿರುವ ಮರವೂ ಕೂಡಾ ಗುಲ್‌ಮೊಹರ್ ಮರ. ಈ ಬಗ್ಗೆ ಇತ್ತೀಚೆಗೆ ನಂಜನಗೂಡು ರಸ್ತೆಯಲ್ಲಿ ಇದೇ ರೀತಿಯ ಮರ ಬಿದ್ದಿದ್ದನ್ನು ಉದಾಹರಿಸಿ, ವಿ.ವಿ ಮೊಹಲ್ಲಾದ ಚಂದ್ರ ಮೌಳೇಶ್ವರ ದೇವಸ್ಥಾನದ ಬಳಿಯ ಶಿಥಿಲಗೊಂಡ ಮರ ಹಾಗೂ ಹುಣಸೂರು ರಸ್ತೆ ಜಿಲ್ಲಾಧಿಕಾರಿಗಳ ನಿವಾಸದ ಮುಂಭಾಗದ ರಸ್ತೆಯ ಕಡೆ ಬಾಗಿರುವ ಗುಲ್‌ಮೊಹರ್ ಮರಗಳ ಭದ್ರತೆಯ ಬಗ್ಗೆ ಸಂಬಂಧಿಸಿದವರು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿ, ಸಾಮಾನ್ಯವಾಗಿ ಗುಲ್‌ಮೊಹರ್ ಮರಗಳು ಭದ್ರವಾಗಿರುವುದಿಲ್ಲವೆಂದು ತಿಳಿಸಿ ದಿನಾಂಕ 02.02.2025ರ ಮೈಸೂರು ಮಿತ್ರ ಪತ್ರಿಕೆಯ ನಿಮ್ಮ ಪತ್ರಗಳು ವಿಭಾಗದಲ್ಲಿ ನಾನು ಬರೆದಿದ್ದ 'ಶಿಥಿಲ ಮರಗಳನ್ನು ತೆರವುಗೊಳಿಸಿ' ಪತ್ರ ಪ್ರಕಟವಾಗಿದ್ದನ್ನು ಗಮನಿಸಬಹುದು.

ದಿನಾಂಕ 21.09.2024 ರಂದು ಪ್ರಕಟವಾಗಿದ್ದ 'ಉದ್ಯಾನವನದಲ್ಲಿ ಒಣಗಿರುವ ಮರವನ್ನು ತೆರವುಗೊಳಿಸಿ' ಪತ್ರದಲ್ಲಿ ವಿಜಯನಗರ 1ನೇ ಹಂತದ ಕಾಳಿದಾಸ ರಸ್ತೆಯ ಮುಡಾ ಕಾಂಪ್ಲೆಕ್ಸ್ ಪಕ್ಕದ ಉದ್ಯಾನವನದಲ್ಲಿ ಒಣಗಿರುವ ಮರ ಅಪಾಯಕಾರಿ ಸ್ಥಿತಿಯಲ್ಲಿದ್ದು ತೆರವುಗೊಳಿಸಲು ಮನವಿ ಮಾಡಿದ್ದೆ. ಇವೆಲ್ಲದಕ್ಕೂ ಸಂಬಂಧಿಸಿದವರ ಸ್ಪಂದನೆ ಶೂನ್ಯ.

ಈ ರೀತಿಯ ಘಟನೆಗಳಾದರೂ ಜೀವಹಾನಿಯಾದಾಗ ಗಂಭೀರವಾಗಿ ಪರಿಗಣಿಸುವಂತೆ ಇತರೆ ಸಂದರ್ಭಗಳಲ್ಲಿ ಪರಿಗಣಿಸುವುದಿಲ್ಲ. ಪಾಲಿಕೆ ಅಧಿಕಾರಿಗಳು ಅರಣ್ಯ ಇಲಾಖೆಗೆ ಪತ್ರ ಬರೆದು ಅನುಮತಿಗಾಗಿ ಕಾಯುತ್ತಾ ಕುಳಿತರೆ ಕ್ರಮ ಜಗುಗಿಸಿದಂತಾಗುವುದಿಲ್ಲ. ಅಷ್ಟರಲ್ಲಿ ಇಂತಹ ಅವಘಡಗಳು ಸಂಭವಿಸಿಬಿಡುತ್ತವೆ. ಆದುದರಿಂದ ಆ ಪತ್ರದ ಸ್ಥಿತಿ ಅರಣ್ಯ ಇಲಾಖೆಯಲ್ಲಿ ಏನಾಯಿತು? ಎಂಬುದನ್ನು ಫಾಲೋ ಮಾಡಬೇಕು. ಅರಣ್ಯ ಇಲಾಖೆಯವರು ಕೂಡಾ ಬೇಜವಾಬ್ದಾರಿ ತೋರಿಸದೇ ನಗರ ಪ್ರದೇಶದಲ್ಲಿರುವ ಇಂತಹ ಅಪಾಯಕಾರಿ ಮರಗಳ ಬಗ್ಗೆ ಕೂಡಲೆ ಕ್ರಮ ಜರುಗಿಸಬೇಕು. ಇದು ಇಲಾಖೆಗಳ ನಡುವಿನ ಸಾಮರಸ್ಯದ ಕೊರತೆ ಅಲ್ಲವೆ? ಈ ಬಗ್ಗೆ ವಿಳಂಬ ತಪ್ಪಿಸಲು ಅರಣ್ಯ ಇಲಾಖೆಯ ಒಬ್ಬ ಅಧಿಕಾರಿ ಒಳಗೊಂಡ ಪಾಲಿಕೆಯ ಅಧಿಕಾರಿಗಳ ಒಂದು ತಂಡ ರಚಿಸಿ ನಗರ ಪ್ರದೇಶದಲ್ಲಿ ಗಸ್ತು ಸಂಚರಿಸಿ ಇಂತಹ ಅಪಾಯಕಾರಿ ಮರಗಳನ್ನು, ಅದರ ರೆಂಬೆಗಳು ಮತ್ತು ಒಣಗಿರುವ ರೆಂಬೆಗಳನ್ನು ಗುರುತಿಸಿ ತಕ್ಷಣವೇ ಕ್ರಮ ಕೈಗೊಳ್ಳುವುದು ಸೂಕ್ತ ಮಾರ್ಗ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

■ ಕೂರ್ಗಳ್ಳಿ, ಮೇಗಲಕೊಪ್ಪಲಿನಲ್ಲಿ ನೀರಿನ ಸಮಸ್ಯೆ ಸರಿಪಡಿಸಿ

ಮಾನ್ಯರೆ,

ಮೈಸೂರಿನ ಹೂಟಗಳ್ಳಿ ನಗರಸಭೆಗೆ ಸೇರುವ ಕೂರ್ಗಳ್ಳಿ, ಮೇಗಲಕೊಪ್ಪಲಿನಲ್ಲಿ ನೀರಿನ ಸಮಸ್ಯೆ ಉಂಟಾಗಿದೆ. 4–5 ದಿನಕ್ಕೆ ಕೇವಲ 1 ರಿಂದ 2 ಗಂಟೆಗಳ ಅವಧಿಯಲ್ಲಿ ನೀರನ್ನು ಬಿಡುತ್ತಾರೆ. ಅದರಲ್ಲೂ ತೀರಾ ಸಣ್ಣ ಪ್ರಮಾಣದಲ್ಲಿ ನೀರು ಬರುತ್ತದೆ. ಇದರಿಂದ ಅರ್ಧ ಸಂಪು ಕೂಡ ತುಂಬುವುದಿಲ್ಲ. ನೀರು ಬಿಡುವಂತಹ ನೀರುಗಂಟಿಗಳು ಸರಿಯಾಗಿ ನೀರನ್ನು ಬಿಡದೆ, ಕೇವಲ ಸಂಬಂಧಪಟ್ಟ ರಸ್ತೆಗಳಿಗೆ ಹೆಚ್ಚೆಚ್ಚು ನೀರನ್ನು ಹರಿಸುತ್ತಾರೆ. ಬೇರೆ ರಸ್ತೆಗಳಿಗೆ ನೀರನ್ನು ಬಿಡುವುದಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ, ಪ್ರತಿ ರಸ್ತೆಗಳಿಗೆ ಸರಿಯಾದ ಪ್ರಮಾಣದಲ್ಲಿ ನೀರನ್ನು ಹರಿಸುವಂತೆ ಗಮನಹರಿಸಬೇಕೆಂದು ಈ ಮೂಲಕ ಮನವಿ.

–ಕೂರ್ಗಳ್ಳಿ, ಮೇಗಲಕೊಪ್ಪಲಿನ ನಿವಾಸಿಗಳು.

■ ಈ ರಸ್ತೆಗೆ ಡಾಂಬರೀಕರಣ ಮಾಡಿ

ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿಯ ಕ್ಯಾತನಹಳ್ಳಿ ಗ್ರಾಮದಿಂದ ಸಿಂಗರಮಾರನಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣವಾಗಿ ಹದಗೆಟ್ಟು ವರ್ಷಗಳೇ ಕಳೆದಿದೆ. ಈ ರಸ್ತೆಯು ಐದು ಊರುಗಳಿಗೆ ಸಂಪರ್ಕ ಒದಗಿಸುತ್ತದೆ. ಈ ರಸ್ತೆ ಡಾಂಬರು ಕಂಡು ತುಂಬಾ ವರ್ಷಗಳೇ ಆಗಿದೆ. ಈ ರಸ್ತೆಯಲ್ಲಿ ವಾಹನ ಸವಾರರು ಚಲಿಸಲು ತ್ರಾಸದಾಯಕವಾಗಿದ್ದು, ಹಲವು ವೇಳೆ ಅಪಘಾತಗಳಾಗುವ ಸಂಭವವಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆಗೆ ಡಾಂಬರು ಹಾಕಿ ಸಾರ್ವಜನಿಕರು, ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಕ್ಯಾತನಹಳ್ಳಿ, ಸಿಂಗರಮಾರನಹಳ್ಳಿ ಗ್ರಾಮಸ್ಥರು, ಹೆಚ್.ಡಿ. ಕೋಟೆ ತಾ.

■ ದೇವಾಲಯಗಳಲ್ಲಿ ತಾರತಮ್ಯ ಏಕೆ?

ಮಾನ್ಯರೇ

ದೇವಾಲಯಗಳಲ್ಲಿ ಗಣ್ಯ ವ್ಯಕ್ತಿಗಳಿಗೆ, ವಿಶೇಷ ಆಹ್ವಾನಿತರಿಗೆ ದೇವರ ದರ್ಶನಕ್ಕೆ ನೇರ ಪ್ರವೇಶದ ತಾರತಮ್ಯ ಎಷ್ಟು ಸರಿ? ಕೆಲವು ದೇವಾಲಯಗಳಂತೂ ಭಕ್ತಾದಿಗಳು ಬೆಳಗ್ಗೆಯಿಂದ ಮಧ್ಯಾಹ್ನದ ತನಕ ಉಪವಾಸ ಕೈಗೊಂಡು ದೇವರ ದರ್ಶನಕ್ಕಾಗಿ ಸಾಲಿನಲ್ಲಿ ನಿಂತಿರುತ್ತಾರೆ. ಇಂತಹ ಸಂದರ್ಭದಲ್ಲಿ ಜನಪ್ರತಿನಿಧಿಗಳು ದೇವಸ್ಥಾನಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಜನಸಾಮಾನ್ಯರನ್ನು ಮತ್ತಷ್ಟು ಸಾಲಿನಲ್ಲಿ ಕಾಯುವಂತೆ ಮಾಡುತ್ತಾರೆ. ವಯಸ್ಸಾದವರು, ಮಕ್ಕಳು, ಹೆಂಗಸರು, ನಿಶ್ಶಕ್ತಿಯಿಂದ ಬಳಲಿ ಸಾಲಿನಲ್ಲಿ ತಲೆ ತಿರುಗಿ ಬಿದ್ದಿರುವುದುಂಟು.

ಜನಸಾಮಾನ್ಯರಿಂದ ಆಯ್ಕೆಯಾದ ಜನಪ್ರತಿನಿಧಿಗಳು ಅಲ್ಲದೆ ಕೆಲವು ಸರ್ಕಾರಿ ಉದ್ಯೋಗದಲ್ಲಿರುವವರು ತಮ್ಮ ಸ್ವಪ್ರತಿಷ್ಠೆಯಿಂದ ವಿಶೇಷ ದರ್ಶನ ಪಡೆಯುತ್ತಾರೆ. ಕೆಲಸದ ಒತ್ತಡ, ಸಾರ್ವಜನಿಕ ಕಾರ್ಯಕ್ರಮಗಳು ಈ ಪ್ರತಿನಿಧಿಗಳಿಗೆ ಇರುವುದರಿಂದ ನೇರವಾಗಿ ದರ್ಶನ ಪಡೆದು ಬರಬಹುದೆಂದರೆ, ಸರ್ಕಾರದ ಚೌಕಟ್ಟಿನಲ್ಲಿ ಕೆಲಸ ಮಾಡುವವರು ಗಣ್ಯರು ಬರುವ ದಿನ, ಸಾರ್ವಜನಿಕರಿಗೆ ಈ ದಿನ ದೇವಾಲಯಕ್ಕೆ ಪ್ರವೇಶ ಇರುವುದಿಲ್ಲ ಎಂದು ದೇವಾಲಯದ ಮುಂದೆ ನಾಮಫಲಕ ಅಳವಡಿಸಿದರೆ ಸಾರ್ವಜನಿಕರು, ವಯಸ್ಸಾದವರು ಸಾಲಿನಲ್ಲಿ ಕಾಯುವ ಸ್ಥಿತಿ ಬರುವುದಿಲ್ಲ. ಜನರಿಂದ ಆಯ್ಕೆಯಾದವರು ಜನರ ಸಮಸ್ಯೆಗೆ ಸ್ಪಂದಿಸಬೇಕೆ ಹೊರತು ಜನರಿಗೆ ತೊಂದರೆ ಕೊಡುವುದಲ್ಲ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂದಾದರೆ ಈ ತಾರತಮ್ಯ ಏಕೆ? **–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು**

ಬಡ ರಾಜ್ಯ, ಶ್ರೀಮಂತ ರಾಜಕಾರಣಿಗಳು!





ಅನುಸಂಧಾನ

ರವೀಂದ್ರ ಭಟ್ಟ

ಆಚಾರ್ಯ ರಜನೀಶ್ ಅವರದ್ದು ಎಂದು ಹೇಳಲಾದ ವಿಡಿಯೋ ತುಣುಕೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದರಲ್ಲಿ ರಜನೀಶ್ ಅವರು ಮಹಾತ್ಮಗಾಂಧಿ ಅವರನ್ನು ಗೇಲಿ ಮಾಡಿದ್ದಾರೆ. ಗಾಂಧಿಯವರು ಸಾಧಾರಣವಾಗಿ ರೈಲ್ವೆಯ ಮೂರನೇ ದರ್ಜೆ ಬೋಗಿಯಲ್ಲಿಯೇ ಪ್ರಯಾಣ ಬೆಳೆಸುತ್ತಿದ್ದರು. 60–70 ಮಂದಿ ಪ್ರಯಾಣ ಮಾಡುವ ಮೂರನೇ ದರ್ಜೆಯ ಒಂದು ಬೋಗಿಯನ್ನು ಗಾಂಧಿ ಅವರಿಗಾಗಿಯೇ ಮೀಸಲಿಡಲಾಗುತ್ತಿತ್ತು ಎಂದು ಆರೋಪಿಸುವ ರಜನೀಶ್, 'ಗಾಂಧೀಜಿ ಅವರ ಬಡವರ ಮೇಲಿನ ಪ್ರೀತಿ ಅತಿ ದುಬಾರಿ' ಎಂದು ಟೀಕಿಸುತ್ತಾರೆ. ಗಾಂಧಿ ಅವರ ಬಡವರ ಮೇಲಿನ ಪ್ರೀತಿ ದುಬಾರಿ ಹೌದೋ ಅಲ್ಲವೋ? ಎನ್ನುವುದು ಭಾರತೀಯರಿಗೆಲ್ಲಾ ಗೊತ್ತಿದೆ. ಆದರೆ ನಮ್ಮ ರಾಜಕಾರಣಿಗಳ ಬಡವರ ಮೇಲಿನ ಪ್ರೀತಿ ಮತ್ತು ಪ್ರಾಮಾಣಿಕತನ ರಾಜ್ಯಕ್ಕೆ ದುಬಾರಿಯಾಗಿರುವುದಂತೂ ನಿಜ.

ಕೆಲವು ವರ್ಷಗಳ ಹಿಂದೆ ಮಾಜಿ ಮುಖ್ಯಮಂತ್ರಿಯೊಬ್ಬರು ಖಾಸಗಿ ಮಾತುಕತೆಯಲ್ಲಿ ಒಂದು ಮಾತು ಹೇಳಿದ್ದರು. ಆ ಮಾತು ಹೀಗಿದೆ: **'ಅತ್ಯಂತ ಪ್ರಾಮಾಣಿಕ ಮುಖ್ಯಮಂತ್ರಿ, ಹಣ ಹೊಡೆಯಲು ಯಾವುದೇ ಯೋಜನೆ ರೂಪಿಸದವರು, ಹಣಕ್ಕಾಗಿ ಯಾರ ಮೇಲೂ ಒತ್ತಡ ಹೇರದವರು ಮನೆಗೆ ಬಂದ ಹಣವನ್ನು ಹಾಗೆಯೇ ಇಟ್ಟುಕೊಂಡರೂ ವರ್ಷಕ್ಕೆ ಎರಡು ಸಾವಿರ ಕೋಟಿ ರೂಪಾಯಿ ಗಳಿಸಬಹುದು'**. ವರ್ಷಕ್ಕೆ ರೂ. 2 ಸಾವಿರ ಕೋಟಿ ಅಂದರೆ ಐದು ವರ್ಷಕ್ಕೆ ಸುಮ್ಮನೆ ರೂ. 10 ಸಾವಿರ ಕೋಟಿ ಬಂದು ಬೀಳುತ್ತದೆ ಎಂದಾಯಿತು. ಅಲ್ಲಿಗೆ ಮುಖ್ಯಮಂತ್ರಿಯೊಬ್ಬನ 'ಪ್ರಾಮಾಣಿಕತೆ' ಎಷ್ಟು ದುಬಾರಿ? ಎಂದು ಯೋಚಿಸಿ. ಜೊತೆಗೆ 34 ಮಂದಿ ಮಂತ್ರಿಗಳೂ 'ಪ್ರಾಮಾಣಿಕರು' ಎಂದುಕೊಂಡರೂ ವರ್ಷಕ್ಕೆ ಕನಿಷ್ಠ ಎಷ್ಟು ಗಳಿಸಬಹುದು ಎಂದು ಊಹಿಸಿ.

ಕರ್ನಾಟಕ ರಾಜ್ಯ ವಿಧಾನಸಭೆಯ ಈಗಿನ 224 ಶಾಸಕರ ಪೈಕಿ ಶೇ.97ರಷ್ಟು ಮಂದಿ ಕೋಟ್ಯಾಧಿಪತಿಗಳು. ಈಗಿರುವ ಶಾಸಕರ ಸರಾಸರಿ ಆಸ್ತಿ ರೂ. 64.39 ಕೋಟಿ. ಕಳೆದ ವಿಧಾನಸಭೆಯಲ್ಲಿ ಶಾಸಕರ ಸರಾಸರಿ ಆಸ್ತಿ ರೂ. 34.59 ಕೋಟಿಯಷ್ಟು ಇತ್ತು. ಅಂದರೆ ಐದು ವರ್ಷದಲ್ಲಿ ಶಾಸಕರ ಆಸ್ತಿ ಸರಿಸುಮಾರು ದುಪ್ಪಟ್ಟಾಗಿದೆ. ಸರ್ಕಾರದ ಸಾಲದ ಪ್ರಮಾಣವೂ ಹಾಗೆಯೇ ಬೆಳೆದಿದೆ. ನೆನಪಿಡಿ, ದೇಶದಲ್ಲಿಯೇ ಅತ್ಯಂತ ಹೆಚ್ಚು ಆಸ್ತಿಯನ್ನು ಹೊಂದಿದ ಶಾಸಕರ ಸಾಲಿನಲ್ಲಿ ಕರ್ನಾಟಕದ ಶಾಸಕರಿಗೇ ಮೊದಲ ಸ್ಥಾನ. ಸರ್ಕಾರ ಬಡವಾಗುತ್ತಿದೆ, ರಾಜಕಾರಣಿಗಳು ಶ್ರೀಮಂತರಾಗುತ್ತಿದ್ದಾರೆ. ಇದರ ಮ್ಯಾಜಿಕ್ ಏನಿರಬಹುದು?

ಅಧಿಕಾರದಲ್ಲಿ ಇರುವವರಿಗೆ ಹಣ ಮಾಡುವುದು ಸುಲಭ. ಸರ್ಕಾರದ ಯೋಜನೆಗಳ ಒಳಮಾಹಿತಿಗಳನ್ನು ಮೊದಲೇ ಪಡೆದು ಕೊಂಡು, ಹಣ ಮಾಡಿಕೊಳ್ಳುವ ದಾರಿಗಳನ್ನು ಅವರೇ ಸೃಷ್ಟಿಸಿಕೊಳ್ಳುತ್ತಾರೆ. ಉದಾಹರಣೆಗೆ, ಬೆಂಗಳೂರಿಗೆ ಎರಡನೇ ವಿಮಾನ ನಿಲ್ದಾಣ ಯೋಜನೆಯನ್ನೇ ನೋಡಿ. ಕೆಲವರು ಅದು ಬಿಡದಿ ಬಳಿ ಬರುತ್ತದೆ ಎನ್ನುತ್ತಾರೆ. ಇನ್ನು ಕೆಲವರು ನೆಲಮಂಗಲದ ಬಳಿ ಹೊಸ ವಿಮಾನ ನಿಲ್ದಾಣ ಸ್ಥಾಪಿಸಲಾಗುವುದು ಎನ್ನುತ್ತಾರೆ. ಅಧಿಕಾರದಲ್ಲಿ ಇರುವವರಿಗೆ ವಿಮಾನ ನಿಲ್ದಾಣ ಎಲ್ಲಿ ಬರುತ್ತದೆ ಎನ್ನುವುದು ಮೊದಲೇ ಗೊತ್ತಾಗುತ್ತದೆ. ಆ ಪ್ರದೇಶದ ಭೂಮಿ ಬೆಲೆ ಗಗನಮುಖಿಯಾಗುತ್ತದೆ. ಅಧಿಕಾರಿಗಳು, ರಾಜಕಾರಣಿಗಳು ಬೇನಾಮಿಯಾಗಿ ಅಲ್ಲಿ ಭೂಮಿ ಖರೀದಿ ಮಾಡುತ್ತಾರೆ. ಅದೇ ಭೂಮಿಯನ್ನು ಸರ್ಕಾರಕ್ಕೇ ಮಾರಾಟ ಮಾಡಿ ಹಣ ಗಳಿಸುತ್ತಾರೆ. ಸರ್ಕಾರಕ್ಕೆ ಮಾರದೇ ಇದ್ದರೂ ಭೂಮಿಯ ಬೆಲೆ ಹಲವು ಪಟ್ಟು ಹೆಚ್ಚಾಗುವುದರಿಂದ ವರ್ಷದೊಳಗೇ ಅಪಾರ ಲಾಭವಂತೂ ಗ್ಯಾರಂಟಿ.

ಈಗ ಒಂದು ನಗರದಲ್ಲಿ ವರ್ತುಲ ರಸ್ತೆ ನಿರ್ಮಾಣವಾಗುತ್ತಿದೆ ಎಂದುಕೊಳ್ಳಿ. ರಸ್ತೆಗೆ ಭೂಮಿ ವಶಪಡಿಸಿಕೊಳ್ಳುವುದು ಸರಿ. ಆ ರಸ್ತೆಯ ಅಕ್ಕಪಕ್ಕದ ಭೂಮಿಯನ್ನೂ ವಶಪಡಿಸಿಕೊಳ್ಳಲಾಗುತ್ತದೆ ಎಂದು ಇಲಾಖೆಯೊಳಗೇ ಒಂದು ಅಧಿಸೂಚನೆ ಹೊರಬೀಳುತ್ತದೆ. ಇದು ಸಾರ್ವಜನಿಕ ಅಧಿಸೂಚನೆ ಅಲ್ಲ. ಇಲಾಖೆಯ ಒಳಗೇ ಮಾಡಿಕೊಂಡಿದ್ದು. ಆದರೂ ಅದು ಯಾರಿಗೆ ತಲುಪಬೇಕೋ ಅವರಿಗೆ ತಲುಪುತ್ತದೆ. ವರ್ತುಲ ರಸ್ತೆ ಬರುತ್ತದೆ ಎಂದು ಗೊತ್ತಾದಾಗಲೇ ಅದರ ಸುತ್ತಮುತ್ತ ಭೂಮಿಯ ಬೆಲೆ ಗಗನಕ್ಕೆ ಏರಿರುತ್ತದೆ. ಜೊತೆಗೆ ಈ ಅಧಿಸೂಚನೆಯಿಂದ ಬೆದರಿದ ಭೂ ಮಾಲೀಕರು ಅಧಿಸೂಚನೆಯನ್ನು ಕೈಬಿಡುವಂತೆ ರಾಜಕಾರಣಿಗಳ ಬಳಿಗೆ ಧಾವಿಸುತ್ತಾರೆ. ವ್ಯವಹಾರ ಕುದುರುತ್ತದೆ. ರಾಜಕಾರಣಿಗಳು ಅನಾಯಾಸವಾಗಿ ಹಣ ಗಳಿಸುತ್ತಾರೆ.

ನೀರಾವರಿ ಯೋಜನೆ, ಕೈಗಾರಿಕೆಗಳ ಸ್ಥಾಪನೆ, ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬಡಾವಣೆಗಳ ನಿರ್ಮಾಣ ಮುಂತಾದ ಯೋಜನೆಗಳಲ್ಲಿಯೂ ಇದೇ ರೀತಿ ಭೂಮಿಯ ದುರ್ಬಳಕೆಯಾಗುತ್ತದೆ. ಅಧಿಸೂಚನೆ ಹೊರಡಿಸಲು, ಅಧಿಸೂಚನೆ ವಾಪಸು ಪಡೆಯಲೂ ಹಣದ ಚಲಾವಣೆ ನಡೆಯುತ್ತದೆ. ಯಾವುದೇ ಯೋಜನೆ ಬಂದರೂ ಅದರಿಂದ ಜನರಿಗೆ ಅನುಕೂಲವಾಗುತ್ತದೋ ಇಲ್ಲವೋ ಗೊತ್ತಿಲ್ಲ, ಆದರೆ ರಾಜಕಾರಣಿಗಳಿಗೆ ಮಾತ್ರ ಒಳಿತಾಗುತ್ತದೆ. ಒಳಿತಾಗದೇ ಇದ್ದರೆ ಅದನ್ನು ಒಳಿತಾಗುವಂತೆ ಮಾಡಿಕೊಳ್ಳುವುದು ಹೇಗೆ? ಎಂಬ ಕಲೆಗಾರಿಕೆ ರಾಜಕಾರಣಿಗಳಿಗೆ ಕರಗತವಾಗಿರುತ್ತದೆ.

ಯೋಜನೆಗಳ ಜಾರಿಗೆ ಬೇನಾಮಿ ಗುತ್ತಿಗೆದಾರರಾಗಿಯೂ ಕೆಲವು ರಾಜಕಾರಣಿಗಳು ಕೆಲಸ ಮಾಡುತ್ತಾರೆ. ಸಾಮಗ್ರಿ ಖರೀದಿಯಲ್ಲಿಯೂ ಹಣ ಮಾಡುತ್ತಾರೆ. ಮೊದಲೆಲ್ಲಾ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಾಗ ಕಮಿಷನ್ ಪಡೆಯುವ ಪದ್ಧತಿ ಇತ್ತು. ಈಗ ಕೆಲವು ವರ್ಷಗಳಿಂದ ಕಾಮಗಾರಿಗೆ ಆದೇಶ ಹೊರಡಿಸುವಾಗಲೇ ಕಮಿಷನ್ ಪಡೆಯುವ ಪದ್ಧತಿಯನ್ನು ಜಾರಿಗೆ ತರಲಾಗಿದೆ. ರಾಜಕಾರಣಿಗಳು ಎಷ್ಟು ಸೃಜನ ಶೀಲರಾಗಿದ್ದಾರೆಂದರೆ ಎಲ್ಲವೂ ಕಾನೂನು ಬದ್ಧವಾಗಿಯೇ ನಡೆಯುತ್ತವೆ ಮತ್ತು ಇದರಲ್ಲಿ ಆ ಪಕ್ಷ, ಈ ಪಕ್ಷ ಎಂಬ ಭೇದ–ಭಾವ ಇಲ್ಲ. ಈ ವಿಚಾರದಲ್ಲಿ ಎಲ್ಲರೂ ಒಂದು. ಅವರ ಕಿಸೆಯಲ್ಲಿ ಇವರ ಕೈ ಇವರ ಕಿಸೆಯಲ್ಲಿ ಅವರ ಕೈ ಇದ್ದೇ ಇರುತ್ತದೆ.

ವರ್ಗಾವಣೆಗೆ ಹೊತ್ತು–ಗೊತ್ತು ಇಲ್ಲ

ಇನ್ನು ವರ್ಗಾವಣೆ ಮತ್ತು ನೇಮಕಾತಿ ಕತೆ ಬೇರೆಯದೇ ಇದೆ. ಸಾಮೂಹಿಕ ವರ್ಗಾವಣೆಯದ್ದು ಒಂದು ಕತೆಯಾದರೆ, ವರ್ಷಪೂರ್ತಿ ನಡೆಯುವ ವರ್ಗಾವಣೆಯದ್ದು ಇನ್ನೊಂದು ಕತೆ. ವರ್ಗ ಮಾಡಿಸಿಕೊಳ್ಳಲೂ ಹಣ, ವರ್ಗ ರದ್ದು ಮಾಡಿಸಲೂ ಹಣ. ಆರ್‌ಟಿಒ, ಸಬ್ ರಿಜಿಸ್ಟ್ರಾರ್, ಪೊಲೀಸ್ ಇನ್‌ಸ್ಪೆಕ್ಟರ್ ಮುಂತಾದ ಹುದ್ದೆಗಳ ವರ್ಗಾವರ್ಗಿಗೆ ಹಣವೋ ಹಣ. ಈಗಿನ ಟ್ರೆಂಡ್ ಏನೆಂದರೆ, ವರ್ಗ ಮಾಡಲು ಅಥವಾ ವರ್ಗ ರದ್ದು ಮಾಡಲು ಹಣ ಕೊಡುವುದಲ್ಲದೆ ನಿಯಮಿತವಾಗಿ ಇಂತಿಷ್ಟು ಕೊಡಬೇಕು ಎಂಬ ರೇಟ್ ಫಿಕ್ಸ್ ಆಗಿದೆ.

ಲಾಭದಾಯಕ ಹುದ್ದೆ


ಬಡ್ತಿ ಯಾರಿಗೆ ಬೇಡ ಹೇಳಿ? ಆದರೆ ಆರ್‌ಟಿಒ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಬಡ್ತಿ ನೀಡದೇ ಇರಲು ಹಣ ಕೊಡುವ ಪದ್ಧತಿಯೂ ಇದೆ. ಮೇಲಿನ ಹುದ್ದೆಗಿಂತ ಇರುವ ಹುದ್ದೆಯೇ ಹೆಚ್ಚು 'ಲಾಭದಾಯಕ' ಎಂಬ ಕಾರಣ ಇದರ ಹಿಂದೆ ಇರುತ್ತದೆ. ಹಣ ಇಲ್ಲದೆ ಯಾವುದೇ ನೇಮಕಾತಿ ನಡೆಯುವ ಪರಿಸ್ಥಿತಿಯೇ ಇಲ್ಲ. ಕೆಪಿಎಸ್‌ಸಿಯಾದರೂ ಪರೀಕ್ಷೆ ನಡೆಸಲಿ, ಪರೀಕ್ಷಾ ಪ್ರಾಧಿಕಾರವಾದರೂ ಪರೀಕ್ಷೆ ನಡೆಸಲಿ ಅಥವಾ ನೇರ ನೇಮಕಾತಿಯೇ ಆಗಿರಲಿ, ಎಲ್ಲ ಕಡೆಯೂ ಝಣ ಝಣ ಕಾಂಚಾಣದ್ದೇ ಕಾರುಬಾರು.

ಅಧಿಕಾರ ನಡೆಸಿದ ಅಧಿಕಾರಿಯೇ ಆಗಲಿ, ರಾಜಕಾರಣಿಯೇ ಆಗಲಿ ಬಡವರಾದ ಉದಾಹರಣೆಗಳು ಇಲ್ಲ. ಅಧಿಕಾರಿಗಳು ನೇಮಕಾತಿ ಸಂದರ್ಭ ದಲ್ಲಿ ಬಂಡವಾಳ ಹೂಡಿದರೆ ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಿ ಬಂಡವಾಳ ಹೂಡುತ್ತಾರೆ. ಚುನಾವಣೆಗಾಗಿ ಕೋಟಿ ಕೋಟಿ ರೂಪಾಯಿ ವೆಚ್ಚ ಮಾಡುವ ರಾಜಕಾರಣಿಗಳ ಆಸ್ತಿ ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಗೆ ಹೆಚ್ಚಾಗುತ್ತದೆಯೇ ವಿನಾ ಕರಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಇದೊಂದು ಪವಾಡವೇ ಸರಿ.! ಈ ಪವಾಡದಲ್ಲಿ ಪ್ರಜೆಗಳಿಗೆ ಪಾಲಿಲ್ಲ. ಪ್ರಜಾಪ್ರಭುತ್ವವೂ ಬಡವಾಗುತ್ತಿದೆ, ರಾಜ್ಯವೂ ಬಡವಾಗುತ್ತಿದೆ, ಪ್ರಜೆಗಳೂ ಬಡವರಾಗುತ್ತಿದ್ದಾರೆ, ಇದರಿಂದ ಹೊರಬರಬೇಕು ಎಂದರೆ ಇನ್ನು ಮುಂದೆ ಬಡವರನ್ನೇ ಅಧಿಕಾರದ ಗದ್ದುಗೆಯಲ್ಲಿ ಕುಳ್ಳಿರಿಸಬೇಕು.

(ಸೌಜನ್ಯ: ಪ್ರಜಾವಾಣಿ)

> **"** ಅಧಿಕಾರ ನಡೆಸಿದ ಅಧಿಕಾರಿಯೇ ಆಗಲಿ, ರಾಜಕಾರಣಿಯೇ ಆಗಲಿ ಬಡವರಾದ ಉದಾಹರಣೆಗಳು ಇಲ್ಲ. ಅಧಿಕಾರಿಗಳು ನೇಮಕಾತಿ ಸಂದರ್ಭದಲ್ಲಿ ಬಂಡವಾಳ ಹೂಡಿದರೆ ರಾಜಕಾರಣಿಗಳು ಚುನಾವಣೆ ಸಂದರ್ಭದಲ್ಲಿ ಬಂಡವಾಳ ಹೂಡುತ್ತಾರೆ. ಚುನಾವಣೆಗಾಗಿ ಕೋಟಿ ಕೋಟಿ ರೂಪಾಯಿ ವೆಚ್ಚ ಮಾಡುವ ರಾಜಕಾರಣಿಗಳ ಆಸ್ತಿ ಒಂದು ಚುನಾವಣೆಯಿಂದ ಇನ್ನೊಂದು ಚುನಾವಣೆಗೆ ಹೆಚ್ಚಾಗುತ್ತದೆಯೇ ವಿನಾ ಕರಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ಇದೊಂದು ಪವಾಡವೇ ಸರಿ.!

ಅದಾವ ಶಕ್ತಿ ಹಿಂದೂವನ್ನ ಒಂದೆಡೆ ಸೇರಿಸಿತು...!



ನಾನಾ ಕುಚೋದ್ಯ–ಕುಹಕಗಳ ನಡುವೆಯೂ ಮಹಾ ಕುಂಭಮೇಳ ಬರೋಬ್ಬರಿ ಅರವತ್ತಾರು ಕೋಟಿ ಜನರನ್ನು ಆಕರ್ಷಿಸಿ ತನ್ನೆಡೆ ಸೆಳೆದುಕೊಂಡಿದ್ದು ಸಾಧನೆಯೇ ಸೈ.

ನಲವತ್ತು ಕೋಟಿ ಎಂದು ನಿರೀಕ್ಷಿಸಿದ್ದು ಅರವತ್ತಾರು ಕೋಟಿಗೂ ಮೀರಿ ಬಂದದ್ದು ಹೇಗೆ? ಇಷ್ಟೊಂದು ಜನ ಮುಗಿಬಿದ್ದು ಬರಲು ಕಾರಣ ಪಾಪ ಪ್ರಜ್ಞೆಯೇ? ಹಳೆಯ ಕರ್ಮ ತೊಡೆದು ಕೊಳ್ಳುವ ಹಪಾಹಪಿಯೇ. ಅಥವಾ ನಿರ್ಮಲ ಮುಗ್ಧ ಭಕ್ತಿಯೇ?

ದೈವಶ್ರದ್ಧೆಯಂತೂ ಎಲ್ಲ ಧರ್ಮೀಯರಲ್ಲೂ ಸಾಕಷ್ಟು ಇದ್ದದ್ದೇ. ಆದರೆ ಈ ಪ್ರಮಾಣದ ಅಗಾಧ ಜನ ಪ್ರಯಾಗ್‌ರಾಜ್‌ಗೆ ಮೆದೆ ಮೆದೆಯಾಗಿ ಹೋಗುವುದೆಂದರೆ? ಯಾರ ಪ್ರಚೋದನೆ, ಯಾವ ಪ್ರೇರಣೆ, ಯಾರ ಕುಮ್ಮಕ್ಕು, ಫ್ರೀ ಬಸ್ಸು, ರೈಲು ಇತ್ತೇ? ಇದಕ್ಕೆ ಯಾರ ಸಹಾಯಧನ ಕಾರಣ? ಇದೇ ಛಾನ್ಸು ಅಂತ ಬಿಜೆಪಿ ಎಲ್ಲೆಡೆಯಿಂದ ಜನರನ್ನು ಕುರಿ ತುಂಬಿ ಕಳಿಸಿದಂತೆ ಕಳಿಸಿತೇ?

ನಿಚ್ಚಳ ಸತ್ಯ ಎಲ್ಲರಿಗೂ ಗೊತ್ತು. ಹಿಂದೂಗಳನ್ನು, ಅವರ ಆಚರಣೆಗಳನ್ನು ತುಚ್ಛೀಕರಿಸಿ ಕುಹಕವಾಡುವುದು, ಹಿಂದೂ ದೇವರುಗಳನ್ನು ಅವಹೇಳನ ಮಾಡುವುದನ್ನು ಎಪ್ಪತ್ತು ವರ್ಷಗಳಿಂದ ಚಾಳಿ ಮಾಡಿಕೊಂಡ ಮೇಲೆ ಜನಸಾಮಾನ್ಯರಲ್ಲಿ ತಂತಾನೇ ಜಾಗೃತಿ ಮೂಡತೊಡಗಿದೆ. ಜನರು ತಾನೇ ವೃಥಾ ಬೈಗಳನ್ನು ಎಷ್ಟೆಂದು ಸಹಿಸಿಯಾರು? ಜೊತೆಗೆ ಹಿಂದೂ ಜಾಗೃತಿ ಸಂಘಟನೆಗಳ ನಿರಂತರ ಯತ್ನ, ಕುಹಕಿಗಳು ಕುಟುಕಿ ಬೈದಷ್ಟೂ ಜನ ಹಿಂದೂ ಧಾರ್ಮಿಕತೆಯತ್ತ ವಾಲಿದರು. ತಮ್ಮ ಅಸ್ಮಿತೆ ಯಾವುದೆಂದು ಗೋಚರವಾಗತೊಡಗಿತು.

ಟೀವಿಯಲ್ಲಿ ಬಂದ ರಾಮಾಯಣ, ಮಹಾಭಾರತ ಸೀರಿಯಲ್‌ಗಳು. ಅವುಗಳ ಯಶಸ್ಸಿನಿಂದ ಉತ್ತೇಜಿತವಾಗಿ ಬಂದ ನಾನಾ ಪೌರಾಣಿಕ ಧಾರಾವಾಹಿಗಳು. ನಂತರದಲ್ಲಿ ಎಲ್ಲ ಖಾಸಗಿ ಚಾನಲ್ ಸೀರಿಯಲ್‌ಗಳಲ್ಲಿ ಕಡ್ಡಾಯವಾಗಿ ಹಿಂದೂ ಪೂಜೆ ಪುನಸ್ಕಾರಗಳನ್ನು ತೋರಿಸಿದ್ದೇ ತೋರಿಸಿದ್ದು. ಮನೆ ಮನೆಗಳಲ್ಲಿ ಅದೇ ಬಗೆಯ ಆಚರಣೆಗಳು ಜಾತಿ ಮತ ಭೇದವಿಲ್ಲದೆ ನಡೆಯತೊಡಗಿವೆ. ಸಾಮಾಜಿಕ ಜಾಲತಾಣಗಳ ಜಾಗೃತಿಯದು ಸಹ ದೊಡ್ಡ ಕೊಡುಗೆ ಇದೆ.

ನವ ಬೌದ್ಧ ಮಂತ್ರಿ ಮಹೋದಯರು ಹಿಂದೂ ಪೂಜೆ ಪುನಸ್ಕಾರಗಳನ್ನು ಮನೆಯಲ್ಲಿ ಶಾಸ್ತ್ರೋಕ್ತವಾಗಿಯೇ ಮಾಡಿಸುವ ಫೋಟೋಗಳನ್ನು ನೋಡಿದ್ದೇವೆ. ಅವರವರ ನಂಬಿಕೆಗಳು ಏನೇ ಇರಲಿ. ತಮ್ಮ ಸ್ವಂತ ಮನೆಗಳಲ್ಲಿ ವಿಧಿವತ್ತಾಗಿ ಪೂಜೆ ಸಲ್ಲಿಸಬೇಕು ಎಂದು ಹೊರಟಾಗ ಹಿಂದೂ ಪದ್ಧತಿಯನ್ನೇ ಅನುಸರಿಸುವ ಅನಿವಾರ್ಯ ಏಕೆ?. ಕ್ರೈಸ್ತ, ಮುಸಲ್ಮಾನ ಪದ್ಧತಿಯನ್ನು ಅನುಸರಿಸಲಾರರು ಯಾಕೆ?

ಕೊನೆಗೂ ಇದೇ ನಮ್ಮ ಮನೆಯ ಧರ್ಮ ಎಂದಾಗ ಅದು ಹಿಂದೂ ಪದ್ಧತಿಯನ್ನೇ ಆಚರಿಸುವಂತೆ ಮಾಡುತ್ತದೆ.

ಒಂದು ಸಮೀಕ್ಷೆಯಲ್ಲಿ ಹೇಳಿರುವಂತೆ, ಕುಂಭಮೇಳಕ್ಕೆ ಬಂದವರಲ್ಲಿ ಹೆಚ್ಚಿನವರಿಗೆ ತಮ್ಮ ಪಾಪಗಳನ್ನು ತೊಳೆದುಕೊಳ್ಳುವುದಕ್ಕಿಂತ, ಗತಿಸಿದ ತಮ್ಮ ಹಿರಿಯರಿಗೆ ಸದ್ಗತಿ ಕೋರುವುದೇ ಮುಖ್ಯವಾಗಿತ್ತಂತೆ.

ಬದುಕಿದ್ದಾಗ ತಮ್ಮ ತಂದೆ ತಾಯಂದಿರು ಏನೆಲ್ಲಾ ಕಷ್ಟ–ನಷ್ಟಗಳನ್ನು ಅನುಭವಿಸಿದ್ದರೂ ಸುಖಪಡಲಿಲ್ಲವೆಂಬ ಕೊರಗು ಎಲ್ಲ ಮಕ್ಕಳಿಗೆ. ತಾವು ಚೆನ್ನಾಗಿ ಬಾಳುವ ಬದುಕು ಕಟ್ಟಿಕೊಂಡಾಗ, ಜನ್ಮದಾತರು ಇನ್ನೂ ಉತ್ತಮ ರೀತಿಯಲ್ಲಿ ಬದುಕಲು ಎಲ್ಲ ರೀತಿಯಲ್ಲೂ ಅರ್ಹರಾಗಿದ್ದರು ಎಂಬ ನೋವು ಬಹುತೇಕರಿಗೆ. ಇನ್ನೂ ಕೆಲವರು ಹೆತ್ತವರು ಬದುಕಿದ್ದಾಗ ಕಟಕಿಯಾಡಿ ಕಹಿಯಾಗಿ ನಡೆದುಕೊಂಡಿರುತ್ತಾರೆ. ತಮ್ಮ ಕಟುತ್ವಕ್ಕೆ ಹೆತ್ತವರು ನೊಂದು–ಬೆಂದದ್ದು ಈಗ ಅರಿವಾಗಿ ಪಾಪ ಪ್ರಜ್ಞೆ ಕಾಡುತ್ತಿರುತ್ತೆ. ಸದ್ಗತಿ ಕೋರುವುದರಿಂದಲಾದರೂ ಪಿತೃಋಣ ತೀರಿಸಬಹುದೆಂಬ ಆಕಾಂಕ್ಷೆ ಅಷ್ಟೊಂದು ಜನರನ್ನು ಎಳೆತರಲು ಮುಖ್ಯ ಕಾರಣವಂತೆ. ಉಳಿದವರಲ್ಲಿ ಹಿಂದೂ ಧಾರ್ಮಿಕ ಜಾಗೃತಿ, ಮೋಜಿನ ಭೇಟಿ ಎಲ್ಲವೂ ಸೇರಿವೆ.

144 ವರ್ಷಕ್ಕೊಮ್ಮೆ ಎಂಬುದೇ ಭೇಟಿಯ ಒತ್ತಾಸೆಗೆ ಮುಖ್ಯ ಕಾರಣ. ಅಂತೂ ಯಾವುದೋ ಒಂದು ಕಾರಣ. ಭರತ ಖಂಡದ ಇಷ್ಟೊಂದು ಜನರಿಗೆ ತಮ್ಮ ಸ್ವಂತ ಧರ್ಮ ಯಾವುದೆಂಬ ಜಾಗೃತಿ ಮೂಡಿತಲ್ಲಾ? ಅದು ಎಲ್ಲಕ್ಕಿಂತ ಬಹುಮುಖ್ಯ. ಮೂರು ಮತ್ತೊಂದು ಚಿಲ್ರೆ ಪಕ್ಷಗಳು ತಮ್ಮ ಅಧಿಕಾರ ಲಾಲಸೆಗಾಗಿ ಎಲ್ಲ ಧರ್ಮಗಳನ್ನೂ ಒತ್ತೆ ಇಟ್ಟುಕೊಂಡು ಆಟವಾಡಿಸುತ್ತಿರುವ ಈ ದಿನಗಳಲ್ಲಿ ಹಿಂದೂಗಳಿಗೆ ಒಂದು ಜಾಗೃತಿ ಬೇಕಿತ್ತು. ಅದು ಪರರ ಮತಗಳನ್ನು ದ್ವೇಷಿಸುವುದಕ್ಕಲ್ಲ. ತನ್ನದೇ ಅಸ್ತಿತ್ವ ಕಾಪಾಡಿಕೊಳ್ಳುವುದಕ್ಕೆ.

ಈವತ್ತು ಕ್ರೈಸ್ತರು, ಮುಸ್ಲೀಮರು ತಮ್ಮ ಧಾರ್ಮಿಕ ಶ್ರದ್ಧೆಯನ್ನು ನಿಯಮಿತವಾಗಿ ಆಚರಿಸಲು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಪ್ರತಿ ಭಾನುವಾರ ಕ್ರೈಸ್ತರು ಕುಟುಂಬ ಸಮೇತ ಚರ್ಚ್‌ಗೆ ಅಚ್ಚುಕಟ್ಟಾದ ಉಡುಗೆ ತೊಡುಗೆಯಲ್ಲಿ ಹೋಗುತ್ತಾರೆ. ಮುಸ್ಲಿಮರು ಐದು ಬಾರಿ ನಮಾಜ್ ಮಾಡುವುದಷ್ಟೇ ಅಲ್ಲ, ಪ್ರತಿ ಶುಕ್ರವಾರ ಮಸೀದಿಗೆ ತಪ್ಪದೇ ಭೇಟಿ ನೀಡುತ್ತಾರೆ. ಭಗವಂತನ ಸಾನ್ನಿಧ್ಯದ ಅನುಭೂತಿ ಪಡೆಯುತ್ತಾರೆ.

ಅದೇ ಹಿಂದೂಗಳು ಗ್ಯಾನ ಬಂದ ಗಿರಾಕಿಗಳು. ಹೋದರೆ ಹೋದ್ರು ಇಲ್ಲದಿದ್ರೆ ಇಲ್ಲವೇ ಇಲ್ಲ. ಹಬ್ಬದ ದಿನವೂ ದೇವಾಲಯಕ್ಕೆ ಹೋಗರು. ಅವರ ಭಕ್ತಿ ಏನಿದ್ದರೂ **ಸಂಕಟ ಬಂದಾಗ ವೆಂಕಟರಮಣ! ಈ ಅಶಿಸ್ತಿನ ಸಮುದಾಯಕ್ಕೆ ಮಹಾ ಕುಂಭಮೇಳ ತಮ್ಮ ಅಸ್ಮಿತೆ ನೆನಪಿಸಿದೆ. ತಾನ್ಯಾರು ಎಂಬುದಕ್ಕೆ ಉತ್ತರ ಒದಗಿಸಿದೆ.**

ವಿಪಕ್ಷಗಳಿಗೆ ಹಿಂದೂಗಳ ಒಗ್ಗೂಡುವಿಕೆಗೆ ಇನ್ನಿಲ್ಲದ ತಳಮಳ. ಎಲ್ಲಿ ಈ ಜನರ ಮತಗಳೆಲ್ಲವೂ ಬಿಜೆಪಿ ಜೋಳಿಗೆಗೆ ಬೀಳುತ್ತವೋ ಎಂಬ ಭಯ!

ಅಂತಹುದೇನೂ ಆಗದು. ವಿಪಕ್ಷಗಳ ಹಿಂದೂ ವೈರತ್ವದ ಹೀನತನದಿಂದಾಗಿ ಕೆಲವು ಮತ ಬಿಜೆಪಿಯತ್ತ ವಾಲಬಹುದೇನೋ? ಎಲ್ಲರದೂ ಅಲ್ಲ. ಅಯೋಧ್ಯೆಯ ನೆಲದಲ್ಲೇ ಬಿಜೆಪಿ ಹೀನಾಯವಾಗಿ ಸೋಲಲಿಲ್ಲವೇ? ಆದರೆ ಜನತೆ ಯಾರನ್ನು ಆಯ್ಕೆ ಮಾಡಬೇಕೋ ಅವರನ್ನೇ ಮಾಡುತ್ತಾರೆ. ಹಿಂದುತ್ವದ ಜಾಗೃತಿಗೂ, ಮತದಾನಕ್ಕೂ ಲಿಂಕ್ ಕಡಿಮೆ.



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಶುಕ್ರವಾರ 28 ಫೆಬ್ರವರಿ 2025

ಹಾಸನ ಮಿತ್ರ

ಶ್ರೀ ಶಿವಕುಮಾರ ಸ್ವಾಮೀಜಿ ಸ್ವಸಹಾಯ ಸಂಘದಿಂದ 6ನೇ ವರ್ಷದ ಅನ್ನದಾನ



ಆರನೇ ವರ್ಷದ ಅನ್ನದಾನ ಕಾರ್ಯಕ್ರಮ ನೆರವೇರಿಸಲಾಯಿತು.

ಹಾಸನ, ಫೆ.27– ನಗರದ ಸುಭಾಷ್ ಚೌಕದಲ್ಲಿರುವ ಶ್ರೀ ಮಲ್ಲೇಶ್ವರ ಸ್ವಾಮಿ ದೇವಾಲಯದ ಬಳಿ ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಶ್ರೀ ಶಿವಕುಮಾರ ಸ್ವಾಮೀಜಿ ಸ್ವಸಹಾಯ ಸಂಘದ ಸಂಯುಕ್ತಾಶ್ರಯದಲ್ಲಿ ಆರನೇ ವರ್ಷದ ಅನ್ನದಾನ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಮೊದಲು ಶ್ರೀ ಮಲ್ಲೇಶ್ವರ ಸ್ವಾಮಿ, ಶ್ರೀರಾಮ, ಶ್ರೀ ಶಿವಕುಮಾರ ಸ್ವಾಮೀಜಿ ಮತ್ತು ಪುನೀತ್ ರಾಜಕುಮಾರ್ ಭಾವ ಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿದ ಬಳಿಕ ಸಾರ್ವಜನಿಕರಿಗೆ ಪ್ರಸಾದ ರೂಪದಲ್ಲಿ ರುಚಿಕರವಾದ ಅನ್ನದಾನ ದಾಸೋಹವನ್ನು ನೆರವೇರಿಸಿದರು. ಮಧ್ಯಾಹ್ನದಿಂದ ಸಂಜೆವರೆಗೂ ಸಾವಿರಾರು ಜನರಿಗೆ ಅನ್ನದಾನ ಮಾಡಲಾಯಿತು. ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಸಾಲನ್ನು ಮಾಡಿ ಸರದಿ ಸಾಲಿನ ಮೂಲಕ ಅಚ್ಚುಕಟ್ಟಾಗಿ ಯಾವ ಗೊಂದಲ ಆಗದಂತೆ ಬ್ಯಾರಿಕೇಡ್ ಅಳವಡಿಸಲಾಗಿತ್ತು.

ಇದೇ ವೇಳೆ ಕುಮಾರ್ ಮೆಲೋಡಿಯಸ್‌ನಿಂದ ದೇವ ಭಕ್ತಿಗೀತೆ ಹಾಡಲಾಯಿತು. ಜೂನಿಯರ್ ರಾಜಕುಮಾರ್, ವಿಜಯಕುಮಾರ್ ಅವರು ಕನ್ನಡ ಹಾಡನ್ನು ಹಾಡುವ ಮೂಲಕ ಮನರಂಜಿಸಿದರು. ಶ್ರೀ ಶಿವಕುಮಾರ ಸ್ವಾಮೀಜಿ ಸ್ವಸಹಾಯ ಸಂಘದ ಅಧ್ಯಕ್ಷ ಎ.ಎನ್.ರವಿಕುಮಾರ್ ಮತ್ತು ಹನುಮಂತೇಗೌಡ ಮಾತನಾಡಿದರು. ಗೌರವಾಧ್ಯಕ್ಷ ಪ್ರವೀಣ್ ಜೈನ್, ಪ್ರಧಾನ ಅರ್ಚಕರಾದ ಪ್ರಸನ್ನ, ಉಪಾಧ್ಯಕ್ಷ ಹರೀಶ್, ನಾಗರಾಜು, ರಘುರಾಮ್, ದಿನೇಶ್, ಸದಸ್ಯರಾದ ಶಶಿಧರ್, ಬಸವರಾಜು, ಮಂಜೇಗೌಡ, ಸುರೇಶ್, ಶಿವರಾಜು, ನವೀನ್, ದಿಲೀಪ್, ಧರ್ಮೇಂದ್ರ, ರವಿ, ಸಚಿನ್ ಇದ್ದರು.

ಪತಂಜಲಿಯಿಂದ ನರ ದೌರ್ಬಲ್ಯ ಯೋಗಾಸನ

ಹಾಸನ, ಫೆ.27–ನಗರದ ಬೇಲೂರು ರಸ್ತೆ ಬಳಿ ಇರುವ ವಿಜಯನಗರ ಪತಂಜಲಿ ಯೋಗ ಸಂಘವು ತಮ್ಮ ಯೋಗ ಭವನದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಗುರುವಾರ ಬೆಳಿಗ್ಗೆ 5 ಗಂಟೆಗೆ ನರ ದೌರ್ಬಲ್ಯ ನಿವಾರಿಸುವ ಯೋಗಾಸನವನ್ನು ಪತಂಜಲಿ ಜಿಲ್ಲಾ ಸಂರಕ್ಷಕರಾದ ಲೋಕನಾಥ್ ಹೇಳಿಕೊಟ್ಟರು.

ನರ, ಮೂಳೆ ದೌರ್ಬಲ್ಯ ಇದೆ ಹಾಗೂ ಬಾರದಂತೆ ಜಾಗೃತಿವಹಿಸಲು ಮುನ್ನೆಚ್ಚರಿಕೆಯ ಯೋಗಾಸನವನ್ನು ಹೇಳಿಕೊಡಲಾಯಿತು. ನೂರಾರು ಜನ ಯೋಗಾಸಕ್ತರು ಇದರಲ್ಲಿ ಭಾಗವಹಿಸಿ ಪ್ರಯೋಜನ ಪಡೆದುಕೊಂಡರು. ಯೋಗಾಸನದ ಕೊನೆಯಲ್ಲಿ ಶಾಂತಿ ಮಂತ್ರ ಹೇಳಿಕೊಡಲಾಯಿತು. ದೊಡ್ಡವರ ಜೊತೆಯಲ್ಲಿ ಮಕ್ಕಳು ಕೂಡ ಯೋಗಾಸನದಲ್ಲಿ ಭಾಗವಹಿಸಿರುವುದು ವಿಶೇಷವಾಗಿತ್ತು. ಇದೆ ವೇಳೆ ಪತಂಜಲಿ ಯೋಗ ಸಮಿತಿ ಜಿಲ್ಲಾ ಸಂರಕ್ಷಕ ಲೋಕನಾಥ್ ಅವರು ಯೋಗಾಸನ ಮಾಡುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಮಾಹಿತಿ ನೀಡಿದರು. ಪ್ರತಿನಿತ್ಯ ಕೆಲ ಸಮಯ ಯೋಗಾಸನಕ್ಕಾಗಿ ಸಮಯ ಮೀಸಲಿಡುವಂತೆ ಸಲಹೆ ನೀಡಿದರು.

ಗಾಣಿಗರಬೀದಿ ದೇವಾಲಯದಲ್ಲಿ ಜಾಗರಣೆ

ಹಾಸನ: ಮಹಾಶಿವರಾತ್ರಿ ಅಂಗವಾಗಿ ನಗರದ ಅರಳೇಪೇಟೆ ರಸ್ತೆ ಬಳಿ ಇರುವ ಗಾಣಿಗರ ಬೀದಿಯಲ್ಲಿ ಶ್ರೀ ಕನ್ನಂಬಾಡಿಯಮ್ಮ, ಶ್ರೀ ಕೆಂಚಾಮ್ಮ ದೇವಸ್ಥಾನದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಇದೆ ವೇಳೆ ದೇವರ ಭಜನೆ ನಡೆಸಲಾಯಿತು. ನಂತರ ಮಹಾ ಮಂಗಳಾರತಿ ಜೊತೆಗೆ ತೀರ್ಥ ಪ್ರಸಾದ ವಿತರಿಸಲಾಯಿತು. ನಂತರ ನಿವಾಸಿಗಳಿಗೆ ವಿವಿಧ ಆಟೋಟಗಳನ್ನು ನಡೆಸಲಾಯಿತು. ಇಲ್ಲಿನ ಕೆಲ ನಿವಾಸಿಗಳು ಜಾಗರಣೆ ಮಾಡಿ ದೇವರ ಕೃಪೆಗೆ ಪಾತ್ರರಾದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪಗೆ ಹುಟ್ಟುಹಬ್ಬದ ಶುಭಾಶಯ...



ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅವರು ಹುಟ್ಟುಹಬ್ಬದ ಶುಭ ಕೋರಿ, ಅಭಿನಂದಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಮಾಜಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಇದ್ದರು.

ಬೇಲಿಯೇ ಎದ್ದು ಹೊಲ ಮೇಯ್ದಂತೆ ಡಿಕೆಶಿ ತೆಲಂಗಾಣಕ್ಕೆ ನೀರು ಬಿಟ್ಟಿದ್ದಾರೆ



ಆರ್.ಅಶೋಕ್

ಬೆಂಗಳೂರು: ಆಲಮಟ್ಟಿ ಜಲಾಶಯದಿಂದ ತೆಲಂಗಾಣಕ್ಕೆ ರಾಜ್ಯ ಸರ್ಕಾರ ನೀರು ಬಿಟ್ಟಿದೆ. ನೆಲದ ಜಲದ ವಿಚಾರ ಬಂದಾಗ ಕರ್ನಾಟಕದ ಜನತೆಗೆ ಕಾಂಗ್ರೆಸ್ ದ್ರೋಹ ಬಗೆದಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ. ವಿಧಾನಸೌಧದಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಈ ವೇಳೆ ತೆಲಂಗಾಣ ಕಾಂಗ್ರೆಸ್ ಸರ್ಕಾರವನ್ನು ತೃಪ್ತಿಪಡಿಸಲು ಸ್ವಾರ್ಥಕ್ಕಾಗಿ ಉಪ ಮುಖ್ಯಮಂತ್ರಿ ಡಿಕೆಶಿ ನೀರು ಬಿಟ್ಟಿದ್ದಾರೆ. ಕರ್ನಾಟಕದಲ್ಲಿ ಬರದ ಛಾಯೆ ಶುರುವಾಗಿದೆ. ಬರಗಾಲ ಇದೆ ಎಂದು ಪ್ರಿಯಾಂಕ್ ಖರ್ಗೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಭೆ ಮಾಡುತ್ತಾರೆ. ಆದರೆ ಬೇಲಿಯೇ ಎದ್ದು ಹೊಲ ಮೇಯ್ದಂತೆ ಡಿಕೆಶಿ ತೆಲಂಗಾಣಕ್ಕೆ ನೀರು ಬಿಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ನೀರು ಬಿಟ್ಟ ವಿಚಾರವನ್ನು ಎಂ.ಬಿ.ಪಾಟೀಲ್ ಬಳಿ ಕೇಳಿದರೆ ನನಗೆ ಮಾಹಿತಿಯೇ ಇಲ್ಲ ಎನ್ನುತ್ತಾರೆ. ಹೆಚ್ಚು ನೀರಿದ್ದು, ಅದನ್ನು ಬಿಟ್ಟರೆ ಏನು ತಪ್ಪು ಎಂದು ಡಿಕೆಶಿ ಹೇಳುತ್ತಾರೆ. ನೀರಿನ ವಿಚಾರವಾಗಿ ಅವರ ಸ್ನೇಹಿತರಾದ ತಮಿಳುನಾಡಿನವರನ್ನು ಡಿಕೆಶಿ ಕೇಳಲಿ. ಬರಗಾಲದಲ್ಲಿ ರಾಜ್ಯದ ಜನರಿಗೆ ಅಪಾಯವಾದರೆ ಕಾಂಗ್ರೆಸ್ ಸರ್ಕಾರವೇ ಹೊಣೆ ಎಂದು ಎಚ್ಚರಿಸಿದ್ದಾರೆ.

ನಾನು ಬಿಜೆಪಿಗೆ ಹತ್ತಿರ ಎಂಬುದು ಸುಳ್ಳು, ನಾನು ಎಲ್ಲ ಧರ್ಮ ಪ್ರೀತಿಸುತ್ತೇನೆ



ಬೆಂಗಳೂರು, ಫೆ.27– ನಾನು ಬಿಜೆಪಿಗೆ ಹತ್ತಿರವಾಗುತ್ತಿದ್ದೇನೆ ಎಂಬುದೆಲ್ಲ ಸುಳ್ಳು. ಅದೆಲ್ಲವೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆಯಷ್ಟೇ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಾನು ಹುಟ್ಟು ಕಾಂಗ್ರೆಸ್ಸಿಗ ಆದರೂ, ನನ್ನ ವೈಯಕ್ತಿಕ ನಂಬಿಕೆ ನಾನು ಪಾಲಿಸುತ್ತೇನೆ. ನಾನು ಎಲ್ಲ ಧರ್ಮವನ್ನೂ ಪ್ರೀತಿಸುತ್ತೇನೆ ಮತ್ತು ಗೌರವಿಸುತ್ತೇನೆ. ನಾನು ಜನ್ಮತಃ ಹಿಂದುವಾಗಿದ್ದು, ಹಿಂದುವಾಗಿಯೇ ಜೀವಿಸಿ, ಹಿಂದುವಾಗಿಯೇ ಸಾಯುತ್ತೇನೆ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಇಶಾ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ ಅವರು ಶಿವರಾತ್ರಿ ಕಾರ್ಯಕ್ರಮಕ್ಕೆ ಆಹ್ವಾನಿಸಲು ಭೇಟಿಯಾಗಿದ್ದರು. ಅದರಲ್ಲಿ ಕೇಂದ್ರ ಸಚಿವ ಅಮಿತ್ ಶಾ ಪಾಲ್ಗೊಂಡಿದ್ದರು. ಹಾಗೆಯೇ ನಾನು ಇತ್ತೀಚೆಗೆ ಮಹಾಕುಂಭಮೇಳದಲ್ಲಿ ಪಾಲ್ಗೊಂಡಿದ್ದೆ. ಈ ಎಲ್ಲ ಕಾರಣದಿಂದಾಗಿ ನಾನು ಬಿಜೆಪಿಗೆ ಹತ್ತಿರವಾಗುತ್ತಿದ್ದೇನೆ ಎಂಬುದೆಲ್ಲ ಸುಳ್ಳು ಎಂದರು.

ದೆಹಲಿ ಪ್ರವಾಸದ ವೇಳೆ ಎಐಸಿಸಿ ಕಚೇರಿ ಭೇಟಿ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಕೆಪಿಸಿಸಿ ಅಧ್ಯಕ್ಷ. ಎಐಸಿಸಿ ಕಚೇರಿ ನನಗೆ ದೇವಸ್ಥಾನವಿದ್ದಂತೆ. ಯಾವುದೇ ನಾಯಕರನ್ನೂ ಭೇಟಿ ಮಾಡದಿದ್ದರೂ ಎಐಸಿಸಿ ಕಚೇರಿಗೆ ಹೋಗಿ ಬರುತ್ತೇನೆ. ಆ ಕಚೇರಿಯೇ ನನ್ನನ್ನು ಈ ಸ್ಥಾನದಲ್ಲಿ ಕೂರಿಸಿದೆ. ನಾನು ಕಾಂಗ್ರೆಸ್ ಕಚೇರಿಗೆ ಹೋಗದೆ ಬಿಜೆಪಿ ಕಚೇರಿಗೆ, ಕೇಶವ ಕೃಪಕ್ಕೆ ಹೋಗಲು ಸಾಧ್ಯವೇ ಎಂದರು. ಆ ದೇವಸ್ಥಾನದಲ್ಲಿ ಏನು ಪ್ರಾರ್ಥಿಸಿದಿರಿ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ನಾನು ಯಾವುದೇ ಪ್ರಾರ್ಥನೆ ಮಾಡುವ ಅವಶ್ಯಕತೆಯಿಲ್ಲ. ಎಐಸಿಸಿ ಕಚೇರಿ ಸಿಬ್ಬಂದಿಯನ್ನು ಮಾತನಾಡಿಸಿಕೊಂಡು ಬರುತ್ತೇನೆ. ಆದರೂ, ಪ್ರಯತ್ನಗಳು ವಿಫಲವಾದರೂ, ಪ್ರಾರ್ಥನೆ ವಿಫಲವಾಗುವುದಿಲ್ಲ ಎಂದರು.

ಪತ್ರಕರ್ತರು ಸಮಾಜ ತಿದ್ದುವ ಕೆಲಸ ಮಾಡಬೇಕು

'ಏನ್ ಸಮಾಚಾರ..!' ಮಾಧ್ಯಮ ಹಬ್ಬದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಸಲಹೆ

ಮೈಸೂರು, ಫೆ.27(ಜಿಎ)–ಪತ್ರಕರ್ತರು ಸಮಾಜವನ್ನು ತಿದ್ದುವ ಕೆಲಸ ಮಾಡಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ವತಿಯಿಂದ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಏನ್ ಸಮಾಚಾರ..!' ಮಾಧ್ಯಮ ಹಬ್ಬ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಪತ್ರಿಕೋದ್ಯಮ ಸಾಕಷ್ಟು ಬದಲಾಗಿದ್ದು, ಒಂದೇ ವಿಚಾರದ ಬಗ್ಗೆ ಬೆಳಗ್ಗೆಯಿಂದ ಸಂಜೆವರೆಗೂ ಚರ್ಚಿಸುತ್ತಿದ್ದಾರೆ. ಈ ಹಿಂದೆ ಪತ್ರಿಕೆಗಳನ್ನು ಓದಿ ವಿದ್ಯಮಾನಗಳನ್ನು ತಿಳಿದುಕೊಳ್ಳುತ್ತಿದ್ದರು. ಈಗ ತಂತ್ರಜ್ಞಾನದಿಂದ ಡಿಜಿಟಲ್ ಬಳಸಿಕೊಳ್ಳುತ್ತಾರೆ ಎಂದರು.

ಮಕ್ಕಳಿಗೆ ಹೆಚ್ಚು ಓದುವ ಹವ್ಯಾಸವಿಲ್ಲ. ನಿಜವಾದ ಪತ್ರಕರ್ತರಾದವರು ಚೆನ್ನಾಗಿ ಓದಬೇಕು. ನೀವು ಬರೆದ ಲೇಖನದ ಬಗ್ಗೆ ಮಾತನಾಡಬೇಕು. ಸುದ್ದಿಯಲ್ಲಿ ನಿಖರತೆ, ವಸ್ತು ನಿಷ್ಠೆ, ಪ್ರಾಮಾಣಿಕತೆ ಇರಬೇಕು. ಪತ್ರಿಕೋದ್ಯಮದಲ್ಲಿ ತನ್ನತನ ಬಹಳ ಮುಖ್ಯ. ಅದನ್ನು ಬೆಳೆಸಿಕೊಳ್ಳಿ. ಆತುರದಿಂದ ಡಿಜಿಟಲ್ ಮಾಧ್ಯಮದಲ್ಲಿ ತಪ್ಪು ವರದಿಗಳು ಬರುತ್ತಿವೆ. ಮರುದಿನ ಪತ್ರಿಕೆ ಓದಿದಾಗ ಆ ಸುದ್ದಿ ಇರುವುದಿಲ್ಲ. ಪತ್ರಿಕೆಗಳು ಸತ್ಯದಿಂದ ಕೂಡಿರುತ್ತವೆ. ಇಂದು ಸತ್ಯಕ್ಕಿಂತ ಸುಳ್ಳು ತುಂಬಾ ವೈರಲ್ ಆಗುತ್ತಿದೆ. ಸುಳ್ಳು ಸುದ್ದಿ ಬರಬಾರದು. ಅದರ ಬಗ್ಗೆ ಎಚ್ಚರವಿರಲಿ ಎಂದು ಕಿವಿಮಾತು ಹೇಳಿದರು.



ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ 'ಏನ್ ಸಮಾಚಾರ..!' ಮಾಧ್ಯಮ ಹಬ್ಬ ಸಮಾರಂಭವನ್ನು ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಉದ್ಘಾಟಿಸಿದರು.

ಎನ್‌ಡಿಟಿವಿ ಮಾಜಿ ಕಾರ್ಯನಿರ್ವಾಹಕ ಸಂಪಾದಕಿ ಮಾಯಾ ಶರ್ಮಾ ಮಾತನಾಡಿ, ಪತ್ರಕರ್ತರಿಗೆ ವಿಶ್ವಾಸಾರ್ಹತೆ ಮುಖ್ಯ. ವೃತ್ತಿ ಜೀವನದಲ್ಲಿ ಹಲವಾರು ಪ್ರಭಾವಿಗಳು, ಅಧಿಕಾರಿಗಳು, ಸೆಲೆಬ್ರಿಟಿಗಳು ಪರಿಚಯವಾಗುತ್ತಾರೆ. ಈ ವೇಳೆ ನೀವು ನಿಮ್ಮತನವನ್ನು ಬಿಡದೆ ಪ್ರಾಮಾಣಿಕತೆ ಹಾಗೂ ಸರಳತೆಯಿಂದಲೇ ವರ್ತಿಸಬೇಕಾಗುತ್ತದೆ. ನಿಮ್ಮ ವೃತ್ತಿಯಲ್ಲಿ ವಿಶ್ವಾಸಾರ್ಹತೆ ಬಹಳ ಮುಖ್ಯವಾಗುತ್ತದೆ. ಪತ್ರಕರ್ತರು ಸತ್ಯದ ಪರವಾಗಿ ಕಾರ್ಯನಿರ್ವಹಿಸಬೇಕೆ ಹೊರತು ಬಲ ಅಥವಾ ಎಡ ಪಂಥಗಳಿಗೆ ವಾಲದೆ ನೇರ ಹಾಗೂ ನಿಷ್ಠೂರತೆಯಿಂದ ನ್ಯಾಯಪರವಾಗಿರಬೇಕು ಸಲಹೆ ನೀಡಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷೆ ಆಯೇಷಾ ಖಾನಂ ಮಾತನಾಡಿ, ಪತ್ರಕರ್ತರು ಪ್ರಶ್ನಿಸುವ ಪ್ರವೃತ್ತಿ ಬೆಳೆಸಿಕೊಳ್ಳದಿದ್ದರೆ ಪತ್ರಕರ್ತರಾಗಲು ಯೋಗ್ಯರಲ್ಲ. ತರಗತಿಯಲ್ಲೇ ಆಗಲಿ ಅಥವಾ ವೃತ್ತಿ ಜೀವನದಲ್ಲೇ ಆಗಲಿ ಪ್ರಶ್ನಿಸುವ ಪ್ರವೃತ್ತಿಯನ್ನು ಯುವ ಪತ್ರಕರ್ತರು ಬೆಳೆಸಿಕೊಳ್ಳಬೇಕು. ಅದರಲ್ಲೂ ಪತ್ರಕರ್ತರಾಗುವ ಉದ್ದೇಶ ಹೊಂದಿರುವ ನೀವು ಸಮಾಜದ ಹಿತಕ್ಕೆ ಪೂರಕವಾಗುವ ಸಂಗತಿಗಳ ಬಗೆಗೆ ಹೆಚ್ಚು ಗಮನ ಹರಿಸಬೇಕು ಎಂದು ಹೇಳಿದರು.

ಜಿಲ್ಲಾ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ವರದಿಗಾರರೇ ಸುದ್ದಿ ಮನೆಯ ಬೆನ್ನೆಲುಬು. ನೀವು ನೀಡುವ ವರದಿ ಆಧರಿಸಿ ಕೇಂದ್ರ ಕಚೇರಿ ಕಾರ್ಯನಿರ್ವಹಿಸುತ್ತದೆ. ಆದ್ದರಿಂದ ದೆಹಲಿ ಹಾಗೂ ಬೆಂಗಳೂರಿನಂತಹ ಕೇಂದ್ರ ಸ್ಥಳಗಳಲ್ಲಿ ಕಾರ್ಯನಿರ್ವಹಿಸುವ ವರದಿಗಾರರಷ್ಟೇ ನಿಮ್ಮ ಜವಾಬ್ದಾರಿಯೂ ಹೆಚ್ಚಿರುತ್ತದೆ ಎಂದರು.

ಮುದ್ರಣ ಮಾಧ್ಯಮ ಆಯ್ತು, ಎಲೆಕ್ಟ್ರಾನಿಕ್ ಮೀಡಿಯಾಗಳು ಆಯ್ತು ಈಗ ಡಿಜಿಟಲ್ ಮಾಧ್ಯಮಗಳ ಕಾಲ. ಇಡೀ ವಿಶ್ವವೇ ಒಂದು ಗ್ಲೋಬಲ್ ವಿಲೇಜ್ ಎಂಬಂತಾಗಿದೆ. ಕೈ ಬೆರಳಿನ ತುದಿಯಲ್ಲೇ ಸಮಗ್ರ ಮಾಹಿತಿಯೂ ಲಭ್ಯ. ಆದ್ದರಿಂದ ಹೊಸ ಹೊಸ ತಂತ್ರಜ್ಞಾನಗಳ ಬಗ್ಗೆ ಕುತೂಹಲ ಬೆಳೆಸಿಕೊಂಡು ಅದನ್ನು ಕಲಿಯುವ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಮಾಧ್ಯಮ ಅಕಾಡೆಮಿ ರಾಜ್ಯ ಸರ್ಕಾರದ ಸಹಯೋಗದಲ್ಲಿ ತಾಂತ್ರಿಕ ತರಬೇತಿ ನೀಡಲು ಯೋಜನೆ ರೂಪಿಸುತ್ತದೆ. ಇದನ್ನು ಯುವ ಪತ್ರಕರ್ತರು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಸಾಮಾಜಿಕ ಜಾಲತಾಣ, ವೆಬ್‌ಸೈಟ್, ಫೋಡ್ ಕಾಸ್ಟಿಂಗ್ ಅನಾವರಣಗೊಳಿಸಲಾಯಿತು. ಈ ವೇಳೆ ಮಾಧ್ಯಮ ಅಕಾಡೆಮಿಯ ರಿಜಿಸ್ಟ್ರಾರ್ ಸಹನಾ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥೆ ಪ್ರೊ.ಎನ್.ಮಮತಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ. ಹರೀಶ್, ಮಾಧ್ಯಮ ಅಕಾಡೆಮಿ ಸದಸ್ಯೆ ಎಂ.ಸಿ.ಶೋಭಾ ಉಪಸ್ಥಿತರಿದ್ದರು.

> ಪತ್ರಿಕೋದ್ಯಮದ ಭವಿಷ್ಯ ನಿಮ್ಮ ಕೈಯ್ಯಲ್ಲಿ ಇದೆ. ಉತ್ತಮ ಪತ್ರಕರ್ತರಾಗಬೇಕು ಎಂದರೆ ಒಂದು ವಿಷಯವನ್ನು ಹೊಸತನದಿಂದ ವಿಶ್ಲೇಷಣೆ ಮಾಡಬೇಕು. ಆಳವಾದ ಅಧ್ಯಯನ ಬಹಳ ಮುಖ್ಯ. ಯಾವುದು ಸತ್ಯ ಎಂಬುದನ್ನು ಅರಿತುಕೊಳ್ಳಿ. –ಪ್ರೊ.ಲೋಕನಾಥ್

ಮೈಸೂರು ಜಿಲ್ಲೆಯಲ್ಲಿ ಜಾನುವಾರು ಗಣತಿ ಬಹುತೇಕ ಪೂರ್ಣ

● 260 ಗಣತಿದಾರರಿಂದ 7.20 ಲಕ್ಷ ಮನೆಗಳಲ್ಲಿ ಸಮೀಕ್ಷೆ ● ಗಣತಿದಾರರ ಕಾರ್ಯವೈಖರಿ ಮೇಲ್ವಿಚಾರಣೆಗೆ 77 ಮಂದಿ ಪಶುವೈದ್ಯರ ನಿಯೋಜನೆ

ಮೈಸೂರು,ಫೆ.27(ಪಿಎಂ)– 'ಜಾನುವಾರು ಸಾಕಾಣಿಕೆ' ಎಂಬುದು ವಿಶೇಷವಾಗಿ ಭಾರತದ ಗ್ರಾಮೀಣರು ಬದುಕು ಸಾಗುವಲ್ಲಿ ಮಹತ್ವ ಪಾತ್ರ ವಹಿಸುತ್ತದೆ. ಅನಾದಿ ಕಾಲದಿಂದಲೂ ಮಾನವನ ಕೃಷಿ ಚಟುವಟಿಕೆಯಲ್ಲಿ ಜಾನುವಾರುಗಳು ಪ್ರಾಮುಖ್ಯತೆ ಹೊಂದಿರುವುದನ್ನು ಕಾಣಬಹುದು. ಇಂದಿನ ಆಧುನಿಕ ಕಾಲಘಟ್ಟದ ಯಂತ್ರೋಪಕರಣ ಬಳಕೆ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚಾದರೂ ಜಾನುವಾರುಗಳ ಅಸ್ತಿತ್ವವೂ ಇದ್ದೇ ಇದೆ.

ಇಂತಹ ಜಾನುವಾರುಗಳು ಹಾಗೂ ಅವುಗಳ ಸಾಕಾಣಿಕೆಯಲ್ಲಿ ತೊಡಗಿರುವ ಕುಟುಂಬಗಳ ಅಂಕಿ–ಅಂಶ ಕಲೆ ಹಾಕಲು '21ನೇ ರಾಷ್ಟ್ರೀಯ ಜಾನುವಾರು ಗಣತಿ' ದೇಶದಾದ್ಯಂತ ನಡೆಯುತ್ತಿದೆ. ಮೈಸೂರು ಜಿಲ್ಲೆಯಲ್ಲಿಯೂ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಗಣತಿ ಕಾರ್ಯ ಕೈಗೆತ್ತಿಕೊಂಡಿದೆ. ಇಲಾಖೆಯ 260 ಮಂದಿ ತಾಂತ್ರಿಕ ಸಿಬ್ಬಂದಿ ಗಣತಿದಾರರಾಗಿ ಕಾರ್ಯನಿರ್ವಹಿಸುತ್ತಿದ್ದು, ಇವರು 7.20 ಲಕ್ಷ ಮನೆಗಳಿಗೆ ತೆರಳಿ ಸಮೀಕ್ಷೆ ನಡೆಸುತ್ತಿದ್ದಾರೆ. ಗಣತಿದಾರರ ಕಾರ್ಯವೈಖರಿಯನ್ನು ಇಲಾಖೆಯ 77 ಮಂದಿ ಪಶುವೈದ್ಯರು ಮೇಲ್ವಿಚಾರಣೆ ಮಾಡುತ್ತಿದ್ದಾರೆ.

ನಗರದ ಪ್ರದೇಶದ 254 ವಾರ್ಡ್‌ಗಳು ಹಾಗೂ 1,293 ಗ್ರಾಮಗಳು ಒಳಗೊಂಡಂತೆ ಜಿಲ್ಲೆಯಲ್ಲಿ ಒಟ್ಟು 1,547 ಪ್ರದೇಶಗಳಲ್ಲಿ ಜಾನುವಾರು ಗಣತಿ ಪ್ರಕ್ರಿಯೆ ಪ್ರಗತಿಯಲ್ಲಿದೆ. 7.17 ಲಕ್ಷ ಮನೆಗಳ ಪೈಕಿ ಈಗಾಗಲೇ 5.86 ಲಕ್ಷ ಮನೆಗಳಿಂದ ಮಾಹಿತಿ ಸಂಗ್ರಹಿಸುವ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ಶೇ.75 ರಷ್ಟು ಗಣತಿ ಜಿಲ್ಲೆಯಲ್ಲಿ ಮುಕ್ತಾಯ ಕಂಡಿದೆ. ದೇಶದಲ್ಲಿ ಜಾನುವಾರ ಗಣತಿಯು 1919ರಲ್ಲಿ ಪ್ರಾರಂಭಗೊಂಡಿತು. ಅಂದಿನಿಂದ ಪ್ರತಿ 5 ವರ್ಷಗಳಿಗೊಮ್ಮೆ ಗಣತಿ ನಡೆಸಲಾಗುತ್ತಿದ್ದು, ಈವರೆಗೆ 20 ಜಾನುವಾರು ಗಣತಿಗಳನ್ನು ನಡೆಸಲಾಗಿದೆ. 2019ರ ಬಳಿಕ ಇದೀಗ 21ನೇ ಜಾನುವಾರು ಗಣತಿ–2024 ನಡೆಯುತ್ತಿದೆ. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ '21ನೇ ರಾಷ್ಟ್ರೀಯ ಜಾನುವಾರು ಗಣತಿ' ಚಾಲನೆ ಪಡೆದಿದೆ.



ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಜಾನುವಾರು ಗಣತಿ ಕಾರ್ಯ ನಡೆಸುತ್ತಿರುವುದು.

ಗಣತಿಯ ಬಹುಮುಖಿ ಉದ್ದೇಶ: ಜಾನುವಾರು ಗಣತಿಯು ದೇಶದಲ್ಲಿ ಜಾನುವಾರು ಸಂಖ್ಯೆಯ ಸಮಗ್ರ ದತ್ತಾಂಶ ಕಲೆ ಹಾಕುವಲ್ಲಿ ಮಹತ್ವ ಪಾತ್ರ ವಹಿಸಲಿದೆ. ಜಾನುವಾರು ವಲಯವನ್ನು ಅಭಿವೃದ್ಧಿಪಡಿಸಲು ನಿಖರವಾದ ಯೋಜನೆ ಮತ್ತು ಕಾರ್ಯಕ್ರಮ ಹಮ್ಮಿಕೊಳ್ಳಲು, ನೀತಿ ನಿರೂಪಣೆ ರೂಪಿಸಿ ಅನುಷ್ಠಾನಗೊಳಿಸಲು ಮತ್ತು ಮೇಲ್ವಿಚಾರಣೆ ಸೇರಿದಂತೆ ಬಹುಮುಖಿ ಉದ್ದೇಶವನ್ನು ಈ ಗಣತಿ ಹೊಂದಿದೆ. ವಿವಿಧ ಜಾನುವಾರು ಜಾತಿಗಳ ಸಂಖ್ಯೆ, ಅವುಗಳ ತಳಿ, ವಯಸ್ಸು, ಮತ್ತು ಲಿಂಗ ಸಂಯೋಜನೆ ಒಳಗೊಂಡಂತೆ ವಿವರವಾದ ಮತ್ತು ನಿಖರವಾದ ದತ್ತಾಂಶ ಸಂಗ್ರಹ ಮಾಡುವ ಪ್ರಾಥಮಿಕ ಉದ್ದೇಶವನ್ನೂ ಈ ಗಣತಿ ಒಳಗೊಂಡಿದೆ. ಜಾನುವಾರು ವಲಯದಲ್ಲಿ ಪ್ರಸ್ತುತ ಸ್ಥಿತಿ ಮತ್ತು ಹಿಂದಿನ ದಶಕಗಳ ಮಾಹಿತಿ ಮತ್ತು ಪ್ರವೃತ್ತಿ ಅರಿಯಲು ಸಹಾಯಕವಾಗಲಿದೆ.

ಎಲ್ಲಾ ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಏಕ ಕಾಲದಲ್ಲಿ ಗಣತಿ ನಡೆಸುತ್ತಿದ್ದು, ಈ ಅವಧಿಯಲ್ಲಿ ಗಣತಿದಾರರು ರಾಜ್ಯದ ಪ್ರತಿಯೊಂದು ಮನೆ, ಉದ್ಯಮ, ಸಂಸ್ಥೆಗಳಿಗೆ ಭೇಟಿ ನೀಡಿ ಸಾಕು ಪ್ರಾಣಿಗಳು ಹಾಗೂ ಕುಕ್ಕುಟಗಳ ಮಾಹಿತಿ ಸಂಗ್ರಹಿಸಲಿದ್ದಾರೆ. ಬೀದಿ ದನಗಳು ಹಾಗೂ ಬೀದಿ ನಾಯಿಗಳ ಮಾಹಿತಿ ಸಹ ಸಂಗ್ರಹಿಸಲಾಗುತ್ತಿರುವುದು ವಿಶೇಷ. ಇದಲ್ಲದೆ, ಜಾನುವಾರ ಸಾಕಾಣಿಕೆ ಕುಟುಂಬದ ಮುಖ್ಯಸ್ಥರ ಸಾಮಾಜಿಕ ಸ್ಥಿತಿ, ಉದ್ಯೋಗ, ವಿದ್ಯಾರ್ಹತೆ ಮತ್ತು ಕೃಷಿ ಹಿಡುವಳಿ ಬಗ್ಗೆಯೂ ಮಾಹಿತಿ ಕಲೆ ಹಾಕಲಾಗುತ್ತದೆ.

ಗಣತಿಗೆ ಒಳಪಡುವ ಜಾರುವಾರುಗಳು: ಕುಟುಂಬ, ಉದ್ಯಮ ಮತ್ತು ಇತರ ಸಂಸ್ಥೆಗಳು ಹೊಂದಿರುವ ಹದಿನಾರು ಜಾತಿಯ ಪ್ರಾಣಿಗಳಾದ ದನ, ಎಮ್ಮೆ, ಮಿಥುನ್, ಯಾಕ್, ಕುರಿ, ಮೇಕೆ, ಹಂದಿ ಕುದುರೆ, ಸಣ್ಣಕುದುರೆ, ಹೇಸರಗತ್ತೆ, ಕತ್ತೆ, ಒಂಟೆ, ನಾಯಿ, ಮೊಲ ಮತ್ತು ಆನೆ, ಕುಕ್ಕಟಗಳಾದ ಕೋಳಿ, ಬಾತುಕೋಳಿ, ಟರ್ಕಿ, ಮತ್ತು ಇತರೆ ಕುಕ್ಕುಟಗಳಾದ ಎಮು ಮುಂತಾದ ಕೋಳಿ ಪಕ್ಷಿಗಳು, ಕ್ವಿಲ್, ಗಿನಿ ಕೋಳಿ, ಆಸ್ಟ್ರಿಚ್ ಮತ್ತು ಹೆಬ್ಬಾತುಗಳನ್ನು ಅವುಗಳ ಸ್ಥಳಕ್ಕೆ ಭೇಟಿ ನೀಡಿ ಎಣಿಕೆ ಮಾಡಲಾಗುತ್ತದೆ. ಸ್ಥಳಕ್ಕೆ ಭೇಟಿ ನೀಡುವ ಗಣತಿದಾರರು, ಗೂಗಲ್ ಪ್ಲೇಸ್ಟೋರ್‌ನಲ್ಲಿ ಭಾರತ ಸರ್ಕಾರ ಅಭಿವೃದ್ಧಿಪಡಿಸಿರುವ 'ಟ್ವೆಂಟಿ ಫಸ್ಟ್ ಲೈವ್ ಸ್ಟಾಕ್ ಸೆನ್ಸಸ್' ಮೊಬೈಲ್ ಆಪ್‌ನಲ್ಲಿ ದತ್ತಾಂಶ ದಾಖಲಿಸಲಿದ್ದಾರೆ. ಜಾನುವಾರುಗಳಿಗೆ ಕಾಲುಬಾಯಿ ಜ್ವರ, ಚರ್ಮಗಂಟು ಕಾಯಿಲೆ ಲಸಿಕೆ ಹಾಕುವುದು ಸೇರಿದಂತೆ ಇಲಾಖೆಯ ಇನ್ನಿತರ ಕೆಲಸಗಳೊಂದಿಗೆ ಗಣತಿ ಕಾರ್ಯವೂ ನಡೆಯುತ್ತಿದೆ.

ಮಾ.31ರವರೆಗೆ ಗಣತಿ ಅವಧಿ ವಿಸ್ತರಣೆ

> ಜಾನುವಾರು ಗಣತಿ ಮಾಡುವ ಬಗ್ಗೆ ಈಗಾಗಲೇ ಎಲ್ಲ ಗಣತಿದಾರರು, ಮೇಲ್ವಿಚಾರಕರು, ನೋಡಲ್ ಅಧಿಕಾರಿಗಳಿಗೆ ತರಬೇತಿ ನೀಡಲಾಗಿದೆ. ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ಮೂರು ಹಂತದಲ್ಲಿ ವಿಶೇಷ ತರಬೇತಿ ನೀಡಲಾಗಿದೆ. ಸಾಕುವ ಎಲ್ಲಾ ಪ್ರಾಣಿ–ಪಕ್ಷಿಗಳು ಈ ಗಣತಿ ವ್ಯಾಪ್ತಿಗೆ ಬರಲಿವೆ. ಜೊತೆಗೆ ಇದೇ ಪ್ರಥಮ ಬಾರಿಗೆ ಮನೆಯಲ್ಲಿ ಸಾಕಿರುವ ನಾಯಿಗಳ ಜೊತೆಗೆ ಬೀದಿ ನಾಯಿಗಳ ಗಣತಿ ಸಹ ಮಾಡಲಾಗುತ್ತಿದೆ. ಒಂದು ಬೀದಿಯಲ್ಲಿ ನೆಲೆಸಿರುವ ಬೀದಿ ನಾಯಿಗಳು ಸಾಮಾನ್ಯವಾಗಿ ಬೇರೆಡೆಗೆ ಹೋಗುವುದಿಲ್ಲ. ಹಾಗಾಗಿ ಅವುಗಳ ಎಣಿಕೆ ಸಾಧ್ಯವಿದೆ. ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿರುವ ಆಪ್‌ನಲ್ಲಿ ಸುಮಾರು 259 ಕಾಲಂಗಳಿದ್ದು, ಅಲ್ಲಿಗೆ ಮಾಹಿತಿ ದಾಖಲಿಸಬೇಕಿದೆ. ಕೇಂದ್ರ ಸರ್ಕಾರ ಗಣತಿ ಅವಧಿಯನ್ನು ಮಾ.31ರವರೆಗೆ ವಿಸ್ತರಣೆ ಮಾಡಿದೆ. ಜಿಲ್ಲೆಯಲ್ಲಿ ಶೇ.25 ರಷ್ಟು ಮಾತ್ರ ಗಣತಿ ಬಾಕಿ ಉಳಿದಿದ್ದು, ಆದಷ್ಟು ಶೀಘ್ರದಲ್ಲಿ ಪೂರ್ಣಗೊಳಿಸಲು ಕ್ರಮ ವಹಿಸಲಾಗಿದೆ. ಬಹುಶಃ ಇನ್ನು 15 ದಿನಗಳಲ್ಲಿ ಜಿಲ್ಲೆಯ ಗಣತಿ ಪೂರ್ಣಗೊಳ್ಳಲಿದೆ.



–ನಾಗರಾಜು, ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಮೈಸೂರು.

ಕರ್ನಾಟಕ ಸೇರಿ 8 ರಾಜ್ಯದ 18 ಲಕ್ಷ ಮಕ್ಕಳ ಆರೋಗ್ಯಕ್ಕೆ ಪ್ರಧಾನಿ ಮೋದಿ ಆಸರೆ



ನವದೆಹಲಿ: ಭಾರತದ ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆಯ (ಪಿಡಿಎಸ್) ವಿಸ್ತರಣೆಯು ಕರ್ನಾಟಕ ಸೇರಿದಂತೆ ದೇಶದ 8 ರಾಜ್ಯಗಳ 18 ಲಕ್ಷ ಮಕ್ಕಳ ಕುಂಠಿತ ಬೆಳವಣಿಗೆಯನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದು ಅಮೆರಿಕದ ಎಕನಾಮಿಕ್ ಅಸೋಸಿಯೇಷನ್‌ನ ಅಧ್ಯಯನವೊಂದು ತಿಳಿಸಿದೆ. ರಾಷ್ಟ್ರೀಯ ಆಹಾರ ಸುರಕ್ಷತಾ ಕಾಯ್ದೆಯಡಿ 1997ರಲ್ಲಿ ಆರಂಭವಾದ ಪಡಿತರ ವಿತರಣಾ ಕಾರ್ಯಕ್ರಮವನ್ನು 2013ರಲ್ಲಿ ವಿಸ್ತರಿಸಲಾಯಿತು. 2020ರಲ್ಲಿ ಕೋವಿಡ್–19 ಆರಂಭವಾದ ನಂತರ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಭಾಗವಾಗಿ ಇದನ್ನು ಮತ್ತಷ್ಟು ಸುಧಾರಿಸಲಾಯಿತು. ಈ ಯೋಜನೆಯಡಿ ಪ್ರತಿ ವ್ಯಕ್ತಿಗೆ ತಿಂಗಳಿಗೆ 3 ಕೆಜಿ ಅಕ್ಕಿ ಮತ್ತು 2 ಕೆಜಿ ಗೋಧಿ ಒದಗಿಸಲಾಗುತ್ತದೆ.

ಅಧ್ಯಯನ ವರದಿ ಹೇಳಿದ್ದೇನು?: ಮಕ್ಕಳ ಕುಂಠಿತ ಬೆಳವಣಿಗೆ, ಪೋಷಣೆ ಮತ್ತು ಆಹಾರ ವೈವಿಧ್ಯತೆಯ ಮೇಲೆ ಎನ್‌ಎಫ್‌ಎಸ್‌ಎಯ ಪ್ರಭಾವದ ಕುರಿತು ಮೌಲ್ಯಮಾಪನ ನಡೆಸಲು ಅಧ್ಯಯನ ಕೈಗೊಳ್ಳಲಾಗಿತ್ತು. ಐಐಎಂ ಬೆಂಗಳೂರು ಮತ್ತು ಅಮೆರಿಕದ ಕ್ಯಾಲಿಫೋರ್ನಿಯಾ ಹಾಗೂ ಕ್ಯಾಲ್ಗರಿ ವಿಶ್ವವಿದ್ಯಾಲಯದ ಸಂಶೋಧಕರು, ಕರ್ನಾಟಕ, ಆಂಧ್ರ ಪ್ರದೇಶ, ಬಿಹಾರ, ಗುಜರಾತ್, ಜಾರ್ಖಂಡ, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಒಡಿಶಾ ರಾಜ್ಯಗಳ 30 ಹಳ್ಳಿಗಳ, ಪಡಿತರ ಚೀಟಿ ಹೊಂದಿದ್ದ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ದುಕೊಂಡಿದ್ದರು. ಸರ್ಕಾರ ಒದಗಿಸಿದ ಪಡಿತರದಿಂದ ಆ ಕುಟುಂಬಗಳ 18 ಲಕ್ಷ ಮಕ್ಕಳು ಕುಂಠಿತ ಬೆಳವಣಿಗೆಯಿಂದ ಹೊರಬಂದಿದ್ದಾರೆ. 2 ವರ್ಷದೊಳಗಿನ ಮಕ್ಕಳಿಗೆ ಇದರಿಂದ ವಿಶೇಷ ಪ್ರಯೋಜನ ಉಂಟಾಗಿದೆ. ಯೋಜನೆಯಿಂದ ಜನರ ಆದಾಯ ಹೆಚ್ಚಳವಾಗಿದೆ. ಜನರಿಗೆ ವೈವಿಧ್ಯಮಯ ಆಹಾರ ಸೇವನೆ ಲಭ್ಯವಾಗಿದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಗ್ಯಾರಂಟಿಗಾಗಿ ಖಜಾನೆ ಖಾಲಿ ಮಾಡಿ ಜನರನ್ನು ಭಿಕ್ಷುಕರನ್ನಾಗಿ ಮಾಡಿದ್ದಾರೆ

ರಾಜ್ಯ ಕಾಂಗ್ರೆಸ್ ಸರ್ಕಾರದ ಭಾಗ್ಯಗಳ ಬಗ್ಗೆ ಮಾಜಿ ಸಚಿವ ಶ್ರೀರಾಮುಲು ಲೇವಡಿ

ಮೈಸೂರು, ಫೆ.27(ಬಿಎಲ್‌ಯು)– ಗ್ಯಾರಂಟಿ ಯೋಜನೆಗಳಿಗಾಗಿ ರಾಜ್ಯ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಮೀಸಲಾದ ಹಣ ಸೇರಿದಂತೆ ಹಲವು ಅನುದಾನ ದುರ್ಬಳಕೆ ಮಾಡಿಕೊಂಡು ಖಜಾನೆ ಖಾಲಿ ಮಾಡಿದೆ ಅದೆ ಜೊತೆಗೆ ಜನರನ್ನು ಭಿಕ್ಷುಕರನ್ನಾಗಿ ಮಾಡಿದೆ ಎಂದು ಮಾಜಿ ಸಚಿವ ಶ್ರೀರಾಮುಲು ಆರೋಪಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿ ಮತ್ತು ವರ್ಗದವರ ಶ್ರೇಯೋಭಿವೃದ್ಧಿಗೆ ಎಸ್‌ಸಿಪಿ, ಟಿಎಸ್‌ಪಿಗಾಗಿ ಶೇಕಡ 24.10 ಹಣವನ್ನು ನಮ್ಮ ಬಿಜೆಪಿ ಸರ್ಕಾರ ಮೀಸಲಿಟ್ಟಿತ್ತು. ಆದರೆ ಈಗ ಗ್ಯಾರಂಟಿ ಯೋಜನೆಗಾಗಿ ಈ ಎಲ್ಲಾ ಹಣವನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಆಪಾದಿಸಿದರು.

ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ 2023ರಲ್ಲಿ ಮೀಸಲಿಟ್ಟ 11,500 ಕೋಟಿ ಮತ್ತು 2024ರಲ್ಲಿ ಮೀಸಲಿಟ್ಟ 14,280 ಕೋಟಿ ರೂಪಾಯಿಯನ್ನು ಗ್ಯಾರಂಟಿಗಾಗಿ ಬಳಕೆ ಮಾಡಿಕೊಂಡಿದ್ದಾರೆ. ಗ್ಯಾರಂಟಿ ಯೋಜನೆಯನ್ನು ನಾವು ವಿರೋಧ ಮಾಡುತ್ತಿಲ್ಲ. ಆದರೆ ಗ್ಯಾರಂಟಿ ಯೋಜನೆಗಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ಕಲ್ಯಾಣಕ್ಕೆ ಮೀಸಲಿಟ್ಟ ಹಣ ದುರ್ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ನಮ್ಮ ವಿರೋಧವಿದೆ ಎಂದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಾಜಿ ಸಚಿವ ಶ್ರೀರಾಮುಲು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದರು. ಚಿತ್ರದಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಶಾಸಕ ಟಿ.ಎಸ್. ಶ್ರೀವತ್ಸ ಇತರರಿದ್ದಾರೆ

ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಲ್ಯಾಪ್‌ಟಾಪ್, ಸ್ಕಾಲರ್‌ಶಿಪ್, ಪ್ರೋತ್ಸಾಹ ಧನ, ಗೌರವ ಧನ, ಗಂಗಾ ಕಲ್ಯಾಣ ಯೋಜನೆಯ ಹಣ ಕೂಡ ನೀಡಿಲ್ಲ. ಅಧಿಕಾರಕ್ಕೆ ಬರಲು ಗ್ಯಾರಂಟಿ ಯೋಜನೆಯ ಭರವಸೆಯನ್ನು ಜನರಿಗೆ ನೀಡಿದರು. ಆದರೆ ಈಗ ಕೊಟ್ಟ ಮಾತು ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ ಎಂದರು.

ತಮ್ಮ ಮೂಲ ಉದ್ದೇಶ ಸಾಕಾರಗೊಳಿಸಲು ಗ್ಯಾರಂಟಿ ಯೋಜನೆಗಾಗಿ ಪ್ರತ್ಯೇಕ ಹಣ ಮೀಸಲಿಡಲಿ. ಅದು ಬಿಟ್ಟು ಬೇರೆ ಅನುದಾನವನ್ನೇಕೆ ಬಳಕೆ ಮಾಡಿಕೊಳ್ಳಬೇಕು ಎಂದು ಶ್ರೀರಾಮುಲು ಪ್ರಶ್ನಿಸಿದರು.

ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಮೀಸಲಾದ ಹಣ ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಬಾರದು ಎಂದು ಸರ್ಕಾರದಲ್ಲಿ ಕಾಯ್ದೆಯೇ ಇದೆ. ಆದರೆ ಇದನ್ನೆಲ್ಲಾ ಗಾಳಿಗೆ ತೂರಿದ್ದಾರೆ ಎಂದು ದೂರಿದರು.

ಗ್ಯಾರಂಟಿ ಯೋಜನೆಗಾಗಿ ರಾಜ್ಯದ ಖಜಾನೆ ಖಾಲಿ ಮಾಡಿ ಜನರನ್ನು ಭಿಕ್ಷುಕರನ್ನಾಗಿ ಮಾಡಿದ್ದಾರೆ. ಆರ್ಥಿಕ ಸ್ಥಿತಿ ಸರಿದೂಗಿಸಲು ಪರದಾಡುತ್ತಿರುವ ಕಾಂಗ್ರೆಸ್ ಸರ್ಕಾರ ಈಗ ಅಗತ್ಯ ವಸ್ತುಗಳ ಬೆಲೆ ಹೆಚ್ಚಳ ಮಾಡುತ್ತಿದೆ. ಇವರ ದ್ವಂದ್ವ ನೀತಿ ಜನರಿಗೆ ಈಗ ಅರ್ಥವಾಗುತ್ತಿದ್ದು, ಇವರ ನಾಟಕ ಮುಂದೆ ನಡೆಯುವುದಿಲ್ಲ ಎಂದು ಎಚ್ಚರಿಸಿದರು.

ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನ್ಯಾಯಯುತವಾಗಿ ಅನುದಾನ ಹಾಗೂ ತೆರಿಗೆ ಸಂದಾಯವಾಗುತ್ತಿದೆ. ಈ ಬಗ್ಗೆ ಅನುಮಾನವಿದ್ದರೆ ಸ್ವಾತಂತ್ರ್ಯ ನಂತರದಲ್ಲಿ ಜವಾಹರಲಾಲ್ ನೆಹರು ಕಾಲದಿಂದ ಡಾ.ಮನಮೋಹನ್ ಸಿಂಗ್ ಹಾಗೂ ನರೇಂದ್ರ ಮೋದಿ ಕಾಲದವರೆಗೆ ಕೇಂದ್ರ ಸರ್ಕಾರ ಎಷ್ಟೆಷ್ಟು ಅನುದಾನ ನೀಡಿದೆ ಎಂಬ ಲೆಕ್ಕಾಚಾರ ತೆಗೆದುಕೊಂಡು ಚರ್ಚೆಗೆ ಬರಲಿ. ಆಗ ಬಿಜೆಪಿ ಸರ್ಕಾರದಿಂದ ಕರ್ನಾಟಕಕ್ಕೆ ಯಾವುದೇ ಅನ್ಯಾಯವಾಗಿಲ್ಲ ಎಂಬುದನ್ನು ಸಾಬೀತು ಮಾಡುವೆ ಎಂದು ಶ್ರೀರಾಮುಲು ಸವಾಲು ಹಾಕಿದರು.

ಇದು ಕಲಿಗಾಲವಾಗಿದ್ದು, ಸತ್ಯಕ್ಕಿಂತ ಅನ್ಯಾಯ, ಅಧರ್ಮಗಳೇ ವಿಜೃಂಭಿಸುತ್ತಿದೆ. ಏನು ಮಾಡೋಣ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಬಿಜೆಪಿ ಅಸಮಾಧಾನಕ್ಕೆ ಶೀಘ್ರದಲ್ಲೇ ಮದ್ದು


> ರಾಜ್ಯ ಬಿಜೆಪಿಯಲ್ಲಿರುವ ಅಸಮಾಧಾನ ಶೀಘ್ರದಲ್ಲೇ ಶಮನವಾಗಲಿದೆ. ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಬಿಜೆಪಿ ಹೈಕಮಾಂಡ್ ನೋಟಿಸ್ ಜಾರಿ ಮಾಡಿದೆ ಇದಕ್ಕೆ ಉತ್ತರ ಕೂಡ ನೀಡಿದ್ದಾರೆ. ಮುಂದಿನ ದಿನದಲ್ಲಿ ಬಿಜೆಪಿ ವರಿಷ್ಠರು ಅಸಮಾಧಾನ ಮುಕ್ತ ಮಾಡುತ್ತಾರೆ. ಬಿಜೆಪಿಯಲ್ಲಿ ಯಾವುದೇ ಬಣವಿಲ್ಲ. ನೀವು ಹೇಳಿದಂತೆ ಎರಡು ಬಣವಿದ್ದರೆ ನಾನು ಯಾವುದೇ ಬಣಕ್ಕೆ ಸೇರಿಲ್ಲ. ನಾನು ಬಿಜೆಪಿಯ ಸಾಮಾನ್ಯ ಕಾರ್ಯಕರ್ತ. –ಶ್ರೀರಾಮುಲು.

ರಾಜ್ಯ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿ ಬಗ್ಗೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಜನರಿಗೆ ಮನವರಿಕೆ ಮಾಡಿಕೊಡುತ್ತೇವೆ ಎಂದು ಮಾಜಿ ಸಚಿವ ಶ್ರೀರಾಮುಲು ತಿಳಿಸಿದರು.

ಶಾಸಕರಾದ ಟಿ.ಎಸ್.ಶ್ರೀವತ್ಸ, ಚಂದ್ರು ಲವಾಣಿ, ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ, ವಕ್ತಾರ ಮಹೇಶ್ ರಾಜ್ ಅರಸ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ





ಜಿಲ್ಲೆಯಾದ್ಯಂತ ಸಂಭ್ರಮ, ಸಡಗರದಿಂದ ಮಹಾಶಿವರಾತ್ರಿ ಆಚರಣೆ

ಮಂಡ್ಯ ಫೆ.27– ಜಿಲ್ಲೆಯಾದ್ಯಂತ ಸಂಭ್ರಮ –ಸಡಗರದಿಂದ ಮಹಾಶಿವರಾತ್ರಿಯನ್ನು ಆಚರಿಸಲಾಯಿತು. ಜಿಲ್ಲೆಯ ಬಹುತೇಕ ಎಲ್ಲಾ ದೇವಸ್ಥಾನಗಳಲ್ಲಿಯೂ ಶಿವನಾಮ ಝೇಂಕರಿಸಿತು.

ಕೆ.ಆರ್.ಪೇಟೆ: ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮನೆದೇವರಾದ ಬೂಕನಕೆರೆ ಹೋಬಳಿಯ ಕಾಪನಹಳ್ಳಿ ಗವಿಮಠದ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರ ಸ್ವಾಮಿಯವರ ಗದ್ದುಗೆಗೆ 21 ಸಾವಿರ ರುದ್ರಾಕ್ಷಿ ಮಣಿ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಗವಿಮಠ ಶ್ರೀ ಕ್ಷೇತ್ರದ ಪೀಠಾಧ್ಯಕ್ಷ ಶ್ರೀ ಚನ್ನವೀರಸ್ವಾಮೀಜಿ ನೇತೃತ್ವದಲ್ಲಿ ಶಿವರಾತ್ರಿ ಹಬ್ಬದ ಪ್ರಯುಕ್ತ ಪವಾಡ ಪುರುಷ ಶ್ರೀ ಸ್ವತಂತ್ರ ಸಿದ್ದಲಿಂಗೇಶ್ವರ ಗದ್ದುಗೆಗೆ ಸುಮಾರು 21ಸಾವಿರ ರುದ್ರಾಕ್ಷಿ ಮಣಿ ಹಾಗೂ ಮಡ್ಡಿಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಿ, ಭಕ್ತಾದಿಗಳಿಗೆ ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.

ತಾಲೂಕಿನ ಮಡ, ಸಂಗಾಪುರ, ಅಂಬಿಗರ ಹಳ್ಳಿ ಗ್ರಾಮದ ಬಳಿ ಇರುವ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ನದಿಗಳು ಜೊತೆಯಾಗಿ ಸೇರುವ ಪವಿತ್ರ ಕ್ಷೇತ್ರ ತ್ರಿವೇಣಿ ಸಂಗಮದಲ್ಲಿ ಕ್ಷೇತ್ರದ ದೇವತೆಗಳಾದ ಶ್ರೀ ಸಂಗಮೇಶ್ವರ, ಕಾಮಾಕ್ಷಿ ಅಮ್ಮನವರು ಹಾಗೂ ಶ್ರೀ ಬಾಲ ಮಹದೇಶ್ವರ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು.

ನಾಗಮಂಗಲ: ಶಿವರಾತ್ರಿ ಹಬ್ಬದ ಅಂಗವಾಗಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ದೇವಾಲಯಗಳಲ್ಲಿ ಬುಧವಾರ ದಿನಪೂರ್ತಿ ವಿಶೇಷ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ದೇವರಿಗೆ ಜಲಾಭಿಷೇಕ ಎಳನೀರು, ಗಂಗಾಜಲ ಹಾಗೂ ಬಿಲ್ವ ಪತ್ರೆಗಳಿಂದ ಅರ್ಚನೆ ಮಾಡಲಾಯಿತು. ಸಾವಿರಾರು ಭಕ್ತರು ದೇವರ ದರ್ಶನ ಪಡೆದು ಶಿವನಾಮಸ್ಮರಣೆ ಮಾಡಿದರು.

ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಸೌಮ್ಯ ಕೇಶವ ದೇವಾಲಯದ ಆವರಣದಲ್ಲಿ ಮಹಾ ಶಿವರಾತ್ರಿ ಅಂಗವಾಗಿ ಲಕ್ಷ ದೀಪೋತ್ಸವಕ್ಕೆ ಸಾವಿರಾರು ಭಕ್ತರು ಸಾಕ್ಷಿಯಾದರು. ಸೌಮ್ಯ ಕೇಶವ ದೇವಸ್ಥಾನದ ಮುಂಭಾಗವಿರುವ ಗರುಡಗಂಬಕ್ಕೆ ದೀಪ ಬೆಳಗಿಸುವ ಮೂಲಕ ಸಾಂಪ್ರದಾಯಿಕ ಹಾಗೂ ಧಾರ್ಮಿಕ ವಿಧಿ–ವಿಧಾನಗಳು ನೆರವೇರಿದವು.

ಕಿಕ್ಕೇರಿ: ಪಟ್ಟಣದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದಲ್ಲಿ ಬುಧವಾರ ಶಿವ ರಾತ್ರಿ ಪ್ರಯುಕ್ತ ಪೂಜಾ ಕಾರ್ಯಕ್ರಮ ನಡೆಯಿತು. ಚನ್ನರಾಯಪಟ್ಟಣ ಸಂದೀಪ್ ಜೈನ್, ಕಿಕ್ಕೇರಿ ಇನ್ಸ್‌ಪೆಕ್ಟರ್ ರೇವತಿ, ಜೇಟುಸಿಂಗ್, ಅರ್ಚನ, ನಾಗಮ್ಮ, ಗೀತಾ, ಜಯಮ್ಮ, ಸರಸ್ವತಿ, ಭಾಗ್ಯಮ್ಮ, ತುಳಸಿ ಪಾಲ್ಗೊಂಡಿದ್ದರು.

ಭಾರತೀನಗರ: ಸಮೀಪದ ಹನುಮಂತ ನಗರದ ಶ್ರೀ ಆತ್ಮಲಿಂಗೇಶ್ವರಸ್ವಾಮಿ ಕ್ಷೇತ್ರದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ವಿಜೃಂಭಣೆಯಿಂದ ವಿಶೇಷ ಪೂಜಾ ಕೈಂಕರ್ಯಗಳು ನಡೆದವು. ಸಹಸ್ರಾರು ಭಕ್ತಾದಿಗಳು ಆತ್ಮಲಿಂಗೇಶ್ವರ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ಸಮೀಪದ ಕೆ.ಎಂ.ದೊಡ್ಡಿಯ ಶ್ರೀವೆಂಕಟೇಶ್ವರಸ್ವಾಮಿ, ಶ್ರೀರಾಮೇಶ್ವರ ದೇವಾಲಯ, ದೊಡ್ಡರಸಿನಕೆರೆ ಶ್ರೀಸಣ್ಣಕ್ಕಿ ರಾಯಸ್ವಾಮಿ, ಆಣ್ಣೂರು ಶ್ರೀಮುಡಿಯಪ್ಪಲಿಂಗೇಶ್ವರ, ಚಿಕ್ಕರಸಿನಕೆರೆ ಶ್ರೀಕಾಲಭೈರವೇಶ್ವರ, ಕಾರ್ಕಹಳ್ಳಿ ಶ್ರೀಬಸವೇಶ್ವರ, ಮಠದದೊಡ್ಡಿಯ ಶ್ರೀಹರಿಹರೇಶ್ವರ, ಶ್ರೀ ಮತ್ತಿತಾಳೇಶ್ವರ, ಅಂತರವಳ್ಳಿ ಶ್ರೀ ಸಿದ್ದೇಶ್ವರ, ವೈದ್ಯನಾಥಪುರದ ಶ್ರೀ ವೈದ್ಯನಾಥೇಶ್ವರ, ಮದ್ದೂರಮ್ಮನ ಕನಹಳ್ಳಿ ಶ್ರೀ ಮಂಟೇಸ್ವಾಮಿ, ಎಸ್.ಐ. ಹೊನ್ನಲಗೆರೆ ಗ್ರಾಮದ ಮಹಾಲಕ್ಷ್ಮಿ ದೊಡ್ಡಮ್ಮನವರು ಸೇರಿದಂತೆ ವಿವಿಧದೇವಸ್ಥಾನಗಳಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜೆಗಳು ನಡೆದವು.

ಶ್ರೀರಂಗಪಟ್ಟಣ: ಮಹಾಶಿವರಾತ್ರಿ ಹಬ್ಬದ ಅಂಗವಾಗಿ ತಾಲೂಕಿನ ಮಹದೇವಪುರ ಗ್ರಾಮದಲ್ಲಿ ಶ್ರೀ ಜಡೆ ಮುನೇಶ್ವರ ದೇಗುಲದ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಜಡೆಮುನೇಶ್ವರ ಸ್ವಾಮಿಯ ಕರಗ ಸಹಿತ ಕಂಡಾಯ ಉತ್ಸವದಲ್ಲಿ ಶ್ರೀ ಮಹದೇಶ್ವರ, ಕಾಲಭೈರವೇಶ್ವರ, ಚೌಡೇಶ್ವರಿ, ಸಿದ್ದಪ್ಪಾಜಿ, ದೊಡ್ಡಮ್ಮ ತಾಯಿ, ಶನೇಶ್ವರ, ಜಡ ಮುನೇಶ್ವರ ಕರಗಗಳೊಂದಿಗೆ ನೂರಾರು ಭಕ್ತರು ಬಾಯಿಬೀಗ ಹಾಕಿಸಿಕೊಂಡು ಮೆರವಣಿಗೆಯಲ್ಲಿ ಸಾಗಿದರು.

ಶ್ರೀ ಮಹದೇಶ್ವರ ಮಠ ಮತ್ತು ಓಂ ಶ್ರೀ ಜಡೆ ಮುನೇಶ್ವರ ದೇವಸ್ಥಾನದ ಟ್ರಸ್ಟ್‌ನ ಸದಸ್ಯರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದು, ಆಗಮಿಸಿದ್ದ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ನೆರವೇರಿಸಿದರು.

ಹಲಗೂರು: ಹಲಗೂರಿನ ಶ್ರೀ ಅಘೋರೇಶ್ವರ ಭೈರಾಶಿ ಪೀಠ ವತಿಯಿಂದ ಶಿವರಾತ್ರಿಯ ವಿಶೇಷ ಶುಭದಿನದಂದು ವಿದ್ಯಾರ್ಥಿ ಪ್ರಸಾದ್ ಗುರೂಜಿಯವರ ಪ್ರಾರ್ಥನೆಯಂತೆ ಶ್ರೀ ಕ್ಷೇತ್ರನಾಥ ಸೋಮೇಶ್ವರ ಸ್ವಾಮಿಗೆ ರುದ್ರಾಭಿಷೇಕ ನಂತರ ಸಂಜೆ ಕಾಲದಲ್ಲಿ ಏಕಾದಶ ರುದ್ರಾಹ ರಾಯಣ, ರುದ್ರಹೋಮ, ಅಘೋರ ಹೋಮ ಮೃತ್ಯುಂಜಯ ಹಾಗೂ ಶನೇಶ್ವರ ಹೋಮವನ್ನು ನೆರವೇರಿಸಿ ನಾಡಿನ ಒಳಿತಿಗಾಗಿ ವಿಶೇಷ ಪೂಜಾ ಸಂಕಲ್ಪವನ್ನು ಸಲ್ಲಿಸಲಾಯಿತು. ಹಲವಾರು ಭಕ್ತರು ಸ್ವಾಮಿಯ ದರ್ಶನವನ್ನು ಪಡೆದು ಹೋಮದಲ್ಲಿ ಭಾಗಿಯಾಗಿ ರುದ್ರನ ಅನುಗ್ರಹಕ್ಕೆ, ಕೃಪೆಗೆ ಪಾತ್ರರಾದರು.

ಮಾರಕಾಸ್ತ್ರಗಳಿಂದ ಯುವಕನಿಗೆ ಥಳಿಸುವ ವೀಡಿಯೋ ವೈರಲ್ ಪ್ರಕರಣ

ಪ್ರಮುಖ ಆರೋಪಿ ಸುಬ್ಬಿಗೆ ಪೊಲೀಸರ ಗುಂಡೇಟು

ಮಂಡ್ಯ,ಫೆ.27– ನಗರದ ಸ್ಮಶಾನವೊಂದರಲ್ಲಿ ಕೆಲ ದಿನಗಳ ಹಿಂದೆ ಯುವಕನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ ಪ್ರಕರಣದ ಪ್ರಮುಖ ಆರೋಪಿ ಸುಭಾಷ್ ಅಲಿಯಾಸ್ ಸುಬ್ಬಿ (18) ಎಂಬಾತನ ಬಲಗಾಲಿಗೆ ಪೊಲೀಸರು ಗುಂಡು ಹೊಡೆದು ಬಂಧಿಸಿರುವ ಘಟನೆ ಬುಧವಾರ ತಾಲೂಕಿನ ಬಿ.ಹೊಸೂರು ಬಳಿ ನಡೆದಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಆರೋಪಿ ಸುಭಾಷ್ ಮಂಡ್ಯದ ಸಾದತ್ ನಗರದ ನಿವಾಸಿಯಾಗಿದ್ದು, ಈತನ ವಿರುದ್ಧ ಮಂಡ್ಯ ಪೂರ್ವ, ಮಂಡ್ಯ ಪಶ್ಚಿಮ, ಮಂಡ್ಯ ಸೆಂಟ್ರಲ್ ಹಾಗೂ ಹಲಗೂರು ಪೊಲೀಸ್ ಠಾಣೆಗಳಲ್ಲಿ ಬೆದರಿಕೆ, ಹಲ್ಲೆ ಮತ್ತು ಕೊಲೆ ಯತ್ನ ಸೇರಿದಂತೆ ಒಟ್ಟು 5 ಪ್ರಕರಣಗಳು ದಾಖಲಾಗಿದ್ದವು. ಟಿ. ನರಸೀಪುರದ ಯಶವಂತ ಎಂಬ ಯುವಕನನ್ನು ಬೈಕಿನಲ್ಲಿ ಸ್ಮಶಾನವೊಂದಕ್ಕೆ ಕರೆದೊಯ್ದು, ಸುಭಾಷ್ ಮತ್ತು ಆತನ ಗ್ಯಾಂಗ್ ಮಚ್ಚಿನಿಂದ ಹಲ್ಲೆ ನಡೆಸುವುದನ್ನು ಲೈವ್ ವೀಡಿಯೊ ಮಾಡಿದ್ದು. ಆರೋಪಿಗಳ ಬಂಧನಕ್ಕೆ ಮಂಡ್ಯ ಪೂರ್ವ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಶೇಷಾದ್ರಿ ಕುಮಾರ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಬುಧವಾರ ಬೆಳಿಗ್ಗೆ 6.30ರ ಸಮಯದಲ್ಲಿ ಆರೋಪಿ ಸುಭಾಷ್‌ನನ್ನು ಬಂಧಿಸಲು ಪೊಲೀಸರು ಹೋದಾಗ, ಆರೋಪಿ ಕಲ್ಲಿನಿಂದ ಹಲ್ಲೆಗೆ ಮುಂದಾದ. ಶರಣಾಗತನಾಗಲು ಹೇಳಿದರೂ ಒಪ್ಪದೆ ತೀವ್ರ ಪ್ರತಿರೋಧ ಒಡ್ಡಿದ. ಈ ಸಮಯದಲ್ಲಿ ಆತ್ಮರಕ್ಷಣೆಗಾಗಿ ಸಬ್‌ಇನ್‌ಸ್ಪೆಕ್ಟರ್ ಶೇಷಾದ್ರಿ ಅವರು ಪಿಸ್ತೂಲಿನಿಂದ ಸುಭಾಷ್ ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದಾರೆ. ನಂತರ ಆತನನ್ನು ಮಂಡ್ಯ 'ಮಿಮ್ಸ್' ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಸಿಕ್ಕಸಿಕ್ಕವರ ಮೇಲೆ ಹಲ್ಲೆ ಮಾಡಿ, ಹಣಕ್ಕೆ ಬೆದರಿಕೆಹಾಕುವುದು, ಲಾಂಗ್, ಮಚ್ಚು ತೋರಿಸಿ ರೌಡಿತನ ಪ್ರದರ್ಶಿಸುವುದು ಈತನ ಕಸುಬಾಗಿತ್ತು. ಯುವಕನ ಮೇಲೆ ಹಲ್ಲೆ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಭಾಷ್, ಗುತ್ತಲ ನಿವಾಸಿ ಆಕಾಶ್ (18) ಸೇರಿದಂತೆ ಒಟ್ಟು ಐವರು ಆರೋಪಿಗಳನ್ನು ಬಂಧಿಸಿದ್ದೇವೆ. ಮೂವರು ಬಾಲಕರು ಇದ್ದಾರೆ ಎಂದು ಹೇಳಿದರು.


ಗುಂಡೇಟಿನಿಂದ ಗಾಯಗೊಂಡಿರುವ ಆರೋಪಿಯ ಆರೋಗ್ಯ ವಿಚಾರಿಸುತ್ತಿರುವ ಪೊಲೀಸರು.

ಏಳು ಆರೋಪಿಗಳ ಬಂಧನ: ಮಂಡ್ಯ ನಗರದ ಕಲ್ಲಹಳ್ಳಿಯ ಹಳೆಯ ಎಂ.ಪಿ. ರಸ್ತೆಯಲ್ಲಿ ಕಾರು ಮತ್ತು ಸ್ಕೂಟರ್‌ಗಳಲ್ಲಿ ಬಂದ ದುಷ್ಕರ್ಮಿಗಳ ಗುಂಪು ಫೆ.25ರಂದು ಸಂಜೆ 7.30ರ ವೇಳೆಯಲ್ಲಿ ಸಾರ್ವಜನಿಕರು ಮತ್ತು ವಾಹನ ಸವಾರರಿಂದ ದರೋಡೆ, ಸುಲಿಗೆ ಮಾಡಿ ನಗನಾಣ್ಯ ದೋಚಲು ಯತ್ನಿಸುತ್ತಿದ್ದ 7 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಅಜಯ್ ಅಲಿಯಾಸ್ ಬೆಣ್ಣೆ ಮೊಹಮ್ಮದ್ ಸಮೀರ್, ಶಿವಾನಂದ (ಗೊಳ್ಳಿ ಶಿವ), ಹೇಮಂತ ಕುಮಾರ್ ಎ.ಆರ್., ಉಲ್ಲಾಸ್‌ಗೌಡ (ಚಿಟ್ಟೆ), ಸ್ವರೂಪ ಎಂ.ಎಸ್., ಪುನೀತ್ ಕೆ.ಎನ್. ಬಂಧಿತ ಆರೋಪಿಗಳು. ಸಾರ್ವಜನಿಕರಿಂದ ಹಣ ದೋಚಲು ಹೊಂಚು ಹಾಕುತ್ತಿರುವ ಬಗ್ಗೆ ದೂರು ಬಂದ ತಕ್ಷಣ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ನವೀನ್ ಸುಪೇಕರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಎಂಟು ಮಂದಿ ವಶಕ್ಕೆ: ಮಳವಳ್ಳಿ ತಾಲೂಕಿನ ಹುಸ್ಕೂರು ಗೇಟ್ ಸಮೀಪದ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಪಕ್ಕದ ಟೇಬಲ್‌ನವರ ಜೊತೆ ಜಗಳವಾಡಿಕೊಂಡು ಚಾಕುವಿನಿಂದ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ 8 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ

ರಾಜ್ಯ ಸರ್ಕಾರದಿಂದ ಎಸ್ಸಿ, ಎಸ್ಟಿ ಹಣ ದುರ್ಬಳಕೆ, ದಲಿತರಿಗೆ ಮೋಸ

ಸಂಸದ ಕೋಟಾ ಶ್ರೀನಿವಾಸ ಪೂಜಾರಿ ವಾಗ್ದಾಳಿ



ಮಂಡ್ಯ,ಫೆ.27– ಕಾಂಗ್ರೆಸ್ ಸರ್ಕಾರ ಎಸ್ಸಿ, ಎಸ್ಟಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಸೇರಿದಂತೆ ಇತರೆ ಕಾರ್ಯಕ್ರಮಕ್ಕೆ ಬಳಸಿ, ಎಸ್ಸಿ, ಎಸ್ಟಿ ಸಮುದಾಯದ ವಿರೋಧಿ ಸರ್ಕಾರದಂತೆ ವರ್ತಿಸುತ್ತಿದೆ ಎಂದು ಉಡುಪಿ–ಚಿಕ್ಕಮಗಳೂರು ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ರಾಜ್ಯದಲ್ಲಿ 14 ತಂಡ ರಚಿಸಿ ಪ್ರತಿ ತಂಡಕ್ಕೆ 2 ಲೋಕಸಭಾ ಕ್ಷೇತ್ರಗಳ ಹಂಚಿ ರಾಜ್ಯದಲ್ಲಿ ಪ್ರಸ್ತುತ ಸರ್ಕಾರ ಎಸ್ಸಿ ಎಸ್ಟಿಗೆ ನೀಡಿದ ಅನುದಾನ ದುರ್ಬಳಕೆ ಮಾಡುತ್ತಿದ್ದು, ಆ ಹಣವನ್ನು ಎಸ್ಸಿ ಎಸ್ಟಿ ಸಮುದಾಯಕ್ಕೆ ಬಳಸಲು ಆಗ್ರಹಿಸಿದರು.

2023ರಲ್ಲಿ ಎಸ್ಸಿ, ಎಸ್ಟಿಗೆ ಮೀಸಲಿರಿಸಿದ 11,144 ಕೋಟಿ ರೂ, 2024ರಲ್ಲಿ 14,282 ಸಾವಿರ ಕೋಟಿ ರೂ ಹಣವನ್ನು ಗ್ಯಾರಂಟಿಗೆ ಬಳಸಿದ್ದು, ಈಗ 2025ರಲ್ಲಿ ಮಂಡನೆ ಮಾಡುವ ಬಜೆಟ್‌ನಲ್ಲಿ 14,488 ಸಾವಿರ ಕೋಟಿ ತೆಗೆದಿಡಲು ಯೋಜನೆ ರೂಪಿಸುತ್ತಿದೆ. 2023ರಿಂದ 25ರವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿರಿಸಿದ 39,914 ಸಾವಿರ ಕೋಟಿಗಳನ್ನು ಬಳಸಲಾಗುತ್ತಿದೆ ಎಂದು ಆರೋಪಿಸಿದರು.

ಮೀಸಲಿರಿಸಿದ ಅನುದಾನ ಅನ್ಯ ಕಾರ್ಯಕ್ರಮಗಳಿಗೆ ವಿನಿಯೋಗಿಸುವುದರಿಂದ ಸದರಿ ಸಮುದಾಯದ ಅಭಿವೃದ್ಧಿ ಕುಂಠಿತವಾಗಲಿದ್ದು, ಸದರಿ ಹಣವನ್ನು ಹಿಂದಿರುಗಿಸಿ, ಮುಂದಿನ ಬಜೆಟ್‌ನಲ್ಲಿಯೂ ಎಸ್ಸಿ ಎಸ್ಟಿ ಸಮುದಾಯದ ಹಣವನ್ನು ಗ್ಯಾರಂಟಿಗೆ ಬಳಸದೇ ಸಮುದಾಯಕ್ಕೆ ಸದ್ವಿನಿಯೋಗವಾಗುವಂತೆ ಮಾಡಬೇಕು ಎಂದು ಆಗ್ರಹಿಸಿ ಜನಜಾಗೃತಿ ಮಾಡಲಾಗುತ್ತಿದೆ ಎಂದು ಹೇಳಿದರು.

ಗೋಷ್ಠಿಯಲ್ಲಿ ಎಸ್ಸಿ ಮೋರ್ಚಾದ ರಾಜ್ಯಾಧ್ಯಕ್ಷ ಹಾಗೂ ಬೇಲೂರು ಶಾಸಕ ಸಿಮೆಂಟ್ ಮಂಜು, ಮಾಜಿ ಶಾಸಕ ಬಾಲರಾಜು ಇತರರಿದ್ದರು.

ಒಂದನೇ ಪುಟದಿಂದ

ಕಾಂಗ್ರೆಸ್‌ನಲ್ಲಿ ಆಕ್ಷೇಪ

ಪ್ರಯುಕ್ತ ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸದ್ಗುರು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಜತೆ ಪಾಲ್ಗೊಂಡಿದ್ದರು. ಡಿ.ಕೆ.ಶಿವಕುಮಾರ್ ಅವರು ಸದ್ಗುರು ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ್ದರು. ಶಿವಕುಮಾರ್ ಅವರ ಪತ್ನಿ ಉಷಾ, ನಾದಿನಿ ಹಾಗೂ ಕುಣಿಗಲ್ ಶಾಸಕ ಡಾ.ರಂಗನಾಥ್ ಅವರ ಪತ್ನಿ ಡಾ.ಸುಮಾ ಮತ್ತಿತರರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಅಮಿತ್ ಶಾ ಹಾಗೂ ಡಿಕೆಶಿ ಜೊತೆಗೆ ಕಾಣಿಸಿಕೊಂಡಿರುವ ಪೋಟೋ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಈಶಾ ಪ್ರತಿಷ್ಠಾನ ಕಾರ್ಯಕ್ರಮದಲ್ಲಿ ಡಿಕೆಶಿ ಭಾಗಿಯಾಗಿದ್ದಕ್ಕೆ ಎಐಸಿಸಿ ಕಾರ್ಯದರ್ಶಿ ಪಿ.ವಿ.ಮೋಹನ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಕುರಿತಾಗಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಹಾಕಿ ಡಿಕೆಶಿ ನಡೆಯನ್ನು ಪ್ರಶ್ನಿಸಿದ್ದಾರೆ. ರಾಹುಲ್ ಗಾಂಧಿ ಅವರನ್ನು ಅಣಕಿಸಿದ ವ್ಯಕ್ತಿಯ ಕಾರ್ಯಕ್ರಮದಲ್ಲಿ ಭಾಗಿಯಾದರೆ ಅದು ತಪ್ಪು ಸಂದೇಶಕ್ಕೆ ಎಡೆಮಾಡಿ ಕೊಡುತ್ತದೆ ಎಂದು ಮೋಹನ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಏನಿದು ಸದ್ಗುರು ವಿವಾದ: ಆನ್‌ಲೈನ್ ಸಂದರ್ಶನವೊಂದರಲ್ಲಿ ಮಾತನಾಡಿದ್ದ ಸದ್ಗುರು ಜಗ್ಗಿ ವಾಸುದೇವ್ ನಿರೂಪಕರ ಪ್ರಶ್ನೆಗೆ ಉತ್ತರಿಸಿ 'ನನಗೆ ರಾಹುಲ್ ಗಾಂಧಿ ಯಾರು ಎಂಬುದು ನಿಜಕ್ಕೂ ಗೊತ್ತಿಲ್ಲ, ಏಕೆಂದರೆ ಅವರು ಏನನ್ನು ಹೇಳಲು ಪ್ರಯತ್ನಿಸುತ್ತಿದ್ದಾರೆ ಎಂಬುದು ನಮಗೆ ಸ್ಪಷ್ಟವಿಲ್ಲ. ಯಾರಾದರೂ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಬಯಸಿದರೆ, ಆ ವ್ಯಕ್ತಿ ಏನನ್ನು ಪ್ರತಿನಿಧಿಸುತ್ತಾರೆ ಎಂಬುದು ಜನತೆಗೆ ಸ್ಪಷ್ಟವಾಗಿರಬೇಕು. ಅರವಿಂದ್ ಕೇಜ್ರಿವಾಲ್ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದಾರೆ, ನರೇಂದ್ರ ಮೋದಿ ಅಭಿವೃದ್ಧಿಯ ಬಗ್ಗೆ ಮಾತನಾ ಡುತ್ತಿದ್ದಾರೆ. ರಾಹುಲ್ ಗಾಂಧಿ ಏನನ್ನು ಪ್ರತಿನಿಧಿಸುತ್ತಾರೆ. ಕನಿಷ್ಠ ನನಗೆ ಇದು ಸ್ಪಷ್ಟವಾಗಿಲ್ಲ. ಎಂದು ಹೇಳಿದ್ದಾರೆ.

ಸಾಮೂಹಿಕ ನಾಯಕತ್ವ ಜಪ!

ಸಾಮೂಹಿಕ ನಾಯಕತ್ವದಲ್ಲಿ ಮುನ್ನಡೆಯುತ್ತೇವೆ ಎಂದು ಹೇಳಿರುವುದು ಹೊಸ ಚರ್ಚೆಗೆ ನಾಂದಿ ಹಾಡಿದೆ. ದೆಹಲಿಯಿಂದ ಬುಧವಾರ ಬೆಂಗಳೂರಿಗೆ ಮರಳಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 90ರ ದಶಕದಲ್ಲೇ ಮಂತ್ರಿ ಮಾಡಿ ಪಕ್ಷ ನನ್ನನ್ನು ಬೆಳೆಸಿದೆ. ಐದು ವರ್ಷದಿಂದ ಪಕ್ಷದ ರಾಜ್ಯಾಧ್ಯಕ್ಷನಾಗಿದ್ದು, ಸದ್ಯ ಡಿಸಿಎಂ ಮಾಡಿದೆ. ನನ್ನನ್ನು ಇಷ್ಟೆಲ್ಲಾ ಬೆಳೆಸಿ, ನನ್ನ ಮುಖ ತೋರಿಸಿ ನನಗೆ ನಾಯಕತ್ವ ಕೊಡಲಿಲ್ಲ ಎಂದರೆ ನಾನು ಮನೆಯಲ್ಲಿ ಕುಳಿಕೊಳ್ಳಬೇಕೆಂದು ಪಕ್ಷ ಇಷ್ಟು ಶಕ್ತಿ ನೀಡಿದೆಯೇ? ನಾನು ಯಾವುದೇ ಸ್ಥಾನ, ಜವಾಬ್ದಾರಿಯಲ್ಲಿದ್ದರೂ ಪಕ್ಷವನ್ನು ಮುನ್ನಡೆಸಬೇಕು ಎಂದು ಹೇಳಿದರು. ಹಿಂದೆ ಸಿದ್ದರಾಮಯ್ಯನವರು ಸಿಎಂ ಆಗಿದ್ದಾಗ ನಾನು ಪ್ರಚಾರ ಸಮಿತಿ ಅಧ್ಯಕ್ಷನಾಗಿದ್ದೆ. ಕಳೆದ ವಿಧಾನಸಭೆ ಚುನಾವಣೆ ವೇಳೆ ಕೆಪಿಸಿಸಿ ಅಧ್ಯಕ್ಷನಾಗಿದ್ದೆ. ಪಕ್ಷ ನನಗೆ ಹಲವು ಜವಾಬ್ದಾರಿ ನೀಡಿ ಬೆಳೆಸಿದೆ. ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರ ಪ್ರದೇಶ, ಅಸ್ಸಾಂ, ಬಿಹಾರ, ದಿಲ್ಲಿ, ಹಿಮಾಚಲ ಪ್ರದೇಶಕ್ಕೂ ನನ್ನನ್ನು ಕರೆಯುತ್ತಾರೆ. ನನಗಿರುವ ವೈಬ್ರೇಷನ್, ನನಗಿರುವ ಶಕ್ತಿ, ನನಗಿರುವ ಅನುಭವವನ್ನು ಬಳಸಬೇಕು ಎಂದು ಪ್ರತಿಪಾದಿಸಿದರು. ಸಿಎಂ ಸಿದ್ದರಾಮಯ್ಯ ಅವರು ಸಹ ಪಕ್ಷವನ್ನು ಮುನ್ನಡೆಸುತ್ತಾರೆ. ಎರಡು ಬಾರಿ ಸಿಎಂ, ಎರಡು ಬಾರಿ ವಿಧಾನಸಭೆ ಪ್ರತಿಪಕ್ಷ ನಾಯಕರಾಗಿಯೂ ಅವರು ಕಾರ್ಯ ನಿರ್ವಹಿಸಿದ್ದಾರೆ. ಅವರೂ ಪಕ್ಷದ ನೇತೃತ್ವ ವಹಿಸುತ್ತಾರೆ. ಸಾಮೂಹಿಕ ನಾಯಕತ್ವದಲ್ಲೇ ಮುಂದುವರಿಯುತ್ತೇವೆ. ಅವರು ಒಂದು ಕಡೆ ಹೋದರೆ, ನಾವು ಇನ್ನೊಂದು ಕಡೆ ಹೋಗುತ್ತೇವೆ ಎಂದು ಹೇಳಿದರು. ಹಾಗಾದರೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲವೇ ಎಂಬ ಪ್ರಶ್ನೆಗೆ, ಪಕ್ಷ ಸಿದ್ದರಾಮಯ್ಯನವ ರನ್ನು ಸಿಎಂ, ನನ್ನನ್ನು ಡಿಸಿಎಂ ಮಾಡಿದ್ದು, ಪಕ್ಷದ ನಿರ್ಧಾರವನ್ನು ಗೌರವಿಸುತ್ತೇನೆ ಎಂದಷ್ಟೇ ತಿಳಿಸಿದರು.

ವಿಷಕಾರಿ ಪ್ಲಾಸ್ಟಿಕ್ ನಿಷೇಧ

ವಿಷ ಅಂಶ ಪತ್ತೆಯಾಗಿದೆ. ಈ ಹಾನಿಕಾರಕ ಅಂಶದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಆಗಿರುವುದು ಪತ್ತೆಯಾಗಿದೆ. ಮೊದಲು ಇಡ್ಲಿಯನ್ನು ಹತ್ತಿ ಬಟ್ಟೆ ಬಳಸಿ ಬೇಯಿಸುತ್ತಿದ್ದರು, ಆದರೆ, ನಂತರ ಸುಲಭ ವಿಧಾನ ಕಂಡುಕೊಂಡು ಹೋಟೆಲ್ ಉದ್ಯಮ ಪ್ಲಾಸ್ಟಿಕ್ ಬಳಕೆಗೆ ಮೊರೆ ಹೋಗಿದೆ.

ಇದು ಇಡ್ಲಿ ತಯಾರಿಕೆಗೆ ಮಾತ್ರ ಸೀಮಿತವಾಗಿಲ್ಲ, ಪ್ಲಾಸ್ಟಿಕ್ ಬಳಕೆಯಿಂದ ಆಹಾರ ಅಸುರಕ್ಷಿತ ಎಂಬುದು ಪ್ರಯೋಗಾಲದಿಂದ ದೃಢಪಟ್ಟಿದೆ. ಪ್ಲಾಸ್ಟಿಕ್ ಹಾಳೆ ಶಾಖಕ್ಕೆ ಒಡ್ಡಿಕೊಳ್ಳುವುದರಿಂದ ಹಾನಿಕಾರಕ ವಸ್ತು ಹೊರ ಸೂಸುತ್ತದೆ. ಇದು ಕ್ಯಾನ್ಸರ್ ರೋಗಕ್ಕೆ ಮೂಲ ಕಾರಣ ಎಂದು ತಜ್ಞರು ಹೇಳಿದ್ದಾರೆ. ತಜ್ಞರು ನೀಡಿರುವ ಶಿಫಾರಸಿನ ಮೇರೆಗೆ ಆಹಾರ ಪದಾರ್ಥಗಳ ಉತ್ಪಾದನಾ ಕೇಂದ್ರ, ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಪ್ಲಾಸ್ಟಿಕ್ ನಿಷೇಧ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಗುಂಡೂರಾವ್ ತಿಳಿಸಿದರು. ಆದರೆ ದುರದೃಷ್ಟಕರ ಸಂಗತಿ ಎಂದರೆ, ಮೈಸೂರಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆ ನಿಷೇಧಿಸಿದ್ದರೂ ತಯಾರಕರು, ಮಾರಾಟಗಾರರು ಕೇರ್ ಮಾಡುತ್ತಿಲ್ಲ. ಪಾಲಿಕೆ ಅಧಿಕಾರಿಗಳು ಕಣ್ಣಾಮುಚ್ಚಾಲೆ ಆಡುತ್ತಿದ್ದಾರೆ.

ಡಿಕೆಶಿ ಕೂಡ ಒಬ್ಬ ಏಕನಾಥ್ ಶಿಂಧೆ

ಹೀಗಾಗಿ ಇದೆಲ್ಲವೂ ನವೆಂಬರ್ 16ರ ಮುಹೂರ್ತದ ಸಂಕೇತ ಎಂದರು. ಡಿಕೆಶಿ ಅವರು ಕುಂಭಮೇಳಕ್ಕೆ ಹೋಗಿದ್ದು, ಶಿವರಾತ್ರಿ ದಿನ ಇಶಾ ಫೌಂಡೇಶನ್‌ಗೆ ಹೋಗಿದ್ದು ಅವರ ವೈಯುಕ್ತಿಕ. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಕರಿಬೆಕ್ಕಿನ ಕಾಟ ಜಾಸ್ತಿ ಆಗಿದೆ. ಡಿಕೆಶಿ ಎಲ್ಲಿ ಹೋದರೂ ಕರಿಬೆಕ್ಕಿನ ಕಾಟ ಇದೆ. ಇಷ್ಟು ದಿನ ರಾಜ್ಯದಲ್ಲಿ ಇದ್ದವು. ಈಗ ರಾಷ್ಟ್ರಮಟ್ಟದಲ್ಲಿ ಡಿಕೆಶಿ ಹೋಗುವ ಕಡೆ ಕರಿಬೆಕ್ಕುಗಳು ಓಡಾಡ್ತಿವೆ ಇದು ಒಳ್ಳೆಯದಕ್ಕೋ, ಕೆಟ್ಟದ್ದಕ್ಕೋ ಗೊತ್ತಿಲ್ಲ ಎಂದು ವ್ಯಂಗ್ಯವಾಡಿದರು.

ಧರ್ಮದ ವಿಚಾರವಾಗಿ ನಮ್ಮ ಪಕ್ಷದ ನಾಯಕರು ಹೋಗುವುದು ಸಾಮಾನ್ಯ. ಇಶಾ ಫೌಂಡೇಶನ್ ಕಾರ್ಯಕ್ರಮಕ್ಕೆ ಈ ಹಿಂದೆ ಪ್ರಧಾನಿ ಕೂಡ ಹೋಗಿದ್ದಾರೆ. ಈಗ ಅಮಿತ್ ಶಾ ಅವರು ಹೋಗಿದ್ದಾರೆ. ಡಿಕೆಶಿ ಯಾಕೆ ಹೋಗಿದ್ದು ಎಂದು ಕಾಂಗ್ರೆಸ್ ಪಕ್ಷದಲ್ಲಿ ಆಕ್ಷೇಪ ಶುರುವಾಗಿದೆ. ಪ್ರಧಾನಿಯನ್ನು ಡಿಕೆಶಿಯವರು ಭೇಟಿ ಮಾಡಿ ಬಂದಿದ್ದರು. ಈಗ ಇಶಾ ಫೌಂಡೇಶನ್ ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದಾರೆ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್ ಅವರನ್ನು ಕಾಂಗ್ರೆಸ್ ಪಕ್ಷ ಹೊರಗೆ ಹಾಕಲಿ. ಆಮೇಲೆ ನಾವು ಏನು ಮಾಡ್ಬೇಕು ನೋಡೋಣ. ನವೆಂಬರ್ ಡೆಡ್‌ಲೈನ್ ಬಗ್ಗೆ ನಾನು ಹೇಳಿದ್ದೆ. ಡಿಕೆಶಿಗೆ ಜ್ಯೋತಿಷ್ಯ ಹೇಳಲ್ಲ. ಆದರೆ ಸತ್ಯಸಂಗತಿ ಹೇಳಿದ್ದೀನಿ, ನಾಯಕತ್ವದ ವಿಚಾರದಲ್ಲಿ ಸಿದ್ದರಾಮಯ್ಯ ವೀಕ್ ಸಿಎಂ. ಅವರನ್ನು ಯಾವ ರಾಜ್ಯ ದಲ್ಲೂ ಮೂಸಿ ನೋಡಲ್ಲ. ಸಿದ್ದರಾಮಯ್ಯ ಮಾಸ್ ಲೀಡರ್ ಅಲ್ಲ. ನಾನೇ ಮಾಸ್ ಲೀಡರ್ ಎಂದು ಡಿಕೆಶಿ ಸಂದೇಶ ಕೊಟ್ಟಿದ್ದಾರೆ ಎಂದು ಕೆಣಕಿದರು.

ಸೇರುವ ಕುರಿತು ಯಾವುದೇ ಚರ್ಚೆ ಇಲ್ಲ

ಹೇಳಿದರು. ಅದು ಆ ಪಕ್ಷದ ಅಪನಂಬಿಕೆ ಮತ್ತು ಗೊಂದಲದ ಸಂಕೇತ. ಅಪನಂಬಿಕೆ ಇದೆ, ಅದಕ್ಕೆ ಅಪಸ್ವರ ಇದೆ. ಡಿಕೆಶಿ ಬಿಜೆಪಿ ಸೇರುವ ಕುರಿತು ಯಾವುದೇ ಚರ್ಚೆ ಇಲ್ಲ. ರಾಜಕಾರಣದಲ್ಲಿ ಬೆಳವಣಿಗೆ ಕ್ಷಿಪ್ರವೇ ಆಗೋದು, ಓವರ್ ನೈಟ್ ಆಗೋದು. ಪ್ರಶ್ನೆ ಅದಲ್ಲ. ಆದರೆ, ನಮ್ಮ ತಿಳುವಳಿಕೆಯಲ್ಲಿ ಆ ರೀತಿ ಯಾವುದೇ ಸ್ಥಿತಿ ಇಲ್ಲ ಎಂದು ಸ್ಪಷ್ಟಪಡಿಸಿದರು. ಇದೇ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ರಾಜ್ಯಾಧ್ಯಕ್ಷ ಸ್ಥಾನಕ್ಕೆ ನನ್ನ ಹೆಸರನ್ನ ತೇಲಿಬಿಡ್ತೀರಿ. ಎಲ್ಲರೂ ಒಟ್ಟಿಗೆ ಶಕ್ತಿಯಾಗಿ ಮತ್ತೊಮ್ಮೆ ಸರ್ಕಾರ ರಚನೆ ಮಾಡಬೇಕು. ಎಲ್ಲರನ್ನೂ ಒಳಗೊಂಡಂತಹ ಸಂಘಟನೆ ಮಾಡುವ ಉದ್ದೇಶ ಇದೆ ಎಂದು ಹೇಳಿದರು.

ಹೊಸ ಆರಂಭಕ್ಕೆ ಮುನ್ನುಡಿ

ಟ್ವೀಟ್ ಮಾಡಿರುವ ಪ್ರಧಾನಿ ಮೋದಿ, ಮಹಾಕುಂಭ ಮೇಳವು ಅಧಿಕೃತವಾಗಿ ಸಂಪನ್ನವಾಗಿದೆ. ಈ ಬಾರಿಯ ಮಹಾಕುಂಭ ಮೇಳವು ಏಕತೆಯ ಮಹಾಯಜ್ಞದಂತಿತ್ತು. 45 ದಿನಗಳ ಈ ಮಹಾಯಜ್ಞದಲ್ಲಿ ದೇಶದ 140 ಕೋಟಿ ಜನ ಒಟ್ಟಾಗಿ ಭಾಗವಹಿಸಿದ್ದು, ದೇಶದ ಏಕತೆಗೆ ಸಾಕ್ಷಿಯಾಗಿದೆ ಎಂದು ಹೇಳಿದ್ದಾರೆ.

ಮುಂದುವರೆದು, ದೇಶದ ಜನರ ನಂಬಿಕೆ ಮತ್ತು ಅಸ್ಮಿತೆಯ ಉದ್ದೀಪನಕ್ಕೆ ಈ ಬಾರಿಯ ಮಹಾಕುಂಭ ಮೇಳ ಅವಕಾಶ ಕಲ್ಪಿಸಿದೆ. ಈ ಬೃಹತ್ ಧಾರ್ಮಿಕ ಸಮಾರಂಭವು, ದೇಶದ ಆಧ್ಯಾತ್ಮಿಕ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಗಿತ್ತು. ಜಗತ್ತಿನ ಮೂಲೆ ಮೂಲೆಗಳಿಂದ ಬಂದು, ಮಹಾಕುಂಭ ಮೇಳವನ್ನು ಕಣ್ತುಂಬಿಕೊಂಡ ಕೋಟ್ಯಾಂತರ ಭಕ್ತರಿಗೆ ಈ ಸಂದರ್ಭದಲ್ಲಿ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಪ್ರಯಾಗರಾಜ್ ಮಹಾಕುಂಭ ಮೇಳ ಮುಕ್ತಾಯ ಕಂಡಿರಬಹುದು. ಆದರೆ ವಿಶ್ವದ ಈ ಬೃಹತ್ ಧಾರ್ಮಿಕ ಸಮಾರಂಭವು, ದೇಶದ ಜನರ ಆಧ್ಯಾತ್ಮಿಕ ಪ್ರಾತಿಯ ಹೊಸ ಆರಂಭವನ್ನು ಸ್ಪಷ್ಟವಾಗಿ ಗುರುತಿಸಿದೆ. ಭಾರತ ತನ್ನ ಆಧ್ಯಾತ್ಮಿಕ ಪಥದಲ್ಲಿ ಮತ್ತಷ್ಟು ಗಟ್ಟಿಯಾಗಿ ಮುನ್ನಡೆಯಲಿದೆ ಎಂದು ಪ್ರಧಾನಿ ಮೋದಿ ಇದೇ ವೇಳೆ ಆಶಯ ವ್ಯಕ್ತಪಡಿಸಿದ್ದಾರೆ.

ಲಿಂಗಾಯತರ ಒಡೆಯುವ ಅಜೆಂಡಾ...!

ಒಗ್ಗಟ್ಟು ಕಾಯ್ದುಕೊಳ್ಳಲು ಸಚಿವ ಎಂ.ಬಿ.ಪಾಟೀಲ್ ಕರೆ

ಬೆಂಗಳೂರು, ಫೆ.27(ಕೆಎಂಶಿ) – ರಾಜ್ಯದಲ್ಲಿ ಲಿಂಗಾಯತರನ್ನು ಒಡೆದು ಆಳುವ ಒಂದು ಅಜೆಂಡಾ ಕೆಲಸ ಮಾಡುತ್ತಿದ್ದು, ಸಮುದಾಯ ಸಂಘಟಿತ ಮತ್ತು ಸೆತ್ಯಪಕ್ಷಪಾತಿಯಾಗಿ ಉತ್ತರಿಸಬೇಕಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾ ಕಾರ್ಯಾಧ್ಯಕ್ಷ ಹಾಗೂ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಕರೆ ನೀಡಿದ್ದಾರೆ.

ವಚನ ದರ್ಶನ: ಸತ್ಯ–ಮಿಥ್ಯ' ಕೃತಿ ಬಿಡುಗಡೆ ಮಾಡಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ವಚನಗಳು ಬರದೇ ಇದ್ದಿದ್ದರೆ ಇಂದು ನಾವ್ಯಾರೂ ಇರುತ್ತಿರಲ್ಲಿಲ್ಲ, ವಚನಗಳ ಬಗೆಗಿನ ಚರ್ಚೆಯನ್ನು ನಾವು ವಿರೋಧಿಸುವುದಿಲ್ಲ. ಆದರೆ, ಅದರ ಹಿಂದೆ ಇರುವ ಕೆಟ್ಟ ಅಜೆಂಡಾ ಸಹಿಸುವುದಿಲ್ಲ ಎಂದರು. ಈ ದಿಸೆಯಲ್ಲಿ ಲಿಂಗಾಯತ ಸ್ವಾಮೀಜಿಗಳು ಮತ್ತು ಮಠಗಳು ಮಾಡಬೇಕಾದ ಕೆಲಸ ಅಗಾಧವಾಗಿದೆ, ವಚನಗಳ ಸ್ವೋಪಜ್ಞತೆ ವಿರೋಧಿಸುವ ವಚನ ದರ್ಶನ ಪುಸ್ತಕಕ್ಕೆ ಲೇಖನ ಬರೆದಿರುವವರೂ ಲಿಂಗಾಯತರೇ, ಅದರ ಬಿಡುಗಡೆ ಕಾರ್ಯಕ್ರಮಗಳು ನಡೆದಿರುವುದು ಕೂಡ ಲಿಂಗಾಯತ ಮಠಗಳಲ್ಲೇ, ಆದರೆ, ಅದನ್ನು ಬಿಡುಗಡೆ ಮಾಡಿದವರು ಮಾತ್ರ ಲಿಂಗಾಯತರಲ್ಲ, ಇದು ರಾಜ್ಯದಲ್ಲಿ ಲಿಂಗಾಯತ ಸಮುದಾಯದ ಅವಸ್ಥೆಯಾಗಿದೆ.

ಟಿಡಿಆರ್ ಹಸ್ತಾಂತರಿಸಿದ ರಾಜ್ಯ ಸರ್ಕಾರ

ಪ್ರಕರಣ ತೀರ್ಮಾನವಾಗುವ ತನಕ ನಿಮ್ಮ ಬಳಿಯೇ ಇರಲಿ ಎಂದು ಮನವಿ ಮಾಡಿದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಾಧೀಶರು, ನೀವು ಒಂದೊಂದು ಬಾರಿ ಒಂದೊಂದು ರೀತಿಯ ತೀರ್ಮಾನ ಮಾಡುತ್ತೀರಾ. ಒಮ್ಮೆ ಟಿಡಿಆರ್ ಕೊಡಲು ಒಪ್ಪಿದ್ದೇವೆ ಎನ್ನುತ್ತೀರಾ. ಮತ್ತೊಮ್ಮೆ ಟಿಡಿಆರ್‌ಗೆ ನೀವು ನಿಗದಿ ಮಾಡಿರುವಷ್ಟು ಹಣ ನೀಡಲು ಸಾಧ್ಯವಿಲ್ಲ ಎನ್ನುತ್ತೀರಾ. ನಾವು ಗಂಭೀರವಾಗಿ ಹೇಳುತ್ತಿದ್ದೇವೆ. ಟಿಡಿಆರ್ ಕುರಿತಂತೆ ನಿಮ್ಮ ಅಂತಿಮ ತೀರ್ಮಾನ ತಿಳಿಸಿ ಎಂದು ಸೂಚನೆ ನೀಡಿದರು. ಮೊದಲು ನೀವು ನ್ಯಾಯಾಲಯಕ್ಕೆ ಟಿಡಿಆರ್ ಸಲ್ಲಿಸಿ. ತರುವಾಯ ಏನು ಮಾಡಬೇಕು ಎಂಬುದನ್ನು ನ್ಯಾಯಾಲಯ ತೀರ್ಮಾನ ಮಾಡುತ್ತದೆ ಎಂದು ಮುಂದಿನ ವಿಚಾರಣೆಯನ್ನು ಮಾರ್ಚ್ 20ಕ್ಕೆ ಮುಂದೂಡಿತು.

ರಾಜ್ಯ ಸರ್ಕಾರದಿಂದ ಹಲವು ಅಧಿಕಾರಿಗಳು ಇಲ್ಲಿ ಹಾಜರಿದ್ದಾರೆ. ಮುಂದಿನ ವಿಚಾರಣೆ ವೇಳೆ ಎಲ್ಲಾ ಅಧಿಕಾರಿಗಳು ಹಾಜರಿರಬೇಕೇ ಎಂಬ ಕಪಿಲ್ ಸಿಬಲ್ ಪ್ರಶ್ನೆಗೆ, ಮಾ.20ರ ವಿಚಾರಣೆ ವೇಳೆ ಬಿಡಿಎ ಹಾಗೂ ಬಿಬಿಎಂಪಿ ಅಧಿಕಾರಿಗಳು ಹಾಜರಿದ್ದರೆ ಸಾಕು ಎಂದು ನ್ಯಾಯಾಧೀಶರು ಸ್ಪಷ್ಟನೆ ನೀಡಿದರು. ರಾಜ್ಯ ಸರ್ಕಾರ, ಈಗ ಸುಪ್ರೀಂಕೋರ್ಟ್ ನಿಗದಿ ಮಾಡಿರುವ 3,400 ಕೋಟಿ ಟಿಡಿಆರ್ ನ್ನು ನ್ಯಾಯಾಲಯಕ್ಕೆ ಇಂದು ನ್ಯಾಯಾಲಯಕ್ಕೆ ಹಸ್ತಾಂತರಿಸಿದೆ. ಮಾರ್ಚ್ 20ರ ವಿಚಾರಣೆ ವೇಳೆಗೆ ನ್ಯಾಯಾಲಯ ಏನು ತೀರ್ಮಾನ ಮಾಡಲಿದೆ ಎಂಬ ಸಹಜ ಕುತೂಹಲವಿದೆ.

66 ಕೋಟಿ ಜನರು ಪುಣ್ಯಸ್ನಾನ

ಮೇಳೈಕೆ: ಸಾವಿರಾರು ವರ್ಷಗಳಿಂದ ಬಂದ ಪರಂಪರೆ ಒಂದೆಡೆಯಾದರೆ, ಆಧುನಿಕತೆಯ ಪ್ರತಿಬಿಂಬವಾಗಿಯೂ ಮಹಾಕುಂಭ ಮೇಳೈಸಿತು.

ದಿನದ 24 ಗಂಟೆ ಕಾರ್ಯನಿರ್ವಹಿಸುವ ಡ್ರೋನ್ ವಿರೋಧಿ ವ್ಯವಸ್ಥೆಗಳು, ಕೃತಕ ಬುದ್ಧಿಮತ್ತೆ (ಎಐ) ಆಧರಿತ ಕ್ಯಾಮೆರಾಗಳು ಸೇರಿದಂತೆ ಅಭೂತಪೂರ್ವ ಭದ್ರತಾ ಕ್ರಮ ಗಳಿಗೆ ಕುಂಭ ಸಾಕ್ಷಿಯಾಯಿತು. 37,000 ಪೊಲೀಸರು, 14,000 ಗೃಹರಕ್ಷಕರು, 2,750 AI ಆಧರಿತ ಸಿಸಿಟಿವಿಗಳು, 50 ಅಗ್ನಿಶಾಮಕ ಠಾಣೆಗಳು, 3 ಜಲ ಪೊಲೀಸ್ ಠಾಣೆಗಳು, 18 ಜಲ ಪೊಲೀಸ್ ನಿಯಂತ್ರಣ ಕೊಠಡಿಗಳು ಹಾಗೂ 50 ಕಾವಲು ಗೋಪುರಗಳನ್ನು ಮಹಾಕುಂಭದ ಅಷ್ಟೂ ದಿನಗಳ ಕಾಲ ನಿಯೋಜಿಸಲಾಗಿತ್ತು. ಇವು ಗಳಲ್ಲದೆ, ಮಹಾಕುಂಭ ಮೇಳಕ್ಕೆ ಸಂಬಂಧಿ ಸಿದಂತೆ ಯಾವುದೇ ತಪ್ಪು ಮಾಹಿತಿ ಹರಡುವುದನ್ನು ಪರಿಶೀಲಿಸಲು ಸಾಮಾಜಿಕ ಮಾಧ್ಯಮಗಳ 24x7 ನಿಯಮಿತ ಮೇಲ್ವಿಚಾರಣೆಯನ್ನು ನಡೆಸಲಾಗುತ್ತಿತ್ತು.

ಶತಮಾನದ ಸಂಭ್ರಮ: 144 ವರ್ಷಗಳಿಗೊಮ್ಮೆ ನಡೆಯುವ ಮಹಾಕುಂಭಮೇಳದ ಸಂಭ್ರಮ ಮುಗಿದಿದೆ. ನಾಗಾಸಾಧುಗಳು, ಸನ್ಯಾಸಿ–ಸಾಧ್ವಿಯರು, ವ್ಯಾಪಾರಸ್ಥರು, ಪತ್ರಕರ್ತರು, ನೃತ್ಯ–ನಾಟಕ–ಪ್ರದರ್ಶನಕಾರರು ಹೀಗೆ ದೇಶದ ಮೂಲೆಮೂಲೆಗಳಿಂದ ಕುಂಭಕ್ಕೆ ಆಗಮಿಸಿದ್ದ ಜನ ತಮ್ಮ ತಮ್ಮ ಸ್ಥಾನಗಳಿಗೆ ಮರಳಿದ್ದಾರೆ. ಆದರೆ ಮಹಾಕುಂಭ ಕಟ್ಟಿಕೊಟ್ಟ ನೆನಪು, ಅನುಭವಗಳು ಮಾತ್ರ ಜನರನ್ನು ಶತಮಾನ ಕಾಲ ಕಾಡಲಿವೆ. ಮುಂದಿನ ಕುಂಭಮೇಳ 2027ಕ್ಕೆ ಮಹಾರಾಷ್ಟ್ರದ ನಾಸಿಕ್‌ನ ತ್ರಿವೇಣಿ ಸಂಗಮದಲ್ಲಿ ನಡೆಯಲಿದೆ.

ಬಲಾಬಲ ಪ್ರದರ್ಶನಕ್ಕೆ ಯಡಿಯೂರಪ್ಪ 83ನೇ ಹುಟ್ಟುಹಬ್ಬದ ರಂಗು!

ಬೆಂಗಳೂರು, ಫೆ.27(ಕೆಎಂಶಿ) – ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 83ನೇ ಹುಟ್ಟುಹಬ್ಬ ಸಂದರ್ಭದಲ್ಲಿ ಅವರ ಪುತ್ರ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಲಿಂಗಾಯತ ಸಮುದಾಯಕ್ಕೆ ತಮ್ಮ ತಂದೆಯೇ ನಾಯಕ ಎಂಬುದನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಇತರು ಲಿಂಗಾಯತ ಮುಖಂಡರ ಪರ್ಯಾಯ ಸಭೆ ಕರೆದು ಯಡಿಯೂರಪ್ಪ ಕುಟುಂಬಕ್ಕೆ ಟಾಂಗ್ ನೀಡಲು ಹೊರಟಿದ್ದರು. ಯಡಿಯೂರಪ್ಪ ಅವರ ಹುಟ್ಟುಹಬ್ಬವನ್ನು ವೇದಿಕೆಯನ್ನಾಗಿ ಬಳಸಿಕೊಂಡ ವಿಜಯೇಂದ್ರ, ಲಿಂಗಾಯತ ಸಮುದಾಯದ ಪಕ್ಷದ ಮುಖಂಡರು ಹಾಗೂ ಜನಪ್ರತಿನಿಧಿಗಳನ್ನು ಒಗ್ಗೂಡಿಸಿ, ತಮ್ಮ ವಿರೋಧಿ ಬಣಕ್ಕೆ ಎದಿರೇಟು ಕೊಡುವಲ್ಲಿ ಯಶಸ್ವಿಯಾದರು.

ಯಡಿಯೂರಪ್ಪ ಪ್ರತಿ ವರ್ಷ ತಮ್ಮ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಿಕೊಳ್ಳುತ್ತಿದ್ದರು, ಆದರೆ, ಇಂದು ಡಾಲರ್ಸ್ ಕಾಲೋನಿಯ ಅವರ ನಿವಾಸದ ಹುಲ್ಲುಹಾಸಿನ ಅಂಗಣದಲ್ಲಿ ಭರ್ಜರಿಯಾಗಿ ಆಚರಣೆ ಮಾಡುವ ಮೂಲಕ ಲಿಂಗಾಯತ ಸಮುದಾಯದಲ್ಲಿ ತಮ್ಮ ಬಣವೇ ಮೇಲುಗೈ ಎಂಬುದನ್ನು ವಿಜಯೇಂದ್ರ ಸಾಬೀತುಪಡಿಸಿದರು.



ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಪಕ್ಷದ ಹಲವು ನಾಯಕರು ಉಪಸ್ಥಿತರಿದ್ದು, ಯಡಿಯೂರಪ್ಪ ಅವರಿಗೆ ಶುಭ ಹಾರೈಸಿದರು.

ಇದೇ ವೇಳೆ ಪಕ್ಷದ ಲಿಂಗಾಯತ ಶಾಸಕರು, ಮಾಜಿ ಶಾಸಕರಲ್ಲದೆ, ಅನೇಕ ಮುಖಂಡರು ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿ, ತಮ್ಮ ನಾಯಕನಿಗೆ ಶುಭ ಹಾರೈಸಿದರು. ಹುಟ್ಟುಹಬ್ಬವನ್ನು ರಾಜಕೀಯ ವೇದಿಕೆಯನ್ನಾಗಿ ಮಾರ್ಪಡಿಸಿದ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಇದೇ ವೇಳೆ ಸಮುದಾಯದ ಮುಖಂಡರ ಸಭೆಯನ್ನೂ ನಡೆಸಿದರು.

ವೀರಶೈವ, ಲಿಂಗಾಯತ ಸಮುದಾಯಕ್ಕೆ ರಾಜ್ಯದಲ್ಲಿ ಯಡಿಯೂರಪ್ಪ ಒಬ್ಬರೇ ನಾಯಕರು, ಅವರು ಪಕ್ಷವನ್ನು ಅಧಿಕಾರಕ್ಕೆ ತಂದವರು. ಕೆಲವು ದುಷ್ಟ ಶಕ್ತಿಗಳು ಸಮುದಾಯ ಒಡೆಯುವ ಕೆಲಸ ಮಾಡುತ್ತಿವೆ, ರಾಜ್ಯದಲ್ಲಿ ಲಿಂಗಾಯತ ಸಮುದಾಯಕ್ಕೆ ಯಡಿಯೂರಪ್ಪ ಅವರೇ ಪ್ರಶ್ನಾತೀತ ನಾಯಕ ಎಂಬುದಾಗಿ ಸಭೆ ನಿರ್ಣಯ ಕೈಗೊಂಡಿತು.

ಯಡಿಯೂರಪ್ಪ ರಾಜಕೀಯವಾಗಿ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ, ಆದರೆ, ಅವರನ್ನು ನಮ್ಮವರೇ ಈ ರೀತಿ ಬಿಂಬಿಸುವ ಕೆಲಸ ಮಾಡುತ್ತಿದ್ದಾರೆ. ವಿರೋಧಿಗಳಿಗೆ ವಿಜಯೇಂದ್ರ ಅವರ ಶಕ್ತಿ ಏನು ಎಂಬುದನ್ನು ತೋರಿಸಲು ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಸಭೆಗಳನ್ನು ನಡೆಸಲು ಸಭೆ ತೀರ್ಮಾನಿಸಿತು.

ಈ ಹೋರಾಟದ ಮೂಲಕ ಯಡಿಯೂರಪ್ಪ, ವಿಜಯೇಂದ್ರ ಪರವಾಗಿ ಸಮುದಾಯ ಇದೆ ಎಂಬುದನ್ನು ತೋರಿಸುತ್ತೇವೆ, ಯಾರೋ ಒಬ್ಬಿಬ್ಬರು ಸಭೆ ನಡೆಸಿದಾಕ್ಷಣ ನಮ್ಮ ಬಲ ಕುಗ್ಗುವುದಿಲ್ಲ. ವಿರೋಧಿಗಳ ಸಭೆಗೆ ಬಂದವರು, ಬರುವವರೂ ಲಿಂಗಾಯತರೇ ಅಲ್ಲ, ಸಮುದಾಯದ ಬೆಂಬಲ ಯಡಿಯೂರಪ್ಪ ಮತ್ತು ವಿಜಯೇಂದ್ರ ಅವರಿಗೆ ಮಾತ್ರ ಎಂಬುದನ್ನು ಸಭೆ ಅನುಮೋದಿಸಿತು.

ಉತ್ಕೃಷ್ಟ ಸೇವೆಯಲ್ಲಿ ಸೆಸ್ಕ್‌ಗೆ 'ಎ' ಶ್ರೇಣಿ ಗರಿ

• ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಮಾಹಿತಿ • ಈ ಶ್ರೇಣಿ ಪಡೆದ ಏಕೈಕ ನಿಗಮದ ಹೆಗ್ಗಳಿಕೆ • ಜೊತೆಗೆ ಸೆಸ್ಕ್‌ಗೆ ರಾಷ್ಟ್ರಮಟ್ಟದಲ್ಲಿ 16ನೇ ಶ್ರೇಣಿ • ಫೀಡರ್ ನಿರ್ವಹಣೆಯಲ್ಲಿ ಅಪ್ರತಿಮ ಕಾರ್ಯ ಸುರಕ್ಷತೆ ಪ್ರಶಂಸೆ • ಸೆಸ್ಕ್ ಎಂಡಿ ಜಿ.ಶೀಲಾ ಇಂದು ನಿವೃತ್ತಿ



ಚೆಸ್ಕಾಂ ಪ್ರಧಾನ ಕಚೇರಿಯಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಚೆಸ್ಕಾಂ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿದರು. ವ್ಯವಸ್ಥಾಪಕ ನಿರ್ದೇಶಕರಾದ ಜಿ.ಶೀಲಾ, ತಾಂತ್ರಿಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಉಪಸ್ಥಿತರಿದ್ದರು.

ಮೈಸೂರು, ಫೆ.27(ಎಂಕೆ)– ಉತ್ತಮ ಸೇವೆ, ವಿದ್ಯುತ್ ಉಳಿತಾಯ, ಫೀಡರ್ ನಿರ್ವಹಣೆ, ಆದಾಯ ಸಂಗ್ರಹ ಸೇರಿದಂತೆ ಹಲವು ವಿಭಾಗಗಳಲ್ಲಿ ಉತ್ಕೃಷ್ಟತೆಯ ಬದ್ಧತೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಚೆಸ್ಕಾಂ), ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿಐ) ಆಫ್ ಇಂಡಿಯಾ ನೀಡುವ ರೇಟಿಂಗ್‌ನಲ್ಲಿ 'ಬಿ' ಶ್ರೇಣಿಯಿಂದ 'ಎ' ಶ್ರೇಣಿಗೆ ಉನ್ನತೀಕರಣಗೊಂಡಿದೆ. ಈ ಮೂಲಕ 'ಎ' ಶ್ರೇಣಿ ಪಡೆದಿರುವ ರಾಜ್ಯದ ಏಕೈಕ ಎಸ್ಕಾಂ ಆಗಿದೆ ಎಂದು ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಹರ್ಷ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಚೆಸ್ಕಾಂ ಪ್ರಧಾನ ಕಚೇರಿಯಲ್ಲಿ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಜಿ.ಶೀಲಾ ಅವರ ನಿವೃತ್ತಿ ಹಿನ್ನಲೆಯಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ಅವರು, ಸೆಸ್ಕ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಉತ್ತಮ ಕಾರ್ಯನಿರ್ವಹಣೆಯಿಂದಾಗಿ 'ಎ' ಶ್ರೇಣಿ ಪಡೆಯಲು ಸಾಧ್ಯವಾಗಿದೆ. ಅಲ್ಲದೇ ರಾಷ್ಟ್ರಮಟ್ಟದಲ್ಲಿ 16ನೇ ಶ್ರೇಣಿಯನ್ನು ಸೆಸ್ಕ್ ಪಡೆದಿದ್ದು, ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. ಇದರಿಂದ ಸೆಸ್ಕ್‌ಗೆ ಕೇಂದ್ರ ಮತ್ತು ರಾಜ್ಯದಿಂದ ಅಗತ್ಯ ಅನುದಾನ ಸಿಗುವುದರೊಂದಿಗೆ ಬ್ಯಾಂಕ್ ನಿಂದ ಸಾಲ ಸೌಲಭ್ಯ ಪಡೆಯಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಫೀಡರ್ ನಿರ್ವಹಣೆಗೆ ಒತ್ತು ನೀಡಿದ್ದು, ಪ್ರತಿ ಕಾರ್ಯ ಮತ್ತು ಪಾಲನಾ ವಿಭಾಗದಲ್ಲಿ ಪ್ರತಿ ತಿಂಗಳು ಅತ್ಯಂತ ಹೆಚ್ಚು ವಿದ್ಯುತ್ ಅಡಚಣೆ ಉಂಟಾಗಿರುವ 11 ಕೆವಿ ಮಾರ್ಗವನ್ನು ಗುರುತಿಸಿ, ಸಮಗ್ರ ನಿರ್ವಹಣೆ ಮಾಡಲಾಗುತ್ತಿದೆ. ಫೀಡರ್ ನಿರ್ವಹಣೆ ಅಭಿಯಾನದಡಿ 272, 11ಕೆವಿ ಫೀಡರ್‌ಗಳನ್ನು ನಿರ್ವಹಣೆ ಮಾಡಲಾಗುತ್ತಿದ್ದು, ಇದರಿಂದ ಶೇ.50ಕ್ಕೂ ಹೆಚ್ಚು ಅಡಚಣೆಗಳು ಕಡಿಮೆಯಾಗಿದೆ. ವಿತರಣಾ ಪರಿವರ್ತಕಗಳ ವಿಫಲತೆ ಹಾಗೂ ವಿದ್ಯುತ್ ಅವಘಡಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ನಿರ್ವಹಣೆ ಅಭಿಯಾನದಡಿ ಅಪಾಯಕಾರಿ ಸ್ಥಿತಿಯಲ್ಲಿರುವ ಪರಿವರ್ತಕಗಳು ಹಾಗೂ ಪದೇ ಪದೇ ವಿಫಲವಾಗುತ್ತಿದ್ದ ಪರಿವರ್ತಕಗಳನ್ನು ಗುರುತಿಸಿ ಅವುಗಳ ಸಮಗ್ರ ನಿರ್ವಹಣೆಗೆ ಕ್ರಮವಹಿಸಲಾಗುತ್ತಿದೆ. ಈವರೆಗೂ ವಿವಿಧ ಸಾಮರ್ಥ್ಯದ ಒಟ್ಟು 4,642 ವಿತರಣಾ ಪರಿವರ್ತಕಗಳ ನಿರ್ವಹಿಸಲಾಗಿರುತ್ತದೆ ಎಂದು ತಿಳಿಸಿದರು.

ವಿದ್ಯುತ್ ಅಪಘಾತ, ತಾಂತ್ರಿಕ ಹಾಗೂ ವಾಣಿಜ್ಯ ನಷ್ಟವನ್ನು ತಡೆಗಟ್ಟುವ ನಿಟ್ಟಿನಲ್ಲಿ 23,061 ಅಪಾಯಕಾರಿ ಸ್ಥಳಗಳನ್ನು ಗುರ್ತಿಸಿ, ಸರಿಪಡಿಸಲಾಗಿದೆ. ಕೊಡಗು ಜಿಲ್ಲೆಯಾದ್ಯಂತ ವಿದ್ಯುತ್ ಜಾಲದ ಸಮಗ್ರ ಸಬಲೀಕರಣ ಕಾಮಗಾರಿ ಕೈಗೊಂಡಿದ್ದೇವೆ. ಮೈಸೂರು ನಗರದಲ್ಲಿ ನಡೆಯುತ್ತಿರುವ ಯುಜಿ ಕೇಬಲ್ ಕಾಮಗಾರಿ ಪ್ರಗತಿಯಲ್ಲಿದ್ದು, ಶೇ.60 ರಷ್ಟು ಮುಕ್ತಾಯಗೊಂಡಿದೆ. ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಸಮರ್ಪಕ ವಿದ್ಯುತ್ ಪೂರೈಸುವ ಪರಿವರ್ತಕಗಳು ವಿಫಲಗೊಂಡಲ್ಲಿ 24 ಗಂಟೆಗಳೊಳಗೆ ಬದಲಾಯಿಸುವ ಅಭಿಯಾನ ಆರಂಭಿಸಲಾಗಿದೆ. ಚೆಸ್ಕಾಂ ವ್ಯಾಪ್ತಿಯ ಆಯ್ದ ಗ್ರಾಮಗಳನ್ನು ವಿದ್ಯುತ್ ಮಾದರಿ ಗ್ರಾಮಗಳನ್ನಾಗಿಸಲು ಕಿರಿದಾದ ಮತ್ತು ಜನ ದಟ್ಟಣೆ ಹೆಚ್ಚಾಗಿರುವ ರಸ್ತೆಗಳಲ್ಲಿ ಎಲ್‌ಟಿ ವಿದ್ಯುತ್ ತಂತಿಗಳನ್ನು ಬದಲಿಸಿ, ಎಲ್‌ಟಿ ಎಬಿ ಕೇಬಲ್‌ನಿಂದ ಬದಲಾಯಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಆದಾಯ ಸಂಗ್ರಹ ಅಭಿಯಾನ: ಚೆಸ್ಕಾಂ ತಾಂತ್ರಿಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಮಾತನಾಡಿ, ಚೆಸ್ಕಾಂ ವ್ಯಾಪ್ತಿಯ ಮಳವಳ್ಳಿ, ದರಸಗುಪ್ಪೆ ಹಾಗೂ ಮಹದೇವಪುರ ಶಾಖೆಗಳನ್ನು ರಚಿಸಿದ್ದು, ವಿದ್ಯುತ್ ಅಡಚಣೆಯಾಗದಂತೆ 788 ಮಂದಿ ಲೈನ್ ಹೆಲ್ಪರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. 2024ರ ಫೆಬ್ರವರಿ ತಿಂಗಳಿಂದ 2025ರ ಜನವರಿ ತಿಂಗಳವರೆಗೆ 1,63,235 ಎಲೆಕ್ಟ್ರೋಮೆಕ್ಯಾನಿಕಲ್ ಮಾಪನಗಳನ್ನು ಬದಲಿಸಿ, ಸ್ಥಿರ ಮೀಟರ್‌ಗಳನ್ನು ಅಳವಡಿಸಲಾಗಿದೆ. ಇದರಿಂದ ವಿದ್ಯುತ್ ಸೋರಿಕೆ ನಿಯಂತ್ರಣದ ಜೊತೆಗೆ ವಿದ್ಯುತ್ ಮಾರಾಟ 308.94 ಮೆಗಾ ಯೂನಿಟ್ ಹೆಚ್ಚಾಗಿ, ಕಂದಾಯ ಬೇಡಿಕೆಯು 265.37 ಕೋಟಿಗೆ ಏರಿಕೆಯಾಗಿದೆ ಎಂದು ವಿವರಿಸಿದರು.

ಹಾಡಿಗಳಿಗೆ ಸೋಲಾರ್ ವಿದ್ಯುತ್ ಪೂರೈಕೆ...

ಸೆಸ್ಕ್ ವತಿಯಿಂದ ಪಿಎಂ ಕುಸುಮ್–ಸಿ ಯೋಜನೆಯಡಿ 500 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲಾಗಿದ್ದು, ಅದಕ್ಕಾಗಿ 110 ವಿತರಣಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ರಾಜ್ಯ ಸರ್ಕಾರದ ನೆರವಿನಿಂದ ಅಗತ್ಯ ಸರಕಾರಿ ಭೂಮಿ ಸಿಕ್ಕಿದ್ದು, ಸುಮಾರು 2 ಸಾವಿರ ಎಕರೆ ಪ್ರದೇಶದಲ್ಲಿ ಯೋಜನೆ ಅನುಷ್ಠಾನವಾಗುತ್ತಿದೆ. ಈಗಾಗಲೇ ಚಾಮರಾಜನಗರದಲ್ಲಿ ಯೋಜನೆ ಅನುಷ್ಠಾನವಾಗುತ್ತಿದ್ದು, ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾದ ಜಿ.ಶೀಲಾ ತಿಳಿಸಿದರು.

ಪ್ರಧಾನ ಮಂತ್ರಿ ಸೌರಗೃಹ ಯೋಜನೆಯಡಿ 752 ಮನೆಗಳಿಗೆ ಸೋಲಾರ್ ಸ್ಥಾವರಗಳನ್ನು ಸ್ಥಾಪಿಸಲಾಗಿದೆ. ಜತೆಗೆ ಪ್ರಧಾನ ಮಂತ್ರಿ ಜನ್‌ಮನ್ ಯೋಜನೆಯಡಿ ಹಾಡಿಗಳ 1,085 ಆದಿವಾಸಿ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಕೊಡಗು ಜಿಲ್ಲೆಯಲ್ಲಿ ಪ್ರತಿ ಬಾರಿ ಮಳೆಗಾಲದಲ್ಲಿ ಸಮಸ್ಯೆ ಉಂಟಾಗುವುದನ್ನು ಮನಗಂಡು ಸಂಪೂರ್ಣ ಬದಲೀಕರಣಕ್ಕೆ ಕಾಮಗಾರಿ ಆರಂಭಿಸಲಾಗಿದೆ ಎಂದರು.

ಚೆಸ್ಕಾಂ ಅಧಿಕಾರಿ, ನೌಕರರು ಮತ್ತು ಅವರ ಕುಟುಂಬಸ್ಥರಿಗೆ ಮೆಡಿಕಲ್ ಹೆಲ್ತ್ ಇನ್ಸೂರೆನ್ಸ್...!

ಚೆಸ್ಕಾಂನಲ್ಲಿ ಕೆಲಸ ಮಾಡುತ್ತಿರುವ 7 ಸಾವಿರ ಅಧಿಕಾರಿಗಳು, ಸಿಬ್ಬಂದಿ ಹಾಗೂ ಅವರ ಕುಟುಂಬಸ್ಥರು ಸುಮಾರು 25 ಸಾವಿರ ಮಂದಿಗೆ ಒಂದು ವರ್ಷದ ಅವಧಿಯ ಗ್ರೂಪ್ ಮೆಡಿಕಲ್ ಹೆಲ್ತ್ ಇನ್ಸೂರೆನ್ಸ್ ಒದಗಿಸಲಾಗುವುದು. ವಿಮಾ ಮೊತ್ತವೂ ಪ್ರತೀ ಕುಟುಂಬಕ್ಕೆ 2 ಲಕ್ಷ ರೂ.ಗಳಾಗಿದ್ದು, ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೆ ನಗದುರಹಿತ ಆರೋಗ್ಯ ಗುರುತಿನ ಚೀಟಿ ಮೂಲಕ ವೈದ್ಯಕೀಯ ಸೇವೆ ಪಡೆಯಬಹುದಾಗಿದೆ. ಗೃಹಜ್ಯೋತಿ ಯೋಜನೆಯಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಹೆಚ್ಚಾಗಿದ್ದು, 18 ಸಾವಿರ ಮೆಗಾ ವ್ಯಾಟ್‌ಗೆ ಬೇಡಿಕೆ ಹೆಚ್ಚಾಗಿದೆ. ಬೇಸಿಗೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ನಿರ್ವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

– ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷ, ಚೆಸ್ಕಾಂ

ವಿದ್ಯುತ್ ಸೋರಿಕೆ ಕಡಿತ...

ವಿದ್ಯುತ್ ಸೋರಿಕೆಯಲ್ಲೂ ಸೆಸ್ಕ್ ಪ್ರಗತಿ ಸಾಧಿಸಿದ್ದು, ಕಳೆದ ಬಾರಿ 10.3ರಷ್ಟಿದ್ದ ವಿದ್ಯುತ್ ಸೋರಿಕೆ ಪ್ರಮಾಣ ಇದೀಗ 9.03ಕ್ಕೆ ಇಳಿಕೆಯಾಗಿದೆ. ಮುಂದಿನ ದಿನಗಳಲ್ಲಿ ಇದನ್ನು 7ಕ್ಕೆ ಇಳಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ಕಂಟ್ರೋಲ್ ರೂಂ ನಂಬರ್‌ಗಳ ಮೂಲಕ ಜನರ ಸಮಸ್ಯೆಗೆ ಶೀಘ್ರ ಸ್ಪಂದಿಸುವ ಕೆಲಸ ನಿರಂತರವಾಗಿ ಮಾಡಲಾಗುತ್ತಿದೆ ಎಂದು ಚೆಸ್ಕಾಂ ತಾಂತ್ರಿಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ತಿಳಿಸಿದರು.

ಹೊಸದಾಗಿ ಕನೆಕ್ಷನ್ ಪಡೆಯುವವರಿಗೆ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಲಾಗುವುದು. ವಿದ್ಯುತ್ ಕಳ್ಳತನ ಕ್ರಿಮಿನಲ್ ಸ್ವರೂಪದ ಶಿಕ್ಷಾರ್ಹ ಅಪರಾಧವಾಗಿದ್ದು, ಗೃಹ, ವಾಣಿಜ್ಯ, ಕೈಗಾರಿಕೆ ಹಾಗೂ ತಾತ್ಕಾಲಿಕ ಸ್ಥಾವರಗಳ 5,716 ಕಡೆಗಳಲ್ಲಿ ಪರಿಶೀಲಿಸಿ, 1,312 ಪ್ರಕರಣ ದಾಖಲಿಸಿ 6,36,72,607 ರೂ. ಹಿಂಬಿಲ್ಲು ಮತ್ತು ದಂಡ ವಸೂಲಿ ಮಾಡಲಾಗಿದೆ. ಮೀಟರ್ ಟೆಸ್ಟಿಂಗ್ ವಿಭಾಗದಲ್ಲಿ 23,014 ಸ್ಥಾವರಗಳನ್ನು ಪರಿಶೀಲಿಸಿ, 2077 ಪ್ರಕರಣ ದಾಖಲಿಸಿ 12,37,56,660 ರೂ. ದಂಡ ವಿಧಿಸಲಾಗಿದೆ. ಸೆಸ್ಕ್‌ನ ವಿದ್ಯುತ್ ಕಂಬಗಳನ್ನು ಬಳಸಿಕೊಂಡು ಖಾಸಗಿ ಟಿವಿ ಕೇಬಲ್ ಮತ್ತು ಇಂಟರ್‌ನೆಟ್ ಕೇಬಲ್ ವೈರ್‌ಗಳನ್ನು ಎಳೆಯಲಾಗಿದೆ. ಶುಲ್ಕ ಪಾವತಿಸಿ ಅನುಮತಿ ಪಡೆದವರಿಂದ ಡಿಸೆಂಬರ್ ಅಂತ್ಯಕ್ಕೆ 78.78 ಲಕ್ಷ ರೂ. ಸಂಗ್ರಹವಾಗಿದ್ದು, ಯಾರಾದರೂ ಅನುಮತಿ ಪಡೆಯದೇ ವಿದ್ಯುತ್ ಕಂಬಗಳನ್ನು ಬಳಸುತ್ತಿದ್ದರೆ ಅಂತಹ ಕಂಪನಿಗಳ ಕೇಬಲ್‌ಗಳನ್ನು ತೆರವುಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಅನಾಹುತಗಳಿಂದ ಪಾರಾಗಲು ದೈವಿಕ ಭಾವನೆ ಹೊಂದಬೇಕು: ಗಣಪತಿ ಶ್ರೀ



ಮಹಾಶಿವರಾತ್ರಿ ಪ್ರಯುಕ್ತ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಜನತೆಗೆ ಆಶೀರ್ವಚನ ನೀಡಿದರು.

ಮೈಸೂರು, ಫೆ. 27– ಈ ವರ್ಷ ಕಠಿಣವಾದ ದಿನಗಳನ್ನು ದೇಶ ಎದುರಿಸಬೇಕಾಗುತ್ತದೆ. ಪ್ರಾಕೃತಿಕ ಅನಾಹುತಗಳು ಸಂಭವಿಸುತ್ತವೆ. ಹಾಗಾಗಿ ದೈವಿಕ ಭಾವನೆ ಹೊಂದಬೇಕು ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಮಹಾಶಿವರಾತ್ರಿ ಪ್ರಯುಕ್ತ ಜನತೆಗೆ ಆಶೀರ್ವಚನ ನೀಡಿದ ಶ್ರೀಗಳು ಈ ವರ್ಷ ಪ್ರಾಕೃತಿಕ ವಿಕೋಪಗಳು, ಯುದ್ಧಗಳು, ಅಪಮೃತ್ಯುಗಳು ಸಂಭವಿಸಲಿವೆ. ಹರಿ, ಶಿವನ ಕೃಪೆ ಇರುವುದರಿಂದ ಇವು ಕಡಿಮೆಯಾದರೂ ಜನತೆ ಕೂಡ ದೈವದ ಮೊರೆ ಹೋಗಬೇಕು ಎಂದು ತಿಳಿ ಹೇಳಿದರು.

ಈ ಬಾರಿಯ ಕುಂಭಮೇಳ ಅತ್ಯಂತ ಶುಭ, ಅದರಲ್ಲೂ ಆಧ್ಯಾತ್ಮಿಕ ಪ್ರಪಂಚಕ್ಕೆ ಶುಭಕರವಾಗಿದೆ. ದೇಶದ ಜನತೆ ಧಾರ್ಮಿಕತೆ ಬಗ್ಗೆ ಅತ್ಯಂತ ಶ್ರದ್ಧೆ ತೋರಿದ್ದಾರೆ. ಇದು ಅದೃಷ್ಟವೇ ಸರಿ ಎಂದು ತಿಳಿಸಿದರು.

ಅತೀ ದೊಡ್ಡ ಸಂಖ್ಯೆಯಲ್ಲಿ ಯುವ ಜನರು ಕುಂಭಮೇಳದಲ್ಲಿ ಪಾಲ್ಗೊಂಡಿದ್ದು ಅವರಲ್ಲಿ ನಮ್ಮ ಧರ್ಮದ ಬಗ್ಗೆ ಜಾಗೃತಿ ಮೂಡುತ್ತಿದೆ. ಇದು ಒಳ್ಳೆಯದು ಎಂದು ಶ್ರೀಗಳು ಸಂತಸಪಟ್ಟರು.

ಇಡೀ ಕುಂಭಮೇಳದ ದಿನಗಳಲ್ಲಿ ನಮ್ಮ ದೇಶ ಅಷ್ಟೇ ಅಲ್ಲ ಇಡೀ ಪ್ರಪಂಚಕ್ಕೆ ಒಳ್ಳೆಯದಾಗಲಿ ಎಂದು ನಮ್ಮ ಭಾರತ ಪ್ರಾರ್ಥಿಸಿದೆ. ನಮ್ಮ ವೇದ ಪದ್ಧತಿಯು ಸಹ ಇದನ್ನೇ ಬೋಧಿಸುತ್ತದೆ ಇದರಿಂದ ಎಲ್ಲರಿಗೂ ಒಳಿತಾಗುತ್ತದೆ ಎಂದರು.

ಮುಂದೆ ಆಗುವ ಅನಾಹುತಗಳು ಕಷ್ಟಗಳು ತಪ್ಪಬೇಕಾದರೆ ಯುವಜನರು ಸೇರಿದಂತೆ ಇಡೀ ದೇಶದ ಜನತೆ ಮತ್ತು ಪ್ರಜಾಪ್ರತಿನಿಧಿಗಳು ದೈವಿಕ ಭಾವನೆ ಹೊಂದಿರಬೇಕು. ಆದಷ್ಟು ದೇವಸ್ಥಾನಗಳನ್ನು ದರ್ಶಿಸಬೇಕು, ಪುರಾತನ ಆಲಯಗಳನ್ನು ದರ್ಶನ ಮಾಡಬೇಕು ದೇವಸ್ಥಾನಗಳ ಜೀರ್ಣೋದ್ಧಾರಗಳು ಆದರೆ ಇನ್ನೂ ಒಳಿತಾಗಲಿದೆ ಎಂದು ಶ್ರೀಗಳು ಅಭಿಪ್ರಾಯಪಟ್ಟರು.

ಪ್ರಜಾಪ್ರತಿನಿಧಿಗಳು ದೈವಿಕ ಭಾವನೆ ಹೊಂದುವ ಜೊತೆಗೆ ಎಲ್ಲಾ ಮತಗಳು ಉಪಾಸನೆಗಳು ಒಂದೇ ಎಂಬುದನ್ನು ಅರಿಯಬೇಕು. ನಮ್ಮ ಆಚಾರ್ಯರು ಕೂಡ ಮಹತ್ವದ ಸಂದೇಶಗಳನ್ನು ನೀಡಿದ್ದಾರೆ ಅವರ ಆಶಯಗಳನ್ನು ಸಂದೇಶಗಳನ್ನು ಪಾಲಿಸಬೇಕು. ನಾವೆಲ್ಲರೂ ಸಾತ್ವಿಕ ಜೀವನ ನಡೆಸಿದರೆ ಖಂಡಿತ ಕಷ್ಟಕೋಟಲೆಗಳಿಂದ ಸ್ವಲ್ಪವಾದರೂ ಪಾರಾಗಬಹುದು ಎಂದರು.

ಮುಂದಿನ ದಿನಗಳಲ್ಲಿ ಅನಾಹುತಗಳು ಇದ್ದೇ ಇರುತ್ತವೆ. ಮೊದಲು ಜನರಲ್ಲಿರುವ ಅತೃಪ್ತಿ ಭಾವನೆ ಹೋಗಬೇಕು. ಸದಾ ಹರಿಹೀ ಓಂ, ಓಂ ನಮಃ ಶಿವಾಯ ಜಪಿಸಬೇಕು. ಇಂದು ಅತ್ಯಂತ ಶುಭದಿನ. ಎಲ್ಲಾ ಗ್ರಹಗಳು ಒಂದೇ ರೇಖೆಯಲ್ಲಿ ಬಂದಿರುತ್ತದೆ ಎಂದು ಶ್ರೀಗಳು ತಿಳಿಸಿದರು.

ಈ ಮಹಾಶಿವರಾತ್ರಿಯಂದು ಇಡೀ ನಾಡಿನ ಜನತೆಗೆ ಶುಭವಾಗಲಿ ಎಲ್ಲರೂ ತಪ್ಪದೇ ಶಿವ ಸ್ಮರಣೆ ಮಾಡಿ ಹರಾ, ಹರಾ ಮಹಾದೇವ ಎಂದು ಹೇಳಿ ಓಂ ನಮಃ ಶಿವಾಯ ಎಂದು ಹೇಳುತ್ತಾ ಒಂದು ಚೊಂಬು ನೀರಿನ ಅಭಿಷೇಕ ಮಾಡಿ ಆ ಶಿವನೇ ಎಲ್ಲರನ್ನು ಆಶೀರ್ವದಿಸುತ್ತಾನೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ತಿಳಿಸಿದರು.

ತೀರ್ಥ ಸ್ನಾನ : ಆಶ್ರಮದ ಸಪ್ತರ್ಷಿ ಸರೋವರದಲ್ಲಿ ಉಚಿತವಾಗಿ ತೀರ್ಥ ಸ್ನಾನ ಮಾಡಲು ಏರ್ಪಡಿಸಲಾಗಿತ್ತು. ಪ್ರಯಾಗರಾಜದಲ್ಲಿ ನಡೆಯುತ್ತಿರುವ ತ್ರಿವೇಣಿ ಸಂಗಮದ ಕುಂಭಮೇಳಕ್ಕೆ ಹೋಗಲಾಗದವರು ಈ ತೀರ್ಥ ಸ್ನಾನದ ಅವಕಾಶವನ್ನು ಉಪಯೋಗಿಸಿಕೊಂಡರು.

ಆಶ್ರಮದ ಸಪ್ತರ್ಷಿ ಸರೋವರದಿಂದ ಸ್ವಾಮೀಜಿಯವರು ಫೆ.18ರಂದು ಪುಣ್ಯ ಸ್ನಾನ ಆಚರಿಸಿದಾಗ ತಂದಿರುವ ತ್ರಿವೇಣಿ ಪವಿತ್ರ ಜಲ, ಭಾರತದ ಪವಿತ್ರ ನದಿಗಳ ಜಲವನ್ನು ಮಿಶ್ರಣ ಮಾಡಲಾಗಿತ್ತು.

ಲೋಕಸಭಾ ಕ್ಷೇತ್ರ ಮರುವಿಂಗಡಣೆಗೆ ಕೇಂದ್ರ ಉತ್ಸುಕತೆ ಬಗ್ಗೆ ಸಿಎಂ ಸಿದ್ದರಾಮಯ್ಯ ಲೇವಡಿ

•ಬಿಜೆಪಿಗೆ ಪ್ರತಿರೋಧವಿರುವ ದಕ್ಷಿಣ ರಾಜ್ಯಗಳ ಮಣಿಸುವ ಅಸ್ತ್ರವಾಗಿ ಬಳಕೆ ಆರೋಪ •ಇದಕ್ಕಾಗಿ ವಿರೋಧ ವ್ಯಕ್ತಪಡಿಸಲು ಒಗ್ಗಟ್ಟಿನ ಮಂತ್ರ •ರಾಜ್ಯದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಲ್ಲಿ 26ಕ್ಕೆ ಇಳಿಯುವ ಅನುಮಾನ



ಬೆಂಗಳೂರು, ಫೆ.27(ಕೆಎಂಶಿ) – ಕ್ಷೇತ್ರ ಮರುವಿಂಗಡಣೆಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಉತ್ಸಾಹ ಹಾಗೂ ಗೃಹ ಸಚಿವ ಅಮಿತ್ ಶಾ ಹೇಳಿಕೆ ಗಮನಿಸಿದರೆ ಬಿಜೆಪಿ ಕೀರ್ತಿ ಪತಾಕೆಗೆ ಪ್ರತಿರೋಧ ಒಡ್ಡುತ್ತಿರುವ ದಕ್ಷಿಣ ಭಾರತ ರಾಜ್ಯಗಳ ಜನತೆಯನ್ನು ಶಿಕ್ಷಿಸುವ ದುರುದ್ದೇಶ ಇರುವಂತೆ ಕಾಣಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕೇಂದ್ರದ ಎನ್‌ಡಿಎ ಸರ್ಕಾರದ ಅನ್ಯಾಯದ ವಿರುದ್ಧ ಸಮಗ್ರ ಹೋರಾಟ ನಡೆಸಲು ದಕ್ಷಿಣ ಭಾರತ ರಾಜ್ಯಗಳ ಮುಖಂಡರ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದಿದ್ದಾರೆ. ಕ್ಷೇತ್ರ ಮರುವಿಂಗಡಣೆ ವಿಷಯದಲ್ಲಿ ದಕ್ಷಿಣ ಭಾರತ ರಾಜ್ಯಗಳಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂಬ ಅಮಿತ್ ಶಾ ಹೇಳಿಕೆ ನಂಬಿಕೆಗೆ ಅರ್ಹವಲ್ಲ, ಇದು ದಕ್ಷಿಣ ರಾಜ್ಯಗಳಲ್ಲಿ ಗೊಂದಲ ಹುಟ್ಟಿಸುವ ದುರುದ್ದೇಶದಿಂದ ಕೂಡಿದೆ.

ಅವರ ಹೇಳಿಕೆ ಗಮನಿಸಿದರೆ, ಒಂದೋ ಅವರಿಗೆ ಮಾಹಿತಿ ಕೊರತೆ ಇದೆ, ಇಲ್ಲವೇ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತ ರಾಜ್ಯಗಳಾದ ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶಕ್ಕೆ ಅನ್ಯಾಯ ಮಾಡುವ ದುರುದ್ದೇಶ ಇದೆ ಎಂಬುದಾಗಿ ಅರ್ಥಮಾಡಿಕೊಳ್ಳಬಹುದು ಎಂದರು. ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಮುಖ್ಯಮಂತ್ರಿ, ದಕ್ಷಿಣ ಭಾರತ ರಾಜ್ಯಗಳಿಗೆ ಅನ್ಯಾಯ ಮಾಡಬಾರದೆಂಬ ಸದುದ್ದೇಶವಿದ್ದರೆ, ಕ್ಷೇತ್ರ ಮರು ವಿಂಗಡಣೆ ಜನಸಂಖ್ಯೆ ಅನುಪಾತದ ಆಧಾರದಲ್ಲಿ ಮಾಡಬೇಕೇ ಅಥವಾ ಲೋಕಸಭಾ ಸದಸ್ಯರ ಈಗಿನ ಸಂಖ್ಯೆ ಅನುಪಾತದಲ್ಲಿ ಮಾಡಬೇಕೇ ಎಂಬ ಬಗ್ಗೆ ಶಾ ಉತ್ತರಿಸಬೇಕು ಎಂದಿದ್ದಾರೆ.

ಇತ್ತೀಚಿನ ಜನಸಂಖ್ಯೆ ಅನುಪಾತದಲ್ಲಿ ಕ್ಷೇತ್ರ ಮರುವಿಂಗಡಣೆ ನಡೆದರೆ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ ಕಟ್ಟಿಟ್ಟ ಬುತ್ತಿ ಎನ್ನುವುದು ನಮಗೆ ಸ್ಪಷ್ಟವಾಗಿ ಅರ್ಥವಾಗಿದೆ. ಈ ಅನ್ಯಾಯ ತಪ್ಪಿಸಲಿಕ್ಕಾಗಿಯೇ ಸಂವಿಧಾನಕ್ಕೆ ತಿದ್ದುಪಡಿ ತಂದು ಎರಡು ಕ್ಷೇತ್ರಗಳ ಮರುವಿಂಗಡಣೆಗೆ 1971ರ ಜನಗಣತಿಯನ್ನೇ ಆಧಾರವಾಗಿಟ್ಟುಕೊಳ್ಳಲಾಗಿತ್ತು. ಕಳೆದ 50 ವರ್ಷಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳು ಪರಿಣಾಮಕಾರಿ ಕ್ರಮಗಳ ಮೂಲಕ ಜನಸಂಖ್ಯೆ ನಿಯಂತ್ರಿಸಿರುವುದು ಮಾತ್ರವಲ್ಲ, ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿವೆ. ಉತ್ತರಪ್ರದೇಶ, ಬಿಹಾರ, ಮಧ್ಯ ಪ್ರದೇಶದಂತಹ ಉತ್ತರ ಭಾರತದ ರಾಜ್ಯಗಳು ಜನಸಂಖ್ಯೆ ನಿಯಂತ್ರಣದಲ್ಲಿ ಸಂಪೂರ್ಣ ವಿಫಲವಾಗಿವೆ. ಮಾತ್ರವಲ್ಲ, ಅಭಿವೃದ್ಧಿ ಹಾದಿಯಲ್ಲಿ ಇನ್ನೂ ಕುಂಟುತ್ತಾ ಸಾಗಿವೆ.

ಇತ್ತೀಚಿನ ಜನಗಣತಿಯ ಜನಸಂಖ್ಯೆ ಅನುಪಾತದ ಮೇಲೆ ಕ್ಷೇತ್ರ ಮರು ವಿಂಗಡಣೆ ಮಾಡಿದರೆ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಲಿದೆ. ಇಲ್ಲವೇ, ಉತ್ತರ ಭಾರತದ ರಾಜ್ಯಗಳ ಕ್ಷೇತ್ರಗಳ ಸಂಖ್ಯೆಯಲ್ಲಿ ಏರಿಕೆ ಆಗಲಾರದು. ಈ ಎರಡೂ ಬೆಳವಣಿಗೆಗಳಿಂದ ದಕ್ಷಿಣದ ರಾಜ್ಯಗಳೇ ನಷ್ಟ ಅನುಭವಿಸಲಿದೆ ಎಂಬ ಸತ್ಯ ಶಾ ಅವರಿಗೆ ತಿಳಿದಿಲ್ಲವೇ. ಕ್ಷೇತ್ರ ಮರುವಿಂಗಡಣೆ ಪರಿಣಾಮಗಳ ಕುರಿತು ನಡೆದಿರುವ ಹಲವು ಅಧ್ಯಯನಗಳ ಪ್ರಕಾರ ಇತ್ತೀಚಿನ ಜನಗಣತಿ (2021 ಇಲ್ಲವೇ 2031) ಮಾತ್ರ ಆಧರಿಸಿ ಕ್ಷೇತ್ರ ಮರುವಿಂಗಡಣೆ ನಡೆದರೆ ಕರ್ನಾಟಕದಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 26ಕ್ಕೆ ಇಳಿಯುವ ಸಾಧ್ಯತೆ ಇದೆ.

ಹಾಗೆಯೇ ಆಂಧ್ರಪ್ರದೇಶದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 42ರಿಂದ 34, ಕೇರಳದ ಸಂಖ್ಯೆ 20ರಿಂದ 12ಕ್ಕೆ, ತಮಿಳುನಾಡಿನ ಸಂಖ್ಯೆ 39ರಿಂದ 31ಕ್ಕೆ ಇಳಿಯಲಿದೆ. ಇದೇ ವೇಳೆ ಉತ್ತರಪ್ರದೇಶದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 80ರಿಂದ 91, ಬಿಹಾರದ ಸಂಖ್ಯೆ 40ರಿಂದ 50, ಮಧ್ಯಪ್ರದೇಶದ ಸಂಖ್ಯೆ 29ರಿಂದ 33ಕ್ಕೆ ಏರಿಕೆಯಾಗಲಿದ್ದು, ಇದನ್ನು ಅನ್ಯಾಯ ಎನ್ನದೆ ಬೇರೇನು ಹೇಳಲು ಸಾಧ್ಯ, ಖಂಡಿತ ಇದನ್ನು ಸಹಿಸಲು ಸಾಧ್ಯವಿಲ್ಲ.

ಜೈಪುರದಲ್ಲಿ ಮೋಟಾರ್ ಸೈಕಲ್ ರೇಸಿಂಗ್ ಸ್ಪರ್ಧೆ; ಮೈಸೂರಿನ ಬಾಲಕ ಮೊಹಮ್ಮದ್ ಅರ್ಮಾನ್ ಸಾಧನೆ



ಮೊಹಮ್ಮದ್ ಅರ್ಮಾನ್.



ಮೈಸೂರು, ಫೆ27(ಪಿಎಂ)– ರಾಜಸ್ತಾನದ ಜೈಪುರದಲ್ಲಿ ಬುಧವಾರ ನಡೆದ 'ಮೋಟೋ ಕ್ರಾಸ್' ಮೋಟಾರ್ ಸೈಕಲ್ ರೇಸಿಂಗ್ ಸ್ಪರ್ಧೆಯಲ್ಲಿ ಮೈಸೂರಿನ 11 ವರ್ಷದ ಬಾಲಕ ಮೊಹಮ್ಮದ್ ಅರ್ಮಾನ್ ಪ್ರಥಮ ಸ್ಥಾನ ಗಳಿಸಿದ್ದಾನೆ.

ಮೈಸೂರಿನ ಕಾರ್ ಮೆಕ್ಯಾನಿಕ್ ಇಮ್ರಾನ್ ಅವರ ಪುತ್ರ ಮೊಹಮ್ಮದ್ ಅರ್ಮಾನ್, ಜೈಪುರದ ಪೂರ್ಣಿಮಾ ವಿಶ್ವವಿದ್ಯಾಲಯದ ಮೈದಾನದಲ್ಲಿ ಆಯೋಜಿಸಿದ್ದ 'ಮೋಟೋಫಿ ಫೆಸ್ಟ್' ಸ್ಪರ್ಧೆಯಲ್ಲಿ ಭಾಗವಹಿಸಿ ಮೋಟೋ ಕ್ರಾಸ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾನೆ.

ಮೈಸೂರಿನ ಬನ್ನಿಮಂಟಪದ ಸೇಂಟ್ ಜೋಸೆಫ್ ಸೆಂಟ್ರಲ್ ಶಾಲೆಯಲ್ಲಿ 7ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಈ ಬಾಲಕ, ಜೈಪುರದ ಮೋಟೋ ಕ್ರಾಸ್ ಸ್ಪರ್ಧೆಯಲ್ಲಿ 'ಗ್ಯಾಸ್ ಗ್ಯಾಸ್ 65 ಎಂಸಿ' ಬೈಕ್‌ನಲ್ಲಿ 'ಚೆಸ್ಟ್ ಸಂಖ್ಯೆ 9'ರಡಿ ಸ್ಪರ್ಧೆ ಮಾಡಿ ಈ ಸಾಧನೆ ಮೆರೆದಿದ್ದಾನೆ.

ಸ್ಪರ್ಧೆಯಲ್ಲಿ 15 ವರ್ಷದೊಳಗಿನ ಮಕ್ಕಳ ವಿಭಾಗದಲ್ಲಿ ಮೊಹಮ್ಮದ್ ಅರ್ಮಾನ್ ಪ್ರಥಮ ಸ್ಥಾನ ಗಳಿಸಿದ್ದಲ್ಲದೆ, ಫಾರಿನ್ ಓಪನ್ ವಿಭಾಗದಲ್ಲಿ ಹಿರಿಯ ಸವಾರರೊಂದಿಗೆ ಸ್ಪರ್ಧಿಸಿ 4ನೇ ಸ್ಥಾನ ಗಳಿಸಿದನು. ಜೊತೆಗೆ ಬಿಗಿನರ್ಸ್ ವಿಭಾಗದಲ್ಲೂ 4ನೇ ಸ್ಥಾನ ಪಡೆದನು. ಈತನ ಈ ಸಾಧನೆಗೆ 8 ಸಾವಿರ ರೂ. ಚೆಕ್‌ನೊಂದಿಗೆ ಮೊಮೆಂಟೊ ನೀಡಿ ಅಭಿನಂದಿಸಲಾಯಿತು.

ಕ್ರೀಡೆಯ ಬಗೆಗಿನ ಈತನ ಉತ್ಸಾಹವನ್ನು ಗಮನಿಸಿದ ಸದರಿ ವಿಶ್ವವಿದ್ಯಾಲಯದ ಮಂಡಳಿ ಸದಸ್ಯರು, ಮೊಹಮ್ಮದ್ ಅರ್ಮಾನ್‌ಗೆ ವಿದ್ಯಾರ್ಥಿವೇತನ ನೀಡಿದರು. ಹಾಗೂ ಇಂದಿನಿಂದ ಈತ ಈ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪೂರ್ಣಗೊಳಿಸುವವರೆಗೆ ಕ್ರೀಡೆಗೆ ಅಗತ್ಯ ಸಹಕಾರ ಮತ್ತು ಬೆಂಬಲ ನೀಡುವುದಾಗಿ ಘೋಷಿಸಿದರು.

ಕ್ಷೇತ್ರ ಮರುವಿಂಗಡಣೆ: ದಕ್ಷಿಣ ಭಾರತಕ್ಕೆ ಅನ್ಯಾಯ ಆಗಲ್ಲ



ಕೊಯಮತ್ತೂರು, ಫೆ.27– ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆಯಾದರೆ ತಮಿಳುನಾಡು 8 ಕ್ಷೇತ್ರಗಳನ್ನು ಕಳೆದುಕೊಳ್ಳಲಿದೆ ಎಂದು ಆರೋಪಿಸಿದ್ದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಆರೋಪ ಪೂರ್ಣ ಸುಳ್ಳು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿರುಗೇಟು ನೀಡಿದ್ದಾರೆ. ಜೊತೆಗೆ ಕ್ಷೇತ್ರ ಮರುವಿಂಗಡಣೆಯಾದರೆ ದಕ್ಷಿಣದ ರಾಜ್ಯಗಳಿಗೆ ನ್ಯಾಯಯುತ ಪಾಲು ಸಿಗುತ್ತದೆ. ಈ ರಾಜ್ಯಗಳು ಒಂದೇ ಒಂದು ಕ್ಷೇತ್ರ ಕೂಡ ಕಳೆದುಕೊಳ್ಳುವುದಿಲ್ಲ ಎಂದು ಭರವಸೆ ನೀಡಿದ್ದಾರೆ. ಬುಧವಾರ ತಮಿಳುನಾಡಿನ ವಿವಿಧೆಡೆ ಬಿಜೆಪಿ ಕಚೇರಿ ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಸೀಮಿತ ಗಡಿ ವಿಂಗಡಣೆಯಿಂದ ದಕ್ಷಿಣಕ್ಕೆ ಸಮಸ್ಯೆಯಾಗದ ಹಾಗೆ ಚರ್ಚಿಸಲು ಸಭೆ ನಡೆಸಲಾಗುತ್ತದೆ. ಸಿಎಂ ಸ್ಟಾಲಿನ್ ಮತ್ತು ಅವರ ಪುತ್ರ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಯಿಂದ ತಮಿಳುನಾಡಿನ ಜನ ಆತಂಕದಲ್ಲಿದ್ದಾರೆ. ಅವರು ಸಾರ್ವಜನಿಕರ ಹಾದಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಲೋಕಸಭೆಯಲ್ಲಿ ಮೋದಿ ಸರ್ಕಾರ ಸ್ಪಷ್ಟಪಡಿಸಿರುವ ಪ್ರಕಾರ ಕ್ಷೇತ್ರ ಪುನರ್ವಿಂಗಡಣೆ ನಂತರ ಅನುಪಾತದ ಆಧಾರದಲ್ಲಿ ದಕ್ಷಿಣದ ಯಾವುದೇ ಕ್ಷೇತ್ರಗಳಲ್ಲಿಯೂ ಒಂದೂ ಲೋಕಸಭಾ ಕ್ಷೇತ್ರ ನಷ್ಟವಾಗುವುದಿಲ್ಲ.

ದೇಶ - ವಿದೇಶ

ವಿದೇಶಿ ನೆರವು ಶೇ.90ರಷ್ಟು ಕಡಿತ: ಟ್ರಂಪ್ ಘೋಷಣೆ



ವಾಷಿಂಗ್ಟನ್: ಅಮೆರಿಕದ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯ ವಿದೇಶಿ ನೆರವು(USAID) ಒಪ್ಪಂದಗಳಲ್ಲಿ ಶೇ.90ಕ್ಕಿಂತ ಹೆಚ್ಚು ಮತ್ತು ಪ್ರಪಂಚದಾದ್ಯಂತದ ಅಮೆರಿಕದ ಒಟ್ಟಾರೆ 60 ಶತಕೋಟಿ ಡಾಲರ್ ಸಹಾಯವನ್ನು ತೆಗೆದುಹಾಕುತ್ತಿದೆ ಎಂದು ಡೊನಾಲ್ಡ್ ಟ್ರಂಪ್ ಸರ್ಕಾರ ಹೇಳಿದೆ. ಇದು ಅಮೆರಿಕದ ಬಹುಪಾಲು ಅಭಿವೃದ್ಧಿ ಮತ್ತು ವಿದೇಶಗಳಲ್ಲಿ ಮಾನವೀಯ ಸಹಾಯವನ್ನು ತೆಗೆದುಹಾಕುವ ಯೋಜನೆಗಳ ಮೇಲೆ ಪರಿಣಾಮ ಬೀರಲಿದೆ. ಜ.20ರಂದು ಟ್ರಂಪ್ ಅವರು ಅಧಿಕಾರ ವಹಿಸಿಕೊಂಡ ದಿನ 90 ದಿನಗಳ ಕಾರ್ಯಕ್ರಮವಾರು ಪರಿಶೀಲನೆಗೆ ಆದೇಶಿಸಿದರು. ಯಾವ ವಿದೇಶಿ ನೆರವು ಕಾರ್ಯಕ್ರಮಗಳು ಮುಂದುವರಿಯಲು ಅರ್ಹವಾಗಿವೆ ಎಂಬುದರ ಕುರಿತು ಮತ್ತು ಎಲ್ಲಾ ವಿದೇಶಿ ನೆರವು ನಿಧಿಗಳನ್ನು ಬಹುತೇಕ ರಾತ್ರೋರಾತ್ರಿ ಕಡಿತಗೊಳಿಸಲಾಯಿತು. ನಿಧಿ ಸ್ಥಗಿತವು ವಿದೇಶಗಳಲ್ಲಿ ಸಾವಿರಾರು ಯುಎಸ್–ಅನುದಾನಿತ ಕಾರ್ಯಕ್ರಮಗಳನ್ನು ನಿಲ್ಲಿಸಿದೆ. ಟ್ರಂಪ್ ಆಡಳಿತ ಮತ್ತು ಮಸ್ಕ್ ಅವರ ಸರ್ಕಾರಿ ದಕ್ಷತೆಯ ಇಲಾಖೆಯ ತಂಡಗಳು ಹೆಚ್ಚಿನ ಯುಎಸ್‌ಎಐಡಿ ಸಿಬ್ಬಂದಿಯನ್ನು ಬಲವಂತದ ರಜೆ ಮತ್ತು ವಜಾಗೊಳಿಸುವ ಮೂಲಕ ಕೆಲಸದಿಂದ ತೆಗೆದುಹಾಕಿವೆ.

ಹಿಂದಿ ಪ್ರಾಚೀನ ಭಾಷೆಗಳ ಕೊಂದಿದೆ




ಚೆನ್ನೈ: ತಮಿಳುನಾಡಿನಲ್ಲಿ ತ್ರಿಭಾಷಾ ನೀತಿಯನ್ನು ತೀವ್ರವಾಗಿ ವಿರೋಧಿಸಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಹಿಂದಿ ಐಡೆಂಟಿಟಿಯು ಪ್ರಾಚೀನ ಮಾತೃಭಾಷೆಗಳನ್ನು ಕೊಂದಿದೆ ಎಂದು ಹೇಳಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಹಲವು ಭಾರತೀಯ ಭಾಷೆಗಳನ್ನು ಹಿಂದಿ ನುಂಗಿ ಹಾಕಿದೆ. ಆ ಭಾಷೆಗಳು ಈಗ ಉಳಿವಿಗಾಗಿ ಹೆಣಗಾಡುತ್ತಿವೆ ಎಂದು ಎಕ್ಸ್‌ನಲ್ಲಿ ಹೇಳಿದ್ದಾರೆ. ಬೇರೆ ರಾಜ್ಯಗಳ ನನ್ನ ಪ್ರೀತಿಯ ಸಹೋದರಿಯರು ಮತ್ತು ಸಹೋದರರೇ, ಹಿಂದಿ ಎಷ್ಟು ಭಾರತೀಯ ಭಾಷೆಗಳನ್ನು ನುಂಗಿದೆ ಎಂದು ಎಂದಾದರೂ ಯೋಚಿಸಿದ್ದೀರಾ? ಭೋಜ್‌ಪುರಿ, ಮೈಥಿಲಿ, ಅವಧಿ, ಬ್ರಜ್, ಬುಂದೇಲಿ, ಗರ್ವಾಲಿ, ಕುಮಾವೋನಿ, ಮಾಗಾಹಿ, ಮಾರ್ವಾರಿ, ಮಾಲ್ವಿ ಛತ್ತೀಸ್‌ಗಢಿ, ಸಂತಾಲಿ, ಅಂಗಿಕಾ, ಹೋ, ಖರಿಯಾ, ಖೋರ್ತಾ, ಕುರ್ಮಾಲಿ, ಖೋರ್ತಾರು, ಕುರ್ಮಾಲಿ, ಖೋರ್ತಾರು, ಕುವರ್ಮಾಲಿ, ಖೋರ್ತಾರು ಸೇರಿದಂತೆ ಹಿಂದಿ ಏಕಸ್ವಾಮ್ಯವು ಪ್ರಾಚೀನ ಮಾತೃಭಾಷೆಗಳನ್ನು ಕೊಲ್ಲುತ್ತಿದೆ. ಬಿಹಾರ ಮತ್ತು ಉತ್ತರಪ್ರದೇಶ ಹಿಂದಿ ಭಾಷಿಕ ರಾಜ್ಯಗಳಾಗಿರಲಿಲ್ಲ. ಅವರ ನಿಜವಾದ ಮಾತೃಭಾಷೆಗಳು ಈಗ ಗತಕಾಲದ ಅವಶೇಷಗಳಾಗಿವೆ. ಹಿಂದಿ ಹೇರಿಕೆ ಎಲ್ಲಿ ಅಂತ್ಯವಾಗುತ್ತದೆ ಎಂಬುದನ್ನು ತಿಳಿದೇ ವಿರೋಧಿಸುತ್ತಿದ್ದೇವೆ ಎಂದಿದ್ದಾರೆ.

ಒಂದೇ ರನ್ ವೇನಲ್ಲಿ ಎರಡೆರಡು ವಿಮಾನ...!



ಚಿಕಾಗೋ: ಅಮೆರಿಕದಲ್ಲಿ ಸಂಭವಿಸಬಹುದಾಗಿದ್ದ ಮತ್ತೊಂದು ಮಹಾ ವಿಮಾನ ದುರಂತ ಕೂದಲೆಳೆ ಅಂತರದಲ್ಲಿ ತಪ್ಪಿದ್ದು, ಪ್ರಯಾಣಿಕ ವಿಮಾನದ ಪೈಲಟ್ ಸಮಯಪ್ರಜ್ಞೆಯಿಂದ ಎಲ್ಲಾ ಪಾರಾಗಿದ್ದಾರೆ. ಚಿಕಾಗೋದ ಮಿಡ್‌ವೇ ವಿಮಾನ ನಿಲ್ದಾಣದಲ್ಲಿ ಇಳಿಯಲು ಪ್ರಯತ್ನಿಸುತ್ತಿದ್ದ ಸೌತ್‌ವೆಸ್ಟ್ ಏರ್‌ಲೈನ್ಸ್ ವಿಮಾನದ ಎದುರು ಮತ್ತೊಂದು ವಿಮಾನ ಏಕಾಏಕಿ ಪ್ರತ್ಯಕ್ಷವಾಗಿ ಆತಂಕ ಸೃಷ್ಟಿಸಿತ್ತು. ಕೂಡಲೇ ಸಂಭಾವ್ಯ ಅಪಾಯ ಮನಗಂಡ ಪೈಲಟ್ ವಿಮಾನವನ್ನು ಮತ್ತೆ ಟೇಕ್ ಆಫ್ ಮಾಡಿದ್ದು, ಇದರಿಂದ ಸಂಭವಿಸಬಹುದಾಗಿದ್ದ ದೊಡ್ಡ ಅಪಘಾತ ತಪ್ಪಿದಂತಾಗಿದೆ. ಈ ಕುರಿತ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಿದೆ. ವಿಡಿಯೋದಲ್ಲಿರುವಂತೆ ಸೌತ್ ವೆಸ್ಟ್ ವಿಮಾನವು ಇಳಿಯಲು ಪ್ರಯತ್ನಿಸುತ್ತಿರುವಾಗ ಅದೇ ರನ್ ವೇ ಮತ್ತೊಂದು ಭಾಗದಲ್ಲಿ ಮತ್ತೊಂದು ಪುಟ್ಟ ಚಾರ್ಟೆಡ್ ವಿಮಾನ ಅಡ್ಡ ಬಂದಿದೆ. ಕೂಡಲೇ ಪ್ರಯಾಣಿಕ ವಿಮಾನದ ಪೈಲಟ್ ವಿಮಾನವನ್ನು ನೋಡಿ ವಿಮಾನವನ್ನು ಸಂಪೂರ್ಣವಾಗಿ ಕೆಳಗಿಳಿಸದೇ ಮತ್ತೆ ಆಕಾಶಕ್ಕೆ ಹಾರಿಸಿದ್ದಾನೆ.

ಮಹಾ ಶಿವರಾತ್ರಿ ಆಚರಿಸಿದ ಬಾಂಗ್ಲಾದೇಶದ ಕ್ರಿಕೆಟಿಗ!



ನವದೆಹಲಿ: ಮಹಾ ಶಿವರಾತ್ರಿಯ ಶುಭ ಸಂದರ್ಭದಲ್ಲಿ ನೆರೆಯ ದೇಶದ ಕ್ರಿಕೆಟಿಗರು ದೇವಾಲಯದ ಭೇಟಿ, ಆಚರಣೆಗಳ ಮೂಲಕ ತಮ್ಮ ಭಕ್ತಿಯನ್ನು ಪ್ರದರ್ಶಿಸಿದ್ದಾರೆ. ಬಾಂಗ್ಲಾದೇಶದ ಕ್ರಿಕೆಟಿಗ ಲಿಟ್ಟನ್ ದಾಸ್, ಮಹಾ ಶಿವರಾತ್ರಿಯನ್ನು ಭಕ್ತಿಭಾವ, ಶ್ರದ್ಧಾಪೂರ್ವಕವಾಗಿ ಆಚರಿಸಿದ್ದಾರೆ. ಶಿವಲಿಂಗಗಳಿಗೆ ವಿಶೇಷ ಅಭಿಷೇಕ, ಪೂಜೆ ಪುನಸ್ಕಾರ ಮಾಡಿದ್ದಾರೆ. ಇದರ ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದು, ಮೆಚ್ಚುಗೆಯ ಮಹಾಪೂರವೇ ಹರಿದುಬರುತ್ತಿದೆ. ಹಿಂದೂ ಕುಟುಂಬದಿಂದ ಬಂದಿರುವ ಲಿಟ್ಟನ್ ದಾಸ್, ಚಾಂಪಿಯನ್ ಟ್ರೋಫಿ ಪಂದ್ಯಗಳಲ್ಲಿ ಬಾಂಗ್ಲಾದೇಶದ ತಂಡದಲ್ಲಿ ಸ್ಥಾನ ಪಡೆದಿಲ್ಲ. ಭಾರತದಲ್ಲಿ ಹಲವಾರು ಕ್ರಿಕೆಟ್ ತಾರೆಯರು ದೇವಾಲಯಗಳಿಗೆ ಭೇಟಿ ನೀಡುವ ಮೂಲಕ ಶಿವರಾತ್ರಿ ಆಚರಿಸಿದ್ದಾರೆ. IPL 2025 ಟೂರ್ನಿಗಾಗಿ ಮುಂಬೈ ಇಂಡಿಯನ್ಸ್ ಪರ ಆಟಗಾರರಾದ ತಿಲಕ್ ವರ್ಮಾ, ದೀಪಕ್ ಚಹಾರ್ ಮತ್ತು ಕರಣ್ ಶರ್ಮಾ ಮುಂಬೈನ ಐತಿಹಾಸಿಕ ಬಾಬುಲ್ ನಾಥ್ ದೇವಾಲಯಕ್ಕೆ ಭೇಟಿ ನೀಡಿದ್ದು, ಶಿವನಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ತಿಲಕ್ ವರ್ಮಾ ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಈ ಫೋಟೋ ಹಂಚಿಕೊಂಡಿದ್ದಾರೆ.

ನಮ್ಮ ದೇಶದ ಅಲ್ಪಸಂಖ್ಯಾತರ ದಾಳಿ ಬಗ್ಗೆ ಭಾರತ ಚಿಂತಿಸುವ ಅಗತ್ಯವಿಲ್ಲ



ಢಾಕಾ: ಪರಸ್ಪರ ಗೌರವದ ಆಧಾರದ ಮೇಲೆ ಭಾರತದೊಂದಿಗೆ ಗಟ್ಟಿಯಾದ ಸಂಬಂಧವನ್ನು ಉಳಿಸಿಕೊಳ್ಳಲು ಬಾಂಗ್ಲಾದೇಶ ಬದ್ಧವಾಗಿದೆ ಎಂದು ಬಾಂಗ್ಲಾದ ವಿದೇಶಾಂಗ ವ್ಯವಹಾರಗಳ ಸಲಹೆಗಾರ ಎಂ.ಡಿ.ತೌಹಿದ್ ಹುಸೇನ್ ಹೇಳಿದ್ದಾರೆ. ಈ ವಿಷಯದ ಕುರಿತು ಭಾರತೀಯ ಸಚಿವ ಎಸ್.ಜೈಶಂಕರ್ ಇತ್ತೀಚಿನ ಹೇಳಿಕೆಗಳಿಗೆ ಪ್ರತಿಕ್ರಿಯಿಸಿದ ಅವರು, ಬಾಂಗ್ಲಾದೇಶದ ಅಲ್ಪಸಂಖ್ಯಾತರ ಮೇಲಿನ ಹಿಂಸಾಚಾರದ ಬಗ್ಗೆ ಭಾರತ ತಲೆಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಇದು ನಮ್ಮ ಆಂತರಿಕ ಸಮಸ್ಯೆ ಎಂದು ಹೇಳಿದ್ದಾರೆ. ಬಾಂಗ್ಲಾದೇಶ ತನ್ನ ಆಂತರಿಕ ಸಮಸ್ಯೆಗಳಿಗೆ ವಿನಾಕಾರಣ ಭಾರತವನ್ನು ದೂಷಿಸುತ್ತಿದೆ ಎಂದು ಭಾರತದ ವಿದೇಶಾಂಗ ಸಚಿವ ಜೈಶಂಕರ್ ಆರೋಪ ಮಾಡಿದ್ದರು. ಬಾಂಗ್ಲಾದೇಶದಲ್ಲಿನ ಅಲ್ಪಸಂಖ್ಯಾತರ ಮೇಲಿನ ದಾಳಿಯ ಬಗ್ಗೆ ಸಚಿವ ಜೈಶಂಕರ್ ಕಳವಳ ವ್ಯಕ್ತಪಡಿಸಿದ ಬೆನ್ನಲ್ಲೇ ಬಾಂಗ್ಲಾದೇಶ ಈ ಹೇಳಿಕೆ ನೀಡಿದೆ. ಬಾಂಗ್ಲಾದೇಶ ತನ್ನ ನಿಲುವನ್ನು ನಿರ್ಧರಿಸುವ ಸಾಮರ್ಥ್ಯ ಹೊಂದಿದೆ. ಆದರೆ ಭಾರತವು ಬಾಂಗ್ಲಾದೇಶದೊಂದಿಗೆ ಯಾವ ರೀತಿಯ ಸಂಬಂಧವನ್ನು ಬಯಸುತ್ತದೆ ಎಂಬುದನ್ನು ಸಹ ನಿರ್ಧರಿಸಬೇಕಾಗಿದೆ ಎಂದಿರುವ ತೌಹಿದ್ ಹುಸೇನ್ ಭಾರತದೊಂದಿಗಿನ ಸಂಬಂಧದ ಬಗ್ಗೆ ಬಾಂಗ್ಲಾದೇಶದ ಸ್ಪಷ್ಟ ನಿಲುವನ್ನು ಒತ್ತಿ ಹೇಳಿದರು.

ಗಾಂಜಾ ಮಾರಾಟ, ಸೇವನೆ: ಐವರ ಬಂಧನ







ದರ್ಶನ್, ನಿಖಿಲ್ ಕುಮಾರ್, ಪ್ರಮೋದ್ ಕುಮಾರ್, ರವಿಕುಮಾರ್, ಶರತ್ ನಾಯಕ್

ಕುಶಾಲನಗರ: ಗಾಂಜಾ ಮಾರಾಟ ಮತ್ತು ಸೇವಿಸುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಐವರು ಆರೋಪಿಗಳನ್ನು ಕುಶಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೈಚನಹಳ್ಳಿ ಜಾತ್ರಾ ಮೈದಾನ ಸಮೀಪ ಗಾಂಜಾ ಮಾರುತ್ತಿದ್ದ ಅಲ್ಲಿನ ನಿವಾಸಿ ಪ್ರಮೋದ್ ಕುಮಾರ್ (34), ರಾಧಾಕೃಷ್ಣ ಬಡಾವಣೆಯ ದರ್ಶನ್(21) ಹಾಗೂ ಪಟ್ಟಣದ ರೈತ ಸಹಕಾರ ಭವನದ ಬಳಿ ಗಾಂಜಾ ಸೇವಿಸುತ್ತಿದ್ದ ಬೈಚನಹಳ್ಳಿ ನಿವಾಸಿ ರವಿಕುಮಾರ್(22), ನಿಖಿಲ್‌ಕುಮಾರ್(24) ಮತ್ತು ಯೋಗಾನಂದ ಬಡಾವಣೆ ನಿವಾಸಿ ಶರತ್ ನಾಯಕ್(25)ನನ್ನು ಬಂಧಿಸಲಾಗಿದೆ.

ಬಂಧಿತರಿಂದ 25 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿದೆ ಆರೋಪಿಗಳನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ವೃತ್ತ ನಿರೀಕ್ಷಕ ಬಿ.ಜಿ.ಪ್ರಕಾಶ್, ಕುಶಾಲನಗರ ಠಾಣಾಧಿಕಾರಿ ಗೀತಾ ಮತ್ತು ಸಿಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸೂಚನೆ: ಮಾದಕ ವ್ಯಸನ ತಡೆಗಟ್ಟುವ ಸಲುವಾಗಿ ಮಾದಕ ದ್ರವ್ಯ ಮುಕ್ತ ಕೊಡಗು ಜಿಲ್ಲೆಯನ್ನಾಗಿಸಲು ಪೊಲೀಸರು ಶ್ರಮಿಸುತ್ತಿದ್ದು, ಮಾದಕ ವಸ್ತು ಬಳಕೆ ಹಾಗೂ ಸರಬರಾಜು, ಮಾರಾಟ ಮಾಡುವ ವ್ಯಕ್ತಿಗಳು ಕಂಡುಬಂದಲ್ಲಿ ಸಾರ್ವಜನಿಕರು ಸ್ಥಳೀಯ ಪೊಲೀಸ್ ಠಾಣೆ ಹಾಗೂ ಕೆಎಸ್‌ಪಿ ತಂತ್ರಾಂಶದ ಮೂಲಕ ಮಾಹಿತಿ ನೀಡಬಹುದು. ಅಕ್ರಮ ಚಟುವಟಿಕೆಗಳ ಮಾಹಿತಿ ನೀಡುವವರ ಹೆಸರು ಮತ್ತು ವಿವರವನ್ನು ಗುಪ್ತವಾಗಿಡಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಜರಾಮನ್ ತಿಳಿಸಿದ್ದಾರೆ.

ನ್ಯಾಯ ದೊರಕಿಸಲು ವಕೀಲರ ಪಾತ್ರ ಬಹುಮುಖ್ಯ

ಉಪನ್ಯಾಸ ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಾಧೀಶ ಎಂ.ಜಿ.ಶುಕೂರೆ ಕಮಾಲ್ ಅಭಿಮತ



ಬಿಟ್ಟಂಗಾಲ ಕೊಡಗು ಹೆಗ್ಗಡೆ ಸಮಾಜದಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ನ್ಯಾಯಾಧೀಶರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಫೆ27–ನ್ಯಾಯಾಲಯದ ಮೂಲಕ ನಿರಪರಾಧಿಗಳಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ನ್ಯಾಯಾಧೀಶರು ಮತ್ತು ನ್ಯಾಯವಾದಿಗಳ ಪಾತ್ರ ಬಹುಮುಖ್ಯ ಎಂದು ಹೈಕೋರ್ಟ್ ನ್ಯಾಯಾಧೀಶ ಎಂ.ಜಿ. ಶುಕೂರೆ ಕಮಾಲ್ ಹೇಳಿದರು.

ಸಮೀಪದ ಬಿಟ್ಟಂಗಾಲದಲ್ಲಿರುವ ಕೊಡಗು ಹೆಗ್ಗಡೆ ಸಮಾಜದಲ್ಲಿ ವಿರಾಜಪೇಟೆ ವಕೀಲರ ಸಂಘದ ವತಿಯಿಂದ ನ್ಯಾಯವಾದಿ ದಿ.ಪಟ್ಟಡ ಸಿ.ಅರುಣ ಅವರ ಸ್ಮರಣಾರ್ಥ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನ್ಯಾಯಾಧೀಶರು ಮತ್ತು ನ್ಯಾಯವಾದಿಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಹಿರಿಯ ವಕೀಲರು ಕಿರಿಯರಿಗೆ ಮಾರ್ಗದರ್ಶನ ನೀಡಬೇಕು. ಕಿರಿಯ ವಕೀಲರು ಹಿರಿಯರಿಗೆ ಗೌರವ ನೀಡುವ ಮೂಲಕ ತಮ್ಮ ಕರ್ತವ್ಯವನ್ನು ಶ್ರೇಷ್ಠವಾಗಿ ನಿರ್ವಹಿಸಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹೈಕೋರ್ಟ್ ನ್ಯಾಯಾಧೀಶ ಸಿ.ಎಂ. ಪೂಣಚ್ಚ, ದೇಶ ಮುಂದುವರಿದಿದ್ದು ಕಾನೂನಿನಲ್ಲೂ ಇತ್ತೀಚೆಗೆ ಹೊಸ ತಾಂತ್ರಿಕತೆ ಬದಲಾಗುತ್ತಿದೆ. ಆದ್ದರಿಂದ ಅದನ್ನು ನಾವು ಒಪ್ಪುವ ಮೂಲಕ ಸ್ವೀಕರಿಸಲು ಸಿದ್ಧರಾಗಿರಬೇಕು. ಕಿರಿಯ ವಕೀಲರು ಹೆಚ್ಚು ಕಲಿಯುವ ಆಸಕ್ತಿಯೊಂದಿಗೆ ಹಿರಿಯ ವಕೀಲರಿಗೆ ಗೌರವ ನೀಡುವ ಮೂಲಕ ಅವರ ಸಹಕಾರ ಪಡೆಯಬೇಕು ಎಂದು ಸಲಹೆ ನೀಡಿದರು.

ಹೈಕೋರ್ಟ್ ನ್ಯಾಯಾಧೀಶೆ ಚಿಲ್ಲಕುರ್ ಸುಮಲತಾ ಮಾತನಾಡಿ, ದೇಶದ ಸಂವಿಧಾನ ಪವಿತ್ರವಾದ ಗ್ರಂಥವಾಗಿ ಕಾನೂನು ರಚನೆಯಾಗಿದೆ. ಸಂವಿಧಾನಕ್ಕೆ ಪ್ರತಿಯೊಬ್ಬರು ಗೌರವ ನೀಡುವ ಮೂಲಕ ಕಾನೂನು ಪಾಲಿಸಬೇಕು ಎಂದರು.

ಜಿಲ್ಲಾ ಪ್ರಧಾನ ಮತ್ತು ಸೆಷನ್ ನ್ಯಾಯಾಧೀಶ ಹೊಸಮನಿ ಪುಂಡಲಿಕ್, ದಿ.ಪಿ.ಸಿ. ಅರುಣ ಅವರ ಸಹೋದರಿ ಕೊರವಂಡ ರೇವತಿ ತಿಮ್ಮಯ್ಯ, ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಅಪ್ಪಣ್ಣ, ಹಿರಿಯ ವಕೀಲರಾದ ಎಸ್.ಆರ್.ಜಗದೀಶ್, ಐ.ಆರ್. ಪ್ರಮೋದ್ ಮಾತನಾಡಿದರು. ಇದೇ ವೇಳೆ ದಿ.ಪಟ್ಟಡ ಅರುಣ ಅವರ ಭಾವಚಿತ್ರ ಅನಾವರಣಗೊಳಿಸಲಾಯಿತು. ವಕೀಲರ ಸಂಘದ ವತಿಯಿಂದ ನ್ಯಾಯಾಧೀಶರು ಮತ್ತು ರೇವತಿ ತಿಮ್ಮಯ್ಯ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಸುಜಾತ, ಮಂಜುನಾಥ್, ಪ್ರಶಾಂತಿ, ಸಂತೋಷ ಕೋಠರಿ, ಪ್ರದೀಪ್, ವಕೀಲರ ಸಂಘದ ಉಪಾಧ್ಯಕ್ಷ ಬಿ.ಜಿ.ಪ್ರಥಮ್, ಕಾರ್ಯದರ್ಶಿ ವಿ.ಜಿ.ರಾಕೇಶ್, ಖಜಾಂಚಿ ವಿ.ಎಸ್.ಪ್ರೀತಮ್, ನಿರ್ದೇಶಕಿ ಸಿಂಧೂರ ಎನ್.ಸ್ವಾಮಿ, ವಕೀಲ ಬಿ.ಬಿ. ಮಾದಪ್ಪ ಹಾಜರಿದ್ದರು.

ಪಾದಯಾತ್ರೆ ಯಶಸ್ವಿಗೆ ಶ್ರಮಿಸಿದವರಿಗೆ ಸನ್ಮಾನ



ವಿರಾಜಪೇಟೆಯ ಕೊಡವ ಸಮಾಜದಲ್ಲಿ ನಡೆದ 'ಕೊಡವಾಮೆ ಬಾಳೋ' ಪಾದಯಾತ್ರೆ ಯಶಸ್ವಿಗೆ ಶ್ರಮಿಸಿದವರಿಗೆ ಅಭಿನಂದನೆ ಕಾರ್ಯಕ್ರಮ ನಡೆಯಿತು.

ಮಡಿಕೇರಿ, ಫೆ.27– ಕೊಡವ ಸಂಸ್ಕೃತಿ, ಪದ್ಧತಿ, ಪರಂಪರೆ ರಕ್ಷಣೆ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯುವ ದಿಸೆಯಲ್ಲಿ ಕೊಡವರು ಹಾಗೂ ಕೊಡವ ಭಾಷಿಕ ಸಮುದಾಯದವರಿಂದ ದಕ್ಷಿಣ ಕೊಡಗಿನ ಕುಟ್ಟದಿಂದ ಮಡಿಕೇರಿವರೆಗೆ 'ಕೊಡವಾಮೆ ಬಾಳೋ' ಪಾದಯಾತ್ರೆ ಶಾಂತಿಯುತವಾಗಿ ಯಶಸ್ವಿಯಾಗಿ ನಡೆದ ಹಿನ್ನೆಲೆಯಲ್ಲಿ ವಿರಾಜಪೇಟೆಯ ಕೊಡವ ಪೊಮ್ಮಕ್ಕಡ ಕೂಟದ ವತಿಯಿಂದ ಪಾದಯಾತ್ರೆ ಯಶಸ್ವಿಗೆ ಶ್ರಮಿಸಿದವರಿಗೆ ಅಭಿನಂದನೆ ಹಾಗೂ ಸನ್ಮಾನ ಕಾರ್ಯಕ್ರಮ ನಡೆಯಿತು.

ವಿರಾಜಪೇಟೆಯ ಕೊಡವ ಸಮಾಜದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ, ಕೊಡವರು ಮತ್ತು ಕೊಡವ ಭಾಷಿಕ ಸಮುದಾಯದವರು ಒಗ್ಗಟ್ಟಿನಿಂದ ನಡೆಸಿದ ಪಾದಯಾತ್ರೆ ಅಭೂತಪೂರ್ವ ಯಶಸ್ಸು ಕಂಡಿದೆ. ಪಾದಯಾತ್ರೆ ಯಶಸ್ಸಿಗೆ ಶ್ರಮಿಸಿದ ಎಲ್ಲರಿಗೂ ಅಭಿನಂದನೆ. ಪಾದಯಾತ್ರೆ ಸಾಗುವ ಮಾರ್ಗದಲ್ಲಿ ವಿವಿಧ ಜಾತಿ, ಧರ್ಮಗಳ ಸಮುದಾಯದವರು ತಂಪು ಪಾನೀಯ, ಹಣ್ಣು-ಹಂಪಲು ನೀಡುವ ಮೂಲಕ ಆತಿಥ್ಯ ನೀಡಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಕೊಡಗಿನ ಕುಲದೇವಿ ಕಾವೇರಿ ಮಾತೆ ಹಾಗೂ ವೀರ ಸೇನಾನಿ ಗಳಾದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಅವರ ಬಗ್ಗೆ ಮತ್ತು ಕೊಡವ ಸಾಂಪ್ರದಾಯಿಕ ಉಡುಪಿನ ಬಗ್ಗೆ ಅವಹೇಳನ ಮಾಡಿದವರಿಗೆ 'ಕೊಡವಾಮೆ ಬಾಳೋ' ಪಾದಯಾತ್ರೆ ಮೂಲಕ ಉತ್ತರ ನೀಡಲಾಗಿದೆ. ಕೊಡವ ಹಾಗೂ ಕೊಡವ ಭಾಷಿಕರಿಗೆ ಮುಂದೆ ಏನೇ ಸಮಸ್ಯೆಯಾದರೂ ಒಗ್ಗಟ್ಟಿನಿಂದ ಎದುರಿಸುವುದಾಗಿ ಹೇಳಿದರು.

ವಿರಾಜಪೇಟೆ ಕೊಡವ ಪೊಮ್ಮಕ್ಕಡ ಕೂಟದ ಅಧ್ಯಕ್ಷೆ ಮನೆಯಪಂಡ ಕಾಂತಿ ಸತೀಶ್ ಮಾತನಾಡಿದರು. ಪಾದಯಾತ್ರೆ ಯಶಸ್ಸಿಗೆ ಶ್ರಮಿಸಿದ ಗಣ್ಯರನ್ನು ಇದೇ ಸಂದರ್ಭ ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ, ಜಬ್ಬೂಮಿ ಸಂಘಟನೆ ಅಧ್ಯಕ್ಷ ಚೊಟ್ಟೆಕ್ ಮಾಡ ರಾಜೀವ್ ಬೋಪಯ್ಯ, ಯುಕೋ ಸಂಘಟನೆ ಅಧ್ಯಕ್ಷ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ಗೋಣಿಕೊಪ್ಪ ಕಾವೇರಿ ಎಜುಕೇಷನ್ ಸೊಸೈಟಿ ಅಧ್ಯಕ್ಷ ಮಂಡೆಪಂಡ ಸುಗುಣ ಮುತ್ತಣ್ಣ, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜನಿಕಂಡ ಮಹೇಶ್ ನಾಚಯ್ಯ, ಅಖಿಲ ಅಮ್ಮಕೊಡವ ಸಮಾಜದ ಅಧ್ಯಕ್ಷ ಬಾನಂಡ ಪ್ರಥ್ಯು, ಕೊಡವ ಭಾಷಿಕ ಜನಾಂಗದ ಒಕ್ಕೂಟದ ಕಾರ್ಯದರ್ಶಿ ಪಡಿಜ್ಞರಂಡ ಪ್ರಭುಕುಮಾರ್, ಅಖಿಲ ಕೊಡವ ಸಮಾಜ ಯೂಥ್ ವಿಂಗ್ ಅಧ್ಯಕ್ಷ ಚಮ್ಮಟಿರ ಪ್ರವೀಣ್ ಉತ್ತಪ್ಪ, ತೂಕ್ ಬೊಳಕ್ ಕಲೆ ಮತ್ತು ಕ್ರೀಡಾ ಸಂಘಟನೆ ಅಧ್ಯಕ್ಷ ಮುಲ್ಲೆಂಗಡ ಮಧೋಶ್ ಪೂವಯ್ಯ, ಕೊಡವಾಮೆ ಕೊಂಡಾಟ ಸಂಘಟನೆ ಅಧ್ಯಕ್ಷ ಚಾಮೇರ ದಿನೇಶ್ ಬೆಳ್ಯಪ್ಪ ಕನೆಕ್ಟಿಂಗ್ ಕೊಡವಾಸ್ ಸಂಘಟನೆ ಸಂಚಾಲಕ ಶಾಂತೆಯಂಡ ನಿರನ್, ಕೊಡವ ಅಕಾಡೆಮಿ ಹಾಗೂ ಮಡಿಕೇರಿ ಕೊಡವ ಸಮಾಜದ ಸದಸ್ಯ ಚೊಟ್ಟೆಯಂಡ ಸಂಜು ಕಾವೇರಪ್ಪ ಇತರರು ಉಪಸ್ಥಿತರಿದ್ದರು.

ಕಣ್ಣಂಗಾಲದಲ್ಲಿ ಶಿವರಾತ್ರಿ ಪೂಜೆ



ಕಣ್ಣಂಗಾಲ ಗ್ರಾಮದ ಮಹದೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಪೂಜೆ ನೆರವೇರಿಸಲಾಯಿತು.

ಮಡಿಕೇರಿ, ಫೆ27–ಅಮ್ಮತಿ ಒಂಟಿ ಅಂಗಡಿ ಕಣ್ಣಂಗಾಲ ಗ್ರಾಮದ ಶ್ರೀ ಮಹದೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಹಬ್ಬದ ಅಂಗವಾಗಿ ವಿಶೇಷ ಪೂಜೆ ನೆರವೇರಿತು.

ದೇವರ ನೃತ್ಯ ಬಲಿ ಸಹಿತ ವಿವಿಧ ಪೂಜಾ ಕಾರ್ಯ ನಡೆಯಿತು. ಸುತ್ತ ಮುತ್ತಲಿನ ನೂರಾರು ಗ್ರಾಮಸ್ಥರು ಪೂಜಾ ಕಾರ್ಯದಲ್ಲಿ ಪಾಲ್ಗೊಂಡು ಭಕ್ತಿ ಸಮರ್ಪಿಸಿದರು. ಬಳಿಕ ತೀರ್ಥ ಪ್ರಸಾದ ವಿನಿಯೋಗಿಸಲಾಯಿತು.

ನಾಲಡಿ ಬೆಟ್ಟಕ್ಕೆ ಬೆಂಕಿ; ನೂರಾರು ಎಕರೆ ಅರಣ್ಯ ಭಸ್ಮ



ನಾಲಡಿ ಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡಿರುವುದು.

ನಾಪೋಕ್ಲು, ಫೆ.27–ಸಮೀಪದ ಕಕ್ಕಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನಾಲಡಿ ಬೆಟ್ಟಕ್ಕೆ ಬುಧವಾರ ಬೆಂಕಿ ಬಿದ್ದು, ನೂರಾರು ಎಕರೆ ಅರಣ್ಯ ಭಸ್ಮವಾಗಿದೆ.

ಬಿಸಿಲಿನ ಝಳ ಹೆಚ್ಚಿದ್ದು, ಬೆಟ್ಟದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿಯ ಜ್ವಾಲೆ ವ್ಯಾಪಿಸಿ ಗಿಡ-ಮರಗಳು ಸೇರಿದಂತೆ ನೂರಾರು ಎಕರೆ ಸುಟ್ಟುಹೋಗಿದೆ. ಸ್ಥಳೀಯರು ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದ್ದು, ಅಗ್ನಿಶಾಮಕ ವಾಹನ ಬೆಟ್ಟಕ್ಕೆ ಹೋಗಲು ಅಸಾಧ್ಯವಾಗದಿರುವುದರಿಂದ ಬೆಂಕಿ ನಂದಿಸುವುದು ಕಷ್ಟಕರವಾಗಿದೆ. ಅರಣ್ಯ ಸಿಬ್ಬಂದಿ ಬೆಂಕಿ ನಂದಿಸಲು ಹರಸಾಹಸ ಪಡುವಂತಾಗಿದೆ.

ಇಂದು ದೈವ ಆರಾಧಕರ ಪ್ರತಿಭಟನೆ

ಮಡಿಕೇರಿ, ಫೆ.27–ದೈವ ಆರಾಧನೆಯನ್ನು ಶಾಲೆಗಳ ರಂಗೋತ್ಸವ ಕಾರ್ಯಕ್ರಮದಲ್ಲಿ ಪ್ರದರ್ಶಿಸಲು ಅವಕಾಶ ನೀಡಿ ಸುತ್ತೋಲೆ ಹೊರಡಿಸಿರುವ ಸರ್ಕಾರದ ಕ್ರಮ ಖಂಡಿಸಿ ದೈವ ಆರಾಧಕರು ಮತ್ತು ದೈವ ನರ್ತಕರ ಸಂಘದ ವತಿಯಿಂದ ಫೆ.28ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಮುಖರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಶಿವರಾತ್ರಿ ಆಚರಣೆ



ವಿರಾಜಪೇಟೆ: ಪಟ್ಟಣದ ಜೈನರ ಬೀದಿಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಬುಧವಾರ ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜಾ ಕಾರ್ಯ ನೆರವೇರಿಸಲಾಯಿತು.

ರಾತ್ರಿ ಮಂಗಳೂರಿನ ಪಂಡಿತ್ ದೇವರಾಯ ಕಿಣಿ ಮತ್ತು ತಂಡದವರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಹಾಗೂ ಭಜನೆ ಕಾರ್ಯಕ್ರಮ ನಡೆಯಿತು. ಈ ವೇಳೆ ಪ್ರಸಾದ ವಿತರಿಸಲಾಯಿತು. ಹೈಕೋರ್ಟ್ ಹಿರಿಯ ವಕೀಲ ರವೀಂದ್ರನಾಥ್ ಕಾಮತ್, ದೇವಸ್ಥಾನ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಹಾಜರಿದ್ದರು.

ಪಟ್ಟಣದ ಅಪ್ಪಯ್ಯಸ್ವಾಮಿ ರಸ್ತೆಯ ಶ್ರೀ ಮಹಾಗಣಪತಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ಬೆಳಗ್ಗೆಯಿಂದಲೇ ವಿಶೇಷ ಪೂಜೆ, ರುದ್ರಾಭಿಷೇಕ, ಮಧ್ಯಾಹ್ನ ಮಹಾಪೂಜೆ ಬಳಿಕ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ನಾಟ್ಯಮಯೂರಿ ನೃತ್ಯ ಶಾಲಾ ವಿದ್ಯಾರ್ಥಿಗಳಿಂದ ನೃತ್ಯ ವೈಭವ ಕಾರ್ಯಕ್ರಮ ನಡೆಯಿತು.

ಮಹಾಶಿವರಾತ್ರಿ ಸಂಭ್ರಮಾಚರಣೆ

● ಚಾ.ನಗರದ ಜಿಲ್ಲೆಯಾದ್ಯಂತ ದೇವಾಲಯಗಳಲ್ಲಿ ವಿಶೇಷ ಪೂಜೆ ● ಶಿವಾಲಯದಲ್ಲಿ ವ್ರತಾಚರಣೆ



ಚಾಮರಾಜನಗರದ ಚಾಮರಾಜೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಹಿನ್ನೆಲೆಯಲ್ಲಿ ವಿಶೇಷ ಪೂಜೆ ನಡೆಯಿತು.

ಚಾಮರಾಜನಗರ, ಫೆ.27–ಜಿಲ್ಲಾದ್ಯಂತ ಮಹಾಶಿವರಾತ್ರಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ಸೇರಿದಂತೆ ಜಿಲ್ಲೆಯ ಗ್ರಾಮೀಣ ಪ್ರದೇಶದ ಶಿವನ ದೇವಾಲಯಗಳಲ್ಲಿ ಮುಂಜಾನೆಯಿಂದಲ್ಲೇ ಪ್ರಾರ್ಥನೆ, ಜಪ, ಧ್ಯಾನ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಬೆಳಗ್ಗೆಯಿಂದಲೇ ಭಕ್ತರು ದೇವಾಲಯಗಳಿಗೆ ತೆರಳಿ ಶಿವನ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಚಾಮರಾಜನಗರದ ಐತಿಹಾಸಿಕ ಚಾಮರಾಜೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಹಿನ್ನೆಲೆಯಲ್ಲಿ ವಿಶೇಷ ಪೂಜಾ ಕಾರ್ಯ ನಡೆಯಿತು. ನಗರ ಸೇರಿದಂತೆ ಸುತ್ತಲಿನ ಗ್ರಾಮಸ್ಥರು ದೇವಾಲಯಕ್ಕೆ ಆಗಮಿಸಿ ಸ್ವಾಮಿಯ ದರ್ಶನ ಪಡೆದು ಶಿವನಾಮ ಸ್ಮರಣೆ ಮಾಡಿದರು. ಯಳಂದೂರು ತಾಲೂಕಿನ ಮಾಂಬಳ್ಳಿ ವೈದ್ಯನಾಥೇಶ್ವರ, ಆಮೆಕೆರೆ ಗಜಾರಣ್ಯ ಕ್ಷೇತ್ರದ ಶಿವ–ಪಾರ್ವತಿ ದೇವಸ್ಥಾನ, ಪಂಚಲಿಂಗೇಶ್ವರ ಹಾಗೂ ಗೌರೀಶ್ವರ ದೇವಾಲಯ, ಗಣಿಗನೂರು ನೀಲಕಂಠೇಶ್ವರ ಹಾಗೂ ಕೆಸ್ತೂರು ತ್ರಿನೇತ್ರೇಶ್ವರ ದೇವಾಲಯಗಳಿಗೆ ಭಕ್ತರು ತೆರಳಿ ಪೂಜೆ ಸಲ್ಲಿಸಿದರು. ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆ ತಾಲೂಕಿನಾದ್ಯಂತ ಮಹದೇಶ್ವರ ದೇಗುಲಗಳು ಸೇರಿದಂತೆ ಶಿವನ ಆಲಯದಲ್ಲಿ ವ್ರತಾಚರಣೆ ನಡೆಯಿತು.

ಶಿವರಾತ್ರಿ ವಿಶೇಷತೆ: ಮಾಘ ಕೃಷ್ಣ ಚತುರ್ದಶಿಯಂದು ಮಹಾಶಿವರಾತ್ರಿ ಆಚರಿಸಲಾಗುತ್ತದೆ. ಸಮುದ್ರ ಮಂಥನ ಸಂದರ್ಭದಲ್ಲಿ ಉದ್ಭವಿಸಿದ ಹಾಲಾಹಲವನ್ನು ಪರಮೇಶ್ವರ ಸೇವಿಸಿದನು. ಈ ದಿನದಂದು ಈತ ನೀಲಕಂಠನಾಗಿ ಜಗತ್ತನ್ನು ರಕ್ಷಿಸಿದ, ಅಲ್ಲದೆ, ಈ ದಿನವನ್ನು ಶಿವ–ಪಾರ್ವತಿಯರ ವಿವಾಹ ದಿನ ಹಾಗೂ ಈಶ್ವರ ತಾಂಡವ ನೃತ್ಯ ಮಾಡಿದ ದಿನವಾಗಿ ತಿಳಿಯಲಾಗಿದೆ.

ವಸ್ತ್ರ, ಬೆಲ್ಲದ ಆಚರಣೆ: ಶಿವರಾತ್ರಿ ಹಬ್ಬದ ಸಂದರ್ಭದಲ್ಲಿ ಲಿಂಗಾಯತ ಸಮುದಾಯದಲ್ಲಿ ಹೆಣ್ಣು ಮಕ್ಕಳಿಗೆ ತವರು ಮನೆಯವರು ವಸ್ತ್ರಬೆಲ್ಲ ಹಂಚುವ ಪದ್ಧತಿ ಇದೆ. 'ಈ ಆಚರಣೆ ಅಣ್ಣ–ತಂಗಿ ಬಾಂಧವ್ಯದ ಸಂಕೇತವಾಗಿದೆ.

ಹೆಣ್ಣು ಮಕ್ಕಳು ಹಬ್ಬದ ಸಂದರ್ಭದಲ್ಲಿ ತವರು ಮನೆಯಿಂದ ತಂದೆಯೋ ಅಥವಾ ಸಹೋದರರು ಬರುವುದನ್ನು ಕಾಯುತ್ತಿರುತ್ತಾರೆ. ಬೆಲ್ಲ, ವಸ್ತ್ರ, ಪೂಜಾ ಸಾಮಗ್ರಿ, ಅರಿಶಿನ, ಕುಂಕುಮ, ಧನ–ಧಾನ್ಯ ಒಡವೆ ನೀಡುತ್ತಾರೆ. ಹಬ್ಬದ ದಿನ ಸುಮಂಗಲಿಯರು ಎಲ್ಲಾ ದೈವಿಕ ವಸ್ತುಗಳನ್ನು ಶಿವನ ಮುಂದೆ ಇಟ್ಟು ತವರು ಸುಭಿಕ್ಷವಾಗಲಿ ಎಂದು ಹಾರೈಸುತ್ತಾರೆ ಎನ್ನುವ ನಂಬಿಕೆ ಶಿವರಾತ್ರಿ ಹಬ್ಬ ಆಚರಣೆಯಲ್ಲಿದೆ.

ಮಲೆಮಹದೇಶ್ವರ ಹಾಗೂ ಮಂಟೇಸ್ವಾಮಿ, ಸಿದ್ದಪ್ಪಾಜಿ ದೇವರ ಗುಡ್ಡರು ತಾವು ಧರಿಸಿದ ರುದ್ರಾಕ್ಷಿ ಮಣಿಯ ದಾರ ಬದಲಿಸಿ, ವಸ್ತ್ರ ಧರಿಸಿ, ಸ್ವಾಮಿಗೆ ಮನೆಯಲ್ಲಿ ಎಡೆಯಿಟ್ಟು, ಪೂಜೆ ಸಲ್ಲಿಸುವ ಮತ್ತೊಂದು ಪದ್ಧತಿ ಜಿಲ್ಲೆಯಲ್ಲಿ ಆಚರಣೆಯಲ್ಲಿದೆ.

ಮಲೆ ಮಾದಪ್ಪನಿಗೆ ಎಣ್ಣೆ ಮಜ್ಜನ ಸೇವೆ



ಮಹಾಶಿವರಾತ್ರಿ ಅಂಗವಾಗಿ ಮಹದೇಶ್ವರಬೆಟ್ಟದಲ್ಲಿ ಚಿನ್ನದ ರಥೋತ್ಸವ ನಡೆಯಿತು.

ಹನೂರು, ಫೆ.27–ಪ್ರಸಿದ್ಧ ಯಾತ್ರಾ ಕ್ಷೇತ್ರ ಮಲೆಮಹದೇಶ್ವರಬೆಟ್ಟದಲ್ಲಿ ಮಹಾ ಶಿವರಾತ್ರಿ ಅಂಗವಾಗಿ ಸ್ವಾಮಿಗೆ ಎಣ್ಣೆ ಮಜ್ಜನ ಸೇವೆ ನೆರವೇರಿಸಲಾಯಿತು.

ಬೆಳಗ್ಗೆಯಿಂದಲೇ ಭಕ್ತರ ದಂಡು ಮಾದಪ್ಪನ ದರ್ಶನಕ್ಕೆ ಬಂದಿದ್ದು, ಸಂಜೆ ನಂತರ ಭಕ್ತಾದಿಗಳ ಸಂಖ್ಯೆ ಇಮ್ಮಡಿಗೊಂಡಿತು. ರಾತ್ರಿ ಸ್ವಾಮಿಗೆ ಬೇಡಗಂಪಣ ಸಮುದಾಯದ ವಿಧಿವಿಧಾನಗಳಂತೆ ಪೂಜಾ ಕಾರ್ಯ ನೆರವೇರಿದವು. ಪಾದಯಾತ್ರೆ ಮೂಲಕ ಬಂದ ಭಕ್ತರು ಮಾತ್ರವಲ್ಲದೇ, ಜಿಲ್ಲೆ, ಹೊರ ಜಿಲ್ಲೆ, ನೆರೆಯ ತಮಿಳುನಾಡು, ಕೇರಳದಿಂದಲೂ ಹೆಚ್ಚಿನ ಭಕ್ತರು ಬಂದು ವಿವಿಧ ಸೇವೆಗಳಲ್ಲಿ ಪಾಲ್ಗೊಂಡು ಹರಕೆ ತೀರಿಸಿದರು.

ಜಾಗರಣೆ ಸೇವೆ: ಶಿವರಾತ್ರಿ ಅಂಗವಾಗಿ ಬುಧವಾರ ರಾತ್ರಿ ಇಡೀ ಸಾವಿರಾರು ಭಕ್ತರು ಬೆಟ್ಟದಲ್ಲೇ ಉಳಿದು ದೇವಾಲಯ ಆವರಣದಲ್ಲಿ ಜಾಗರಣೆ ಮಾಡಿ, ಮಾದಪ್ಪನ ಸ್ಮರಿಸಿದರು. ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿವಿಧ ಉತ್ಸವ ನಡೆದವು.

ರಜಾ ಸೇವೆ: ಜಾತ್ರೆಗೆ ಗಡಿ ಗ್ರಾಮಗಳಿಂದ ಬರುವ ಭಕ್ತರು ದೇವಾಲಯದ ಸುತ್ತಲೂ ರಜಾ (ಕಸ) ಹೊಡೆದು ಮಾದಪ್ಪನಿಗೆ ಸೇವೆ ಸಲ್ಲಿಸುವ ವಾಡಿಕೆ ಇದೆ. ದೀಪಾವಳಿ ಜಾತ್ರೆಯಲ್ಲಿ ಮಣ್ಣಿನ ಹಣತೆ ಹಚ್ಚಿ ದೇವರಿಗೆ ಪೂಜೆ ಸಲ್ಲಿಸಿದರೆ, ಶಿವರಾತ್ರಿ ಸಂದರ್ಭದಲ್ಲಿ ರಜಾ ಹೊಡೆದು, ಕ್ಷೇತ್ರಕ್ಕೆ ಬರುವ ಭಕ್ತರಿಗೆ ಅನ್ನಸಂತರ್ಪಣೆ ಮಾಡಿ ಮಾದಪ್ಪನ ಹರಕೆ ತೀರಿಸುವುದು ವಾಡಿಕೆ. ಹೀಗಾಗಿ, ಬುಧವಾರ ಬೆಳಗ್ಗೆಯಿಂದಲೇ ಕ್ಷೇತ್ರಕ್ಕೆ ಬಂದ ಭಕ್ತರು ಮಾದಪ್ಪನ ದರ್ಶನ ಮಾಡಿ, ಹುಲಿ, ರುದ್ರಾಕ್ಷಿ ವಾಹನ, ಬೆಳ್ಳಿ ರಥ, ರಾತ್ರಿ ಚಿನ್ನದ ರಥೋತ್ಸವ ಸೇರಿದಂತೆ ವಿವಿಧ ಸೇವೆಗಳನ್ನು ಸಲ್ಲಿಸಿದರು.

7 ಲಕ್ಷ ಲಾಡು ತಯಾರಿಕೆ: ಬೆಟ್ಟಕ್ಕೆ ಈ ಬಾರಿ ನಿರೀಕ್ಷೆಗೂ ಮೀರಿ ಭಕ್ತರು ಭೇಟಿ ನೀಡುತ್ತಿದ್ದು, ಹೆಚ್ಚು ಲಾಡು ಪ್ರಸಾದ ತಯಾರಿಸುವಂತೆ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಈ.ರಘು ಅವರು ಅಧಿಕಾರಿಗಳಿಗೆ ಸೂಚಿಸಿದರು. ಈ ಹಿನ್ನೆಲೆಯಲ್ಲಿ 7 ಲಕ್ಷ ಲಾಡು ತಯಾರಿಸಲಾಗಿದೆ.

ದೀಪಾಲಂಕಾರ: ಶಿವರಾತ್ರಿಯ ಅಂಗವಾಗಿ ಮಹದೇಶ್ವರಬೆಟ್ಟವನ್ನು ವಿವಿಧ ಹೂ, ಹಣ್ಣು, ತರಕಾರಿ ಹಾಗೂ ಬಣ್ಣ– ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದ್ದು, ಮಾದಪ್ಪನ ದೇವಾಲಯದಲ್ಲಿ ಜಾತ್ರೆ ಸಂಭ್ರಮ ಕಳೆಗಟ್ಟಿದೆ.

ಇಂದು ನಗರದಲ್ಲಿ ಬೃಹತ್ ಉದ್ಯೋಗ ಮೇಳ

ಚಾಮರಾಜನಗರ: ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯಿತಿ, ಸಂಜೀವಿನಿ–ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ, ಕೌಶಲಾಭಿವೃದ್ಧಿ, ಉದ್ದಿಮಶೀಲತೆ ಮತ್ತು ಜೀವನೋಪಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಂಯುಕ್ತಾಶ್ರಯದಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆ (ಡಿಡಿಯು–ಜಿಕೆವೈ) ಯಡಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಫೆ.28 ಬೆಳಗ್ಗೆ 10 ರಿಂದ ಸಂಜೆ 5 ಗಂಟೆ ವರಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಬಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ನಡೆಯಲಿದೆ.

ಚಾಮರಾಜನಗರ, ಮೈಸೂರು ಮತ್ತು ಬೆಂಗಳೂರಿನ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಉದ್ಯೋಗದಾತ 30ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸುತ್ತಿವೆ. ಕರ ಪತ್ರಗಳಲ್ಲಿ ಮತ್ತು ಪೋಸ್ಟರ್‌ಗಳಲ್ಲಿ ಕ್ಯೂ ಆರ್ ಕೋಡ್ ಮತ್ತು ಗೂಗಲ್ ಫಾರ್ಮನ್ನು ಒದಗಿಸಲಾಗಿದ್ದು, ಮೇಳದಲ್ಲಿ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳು ಗೂಗಲ್ ಲೆನ್ಸ್ ಮುಖಾಂತರ ಸ್ಕ್ಯಾನ್ ಮಾಡಿ ಅರ್ಜಿಗಳನ್ನು ಸಲ್ಲಿಸಬಹುದು. ಮಾಹಿತಿಗಾಗಿ ಮೊ.ಸಂ: 9632179450, 9606830700 ಅನ್ನು ಸಂಪರ್ಕಿಸಬಹುದು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜಿಪಂ ಸಿಇಓ ಮೋನಾ ರೋತ್ ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಮಾಡಿದರು. ಉಪಕಾರ್ಯದರ್ಶಿ ಪಿ.ಲಕ್ಷ್ಮೀ, ಮುಖ್ಯ ಲೆಕ್ಕಾಧಿಕಾರಿ ಬಸವರಾಜು, ಮುಖ್ಯ ಯೋಜನಾಧಿಕಾರಿ ವಿ.ದೀಪಾ, ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಎ.ಮಹಮ್ಮದ್ ಅಕ್ಬರ್, ಸಹಾಯಕ ಯೋಜನಾ ಅಧಿಕಾರಿ ಎಸ್.ರಾಜೇಂದ್ರ ಪ್ರಸಾದ್, ಸಹಾಯಕ ಕಾರ್ಯದರ್ಶಿ ಕೃಷ್ಣರಾಜ ಅರಸ್ ಉಪಸ್ಥಿತರಿದ್ದರು.



ಚಾಮರಾಜನಗರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಿಇಓ ಮೋನಾ ರೋತ್ ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಮಾಡಿದರು.

ಬಿಳಿಗಿರಿರಂಗನಬೆಟ್ಟದಲ್ಲಿ ಗಂಗಾಧರೇಶ್ವರ ರಥೋತ್ಸವ



ಬಿಳಿಗಿರಿರಂಗನಬೆಟ್ಟದ ಉದ್ಭವ ಗಂಗಾಧರೇಶ್ವರ ರಥೋತ್ಸವ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಯಳಂದೂರು, ಫೆ.27–ತಾಲೂಕಿನ ಐತಿಹಾಸಿಕ ಪ್ರಸಿದ್ಧ ಬಿಳಿಗಿರಿರಂಗನಬೆಟ್ಟದ ಉದ್ಭವ ಗಂಗಾಧರೇಶ್ವರ ರಥೋತ್ಸವ ಗುರುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ವೈಷ್ಣವ ಹಾಗೂ ಶೈವ ಸಂಪ್ರದಾಯ ಒಳಗೊಂಡ ಐತಿಹಾಸಿಕ ಪುಣ್ಯ ಕ್ಷೇತ್ರದಲ್ಲಿ ಶಿವರಾತ್ರಿ ಮಾರನೇ ದಿನ ನಡೆಯುವ ಗಂಗಾಧರೇಶ್ವರ ರಥಕ್ಕೆ ಆದಿವಾಸಿಗಳು, ಸೋಲಿಗರು ಸೇರಿದಂತೆ ಜಿಲ್ಲೆಯ ವಿವಿಧೆಡೆಗಳಿಂದ ಬಂದಿದ್ದ ಸಾವಿರಾರು ಭಕ್ತರು ಸಾಕ್ಷಿಯಾದರು.

ಪ್ರಭಾವಳಿಯಲ್ಲಿದ್ದ ಉತ್ಸವ ಮೂರ್ತಿಯನ್ನು ರಥದ ಮೇಲೆ ಪ್ರತಿಷ್ಠಾಪಿಸಿ ಚಾಲನೆ ನೀಡಲಾಯಿತು. ಉದ್ಭವ ಲಿಂಗಕ್ಕೆ ಜಯಚಾಮರಾಜೇಂದ್ರ ಒಡೆಯರ್ ಒಪ್ಪಿಸಿರುವ ಸ್ವರ್ಣ ಕೊಳಗವನ್ನು ಧಾರಣೆ ಮಾಡಲಾಗಿತ್ತು. ಮಧ್ಯಾಹ್ನ 12.20 ರಿಂದ 12.45ರೊಳಗೆ ಸಲ್ಲುವ ಶುಭ ಅಭಿಜಿನ್ ಲಗ್ನದ ಶುಭ ಮುಹೂರ್ತದಲ್ಲಿ ರಥಾರೋಹಣ ಸಂಪನ್ನಗೊಂಡಿತು. ಹರಕೆ ಹೊತ್ತ ಭಕ್ತರು ದಂಡುಗೋಲು ಸೇವೆ ನೆರವೇರಿಸಿದರು. ಭಕ್ತರು ಸರತಿ ಸಾಲಿನಲ್ಲಿ ದೇವರ ದರ್ಶನ ಪಡೆದರು. ಇದೇ ವೇಳೆ ಪ್ರಸಾದ ವಿನಿಯೋಗಿಸಲಾಯಿತು.

ಸಂಸದ ಸುನೀಲ್ ಬೋಸ್, ಶಾಸಕ ಎ.ಆರ್.ಕೃಷ್ಣಮೂರ್ತಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಹೆಚ್.ವಿ. ಚಂದ್ರು, ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ನಂಜುಂಡಸ್ವಾಮಿ, ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಸದಸ್ಯರಾದ ಗುಂಬಳ್ಳಿ ರಾಜಣ್ಣ, ಕೇತಮ್ಮ, ತಹಸೀಲ್ದಾರ್ ಜಯಪ್ರಕಾಶ್, ಕಾರ್ಯನಿರ್ವಾಹಕಾಧಿಕಾರಿ ಮೋಹನ್‌ಕುಮಾರ್, ಯರಿಯೂರು ಪ್ರಕಾಶ್, ವೆಂಕಟೇಶ್ ಹಾಜರಿದ್ದರು.

ಇಂದು ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ

ಚಾಮರಾಜನಗರ, ಫೆ.27–ಕರ್ನಾಟಕ ಸಾಹಿತ್ಯ ಅಕಾಡೆಮಿ, ಸರ್ಕಾರಿ ಮಹಿಳಾ ಕಾಲೇಜು ಹಾಗೂ ಚಕೋರ ಸಾಹಿತ್ಯ ವಿಚಾರ ವೇದಿಕೆ ಸಹಯೋಗದಲ್ಲಿ 'ಜನಪದ ಮಹಾಭಾರತ ಶೋಷಣೆಯ ನೆಲೆಗಳು' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಫೆ.28ರಂದು ಬೆಳಗ್ಗೆ 11 ಗಂಟೆಗೆ ನಗರದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಆಯೋಜಿಸಲಾಗಿದೆ.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಶೈಲೇಶ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಕನ್ನಡ ಉಪನ್ಯಾಸಕ ಆರ್.ಎಸ್.ಸುರೇಶ್ ಕವನ ವಾಚಿಸಲಿದ್ದಾರೆ. ಕೆ.ಆರ್.ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಮೈಸೂರು ಕೃಷ್ಣಮೂರ್ತಿ ವಿಷಯ ಮಂಡಿಸಲಿದ್ದು, ಕನ್ನಡ ವಿಭಾಗದ ಮುಖ್ಯಸ್ಥೆ ರುಕ್ಮಿಣಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಹದೇವೇಗೌಡ ನಿಧನ



ಬೇಗೂರು, ಫೆ.27–ಸಮೀಪದ ತಗ್ಗಲೂರು ಗ್ರಾಮದ ನಿವಾಸಿ, ಗ್ರಾಪಂ ಮಾಜಿ ಉಪಾಧ್ಯಕ್ಷ ಮಹದೇವೇಗೌಡ (61) ಗುರುವಾರ ಮುಂಜಾನೆ ನಿಧನರಾದರು.

ಮೃತರು ಪತ್ನಿ, ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ತಗ್ಗಲೂರು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

ರಾಜಪ್ಪ



ಬೇಗೂರು, ಫೆ.27–ಸಮೀಪದ ಕಮರಹಳ್ಳಿ ಗ್ರಾಮದ ವೀರಶೈವ ಸಮಾಜದ ರಾಜಪ್ಪ (72) ಗುರುವಾರ ನಿಧನರಾದರು.

ಮೃತರು ಪುತ್ರ ಕೆಎಸ್‌ಆರ್‌ಟಿಸಿ ಟ್ರಾಫಿಕ್ ಕಂಟ್ರೋಲರ್ ಮಲ್ಲಿಕಾರ್ಜುನ, ಪುತ್ರಿ ಮಂಜುಳಾ ಅವರನ್ನು ಅಗಲಿದ್ದಾರೆ. ಶುಕ್ರವಾರ ಬೆಳಗ್ಗೆ ಗ್ರಾಮದ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈ ವಾರ ತೆರೆಗೆ

ಮಾಂಕ್ ದಿ ಯಂಗ್



ಹೊಸಬರ ತಂಡವೇ ಸೇರಿ ನಿರ್ಮಿಸಿರುವ, ವಿಭಿನ್ನ ಕಥಾಹಂದರ ಹೊಂದಿದ ಚಿತ್ರ "ಮಾಂಕ್ ದಿ ಯಂಗ್" ಫೆ.28ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಕೆ.ಆರ್.ಜಿ. ಸ್ಟುಡಿಯೋಸ್ ಈ ಚಿತ್ರವನ್ನು ವಿತರಣೆ ಮಾಡುತ್ತಿದೆ. ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗಿರುವ ಚಿತ್ರದ ಹಾಡುಗಳು, ಟೀಸರ್, ಟ್ರೈಲರ್ ಅತಿ ಹೆಚ್ಚು ವೀಕ್ಷಣೆಯಾಗಿ ಜನಮನ ಗೆದ್ದಿವೆ. ಹಾಲಿವುಡ್ ಸ್ಟೈಲ್‌ನಲ್ಲಿ ಮೂಡಿ ಬಂದಿರುವ ಕನ್ನಡ ಚಿತ್ರ ಎಂಬ ಹೆಗ್ಗಳಿಕೆ ಹೊಂದಿರುವ, ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಮಾಸ್ಚಿತ್ ಸೂರ್ಯ ಆಕ್ಷನ್ ಕಟ್ ಹೇಳಿದ್ದಾರೆ. ನಿವೃತ್ತ ಆರ್ಮಿ ಆಫೀಸರ್ ಕರ್ನಲ್ ರಾಜೇಂದ್ರನ್, ವಿನಯ್‌ಬಾಬು ರೆಡ್ಡಿ ಶೆಟ್ಟಿಹಳ್ಳಿ, ಗೋಪಿಚಂದ್, ಲಾಲ್‌ಚಂದ್ ಖತಾರ್ ಮತ್ತು ಸರೋವರ್ ಈ ಐದೂ ಜನ ಸೇರಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ನಿರ್ಮಾಪಕರೆಲ್ಲಾ ಈ ಚಿತ್ರದಲ್ಲಿ ನಟನೆ ಕೂಡ ಮಾಡಿರುವುದು ವಿಶೇಷ.

ಸರೋವರ್ ಮಾಂಕ್ ದಿ ಯಂಗ್ ಚಿತ್ರದ ನಾಯಕನಾಗಿ ನಟಿಸಿದ್ದು, ಸೌಂದರ್ಯಗೌಡ ನಾಯಕಿ ಪಾತ್ರ ನಿರ್ವಹಿಸಿದ್ದಾರೆ, ತೆಲುಗು, ತಮಿಳಿನ ಪ್ರಸಿದ್ಧ ನಟ ಬಬ್ಲೂ ಪೃಥ್ವಿರಾಜ್ ಈ ಚಿತ್ರದ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದು, ಉಷಾ ಭಂಡಾರಿ, ಪ್ರಣಯ ಮೂರ್ತಿ ಇತರೆ ತಾರಾಬಳಗದಲ್ಲಿದ್ದಾರೆ. ಕಾರ್ತಿಕ್ ಶರ್ಮ ಅವರ ಛಾಯಾಗ್ರಹಣ, ಥ್ರಿಲ್ಲರ್ ಮಂಜು ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಸ್ವಾಮಿನಾಥನ್ ರಾಮಕೃಷ್ಣ ಹಾಗೂ ಸುಪ್ರೀತ್ ಫಾಲ್ಗುಣ ಈ ಚಿತ್ರಕ್ಕೆ ಸಂಗೀತ ನೀಡಿದ್ದಾರೆ.

ಪ್ರೇಮಿಯ ಹುಡುಕಾಟದಲ್ಲಿ 'ಅಮರಪ್ರೇಮಿ ಅರುಣ್'



ಒಲವು ಸಿನಿಮಾ ಸಂಸ್ಥೆಯಡಿ ನಿರ್ಮಾಣವಾದ ಅಪ್ಪಟ ಪ್ರೇಮ ಕಥಾಹಂದರ ಒಳಗೊಂಡ ಚಿತ್ರ "ಅಮರಪ್ರೇಮಿ ಅರುಣ್". ಗಿರೀಶ್ ಕಾಸರವಳ್ಳಿ, ಯೋಗರಾಜ್‌ಭಟ್ಟರ ಜತೆ ಸಹನಿರ್ದೇಶಕನಾಗಿದ್ದ ಪ್ರವೀಣ್ ಕುಮಾರ್ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಇತ್ತೀಚೆಗೆ ಚಿತ್ರದ ಟೀಸರ್‌ನ್ನು ಡಾ॥ಮಂಜಮ್ಮ ಜೋಗತಿ ಹಾಗೂ ಶೈಲಜಾನಾಗ್ ಬಿಡುಗಡೆ ಮಾಡಿದರು, ಮಂಜಮ್ಮ ಜೋಗತಿ ಚಿತ್ರದ ವಿಶೇಷ ಪಾತ್ರದಲ್ಲೂ ಸಹ ಕಾಣಿಸಿಕೊಂಡಿದ್ದಾರೆ. ಅಮರಪ್ರೇಮಿ ಅರುಣ್ ಬಳ್ಳಾರಿಯಲ್ಲಿ ನಡೆಯುವ ಪ್ರೇಮಕಥೆ, ಬಳ್ಳಾರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲೇ ಈ ಚಿತ್ರಕ್ಕೆ 54 ದಿನಗಳವರೆಗೆ ಚಿತ್ರೀಕರಣ ನಡೆಸಲಾಗಿದೆ. ಚಿತ್ರದಲ್ಲಿ ನಾಯಕ ಹರಿಶರ್ವಾ, ಅರುಣ್ ಎಂಬ ಮೆಡಿಕಲ್ ರೆಪ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ನಾಯಕಿ ದೀಪಿಕಾ ಆರಾಧ್ಯ, ಕಾವ್ಯ ಎಂಬ ಪಾತ್ರದಲ್ಲಿ ನಟಿಸಿದ್ದು, ಧರ್ಮಣ್ಣ ಕಡೂರು ಬಳ್ಳಾರಿ ಸೀನನಾಗಿ ನಟಿಸಿದ್ದಾರೆ, ಕೃತಿ ಭಟ್, ಇವರ ಜೋಡಿ. ಇದೊಂದು ಕೌಟುಂಬಿಕ ಚಿತ್ರವೂ ಹೌದು. ನಾಯಕ ಹಾಗೂ ನಾಯಕಿಗೆ ಅಪ್ಪ, ಅಮ್ಮ, ಅಜ್ಜಿ ಎಲ್ಲರೂ ಇರುತ್ತಾರೆ. ಈ ಪಾತ್ರಗಳಿಗೆ ಹಿರಿಯ ಕಲಾವಿದರು ಜೀವ ತುಂಬಿದ್ದಾರೆ. ಪ್ರವೀಣ್ ಅವರ ಛಾಯಾಗ್ರಹಣ, ಮನು ಶೇಡ್ಗಾರ್ ಅವರ ಸಂಕಲನ ಹಾಗು ಕಿರಣ್ ರವೀಂದ್ರನಾಥ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಏಪ್ರಿಲ್ ವೇಳೆಗೆ ಚಿತ್ರವನ್ನು ರಿಲೀಸ್ ಮಾಡೋ ಪ್ಲಾನಿದೆ ಎಂದು ನಿರ್ದೇಶಕ ಪ್ರವೀಣ್‌ಕುಮಾರ್ ತಿಳಿಸಿದರು.

ನಾಯಕ ಹರಿಶರ್ವಾ ಮಾತನಾಡುತ್ತ, ರಂಗಭೂಮಿ ಹಿನ್ನೆಲೆಯಿಂದ ಬಂದ ನಾನು ಈ ಹಿಂದೆ ಕಹಿ ಎಂಬ ಸಿನಿಮಾದಲ್ಲಿ ಅಭಿನಯಿಸಿದ್ದೆ, ಈ ಚಿತ್ರದಲ್ಲಿ ನಾಯಕ ಅರುಣ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಪ್ರೇಯಸಿ ಕಾವ್ಯಳ ಹುಡುಕಾಟದಲ್ಲಿದ್ದ ನನಗೆ ಕೊನೆಗೂ ಕಾವ್ಯ ಸಿಗುತ್ತಾಳಾ? ಇಲ್ವಾ ಎನ್ನುವುದೇ ಅಮರಪ್ರೇಮಿ ಅರುಣ್ ಚಿತ್ರದ ಕಥಹಂದರ ಎಂದು ಹೇಳಿದರು. ನಾಯಕಿ ದೀಪಿಕಾ ಆರಾಧ್ಯ, ಧರ್ಮಣ್ಣ ಕಡೂರು, ಕ್ರಿತಿ ಭಟ್, ರಂಜಿತ ಪುಟ್ಟಸ್ವಾಮಿ ಹಾಗೂ ಹಿರಿಯನಟಿ ರಾಧಾ ರಾಮಚಂದ್ರ ಇವರೆಲ್ಲ ತಂತಮ್ಮ ಪಾತ್ರಗಳ ಬಗ್ಗೆ ಚಿಕ್ಕದಾಗಿ ಮಾತನಾಡಿದರು. ಈ ಚಿತ್ರದ ಆರು ಹಾಡುಗಳಿಗೆ ಯೋಗರಾಜ್ ಭಟ್, ಜಯಂತ ಕಾಯ್ಕಿಣಿ, ಪ್ರವೀಣ್‌ಕುಮಾರ್ ಸಾಹಿತ್ಯ ಬರೆದಿದ್ದಾರೆ ಎಂದು ಸಂಗೀತ ನಿರ್ದೇಶಕ ಕಿರಣ್ ರವೀಂದ್ರನಾಥ್ ಹೇಳಿದರು, ಬಳ್ಳಾರಿ ಸೊಗಡಿನ ಭಾಷೆಯ ಚಿತ್ರಕ್ಕೆ ಬಳ್ಳಾರಿ ಸೀಮೆಯಲ್ಲಿಯೇ ಚಿತ್ರೀಕರಣ ನಡೆದಿರುವುದು ವಿಶೇಷ,

ನಾಸ್ತಿಕನಿಗೆ ದೈವ 'ದರ್ಶನ'



ದೇವರು, ದೈವದ ಬಗ್ಗೆ ನಂಬಿಕೆಯಿಲ್ಲದ ಯುವಕನೊಬ್ಬನಿಗೆ ಆ ದೈವವೇ ರಕ್ಷಕನಾಗಿ ನಿಂತ ಕಥೆ ಒಳಗೊಂಡ ಚಿತ್ರ ದರ್ಶನ. ನಿತೀಶ್ ವಿನಯ್‌ರಾಜ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಕಿರುಚಿತ್ರವನ್ನು ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರ ಪುತ್ರ ಅರ್ಜುನ್ ಬಂಗಾರಪ್ಪ ನಿರ್ಮಾಣ ಮಾಡಿದ್ದಾರೆ. ಇವರ ಗೆಳೆಯ ನಿತೀಶ್ ವಿನಯ್‌ರಾಜ್ ದರ್ಶನ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಈ ಕಿರುಚಿತ್ರ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು,


ಜ್ಯೋತಿಷಿಯೊಬ್ಬರನ್ನು ಕಾಣಲು ಬೆಳಗಿನ ಜಾವ ಅದೂ ದಟ್ಟಕಾಡಿನ ಮಧ್ಯೆ ಯುವಕನೊಬ್ಬ ಬೈಕ್‌ನಲ್ಲಿ ಸಾಗುವಾಗ ಕಾಡುಗಳ್ಳರು ಈತನನ್ನು ಅಡ್ಡಗಟ್ಟುತ್ತಾರೆ. ಆಗ ಅಪರಿಚಿತ ವ್ಯಕ್ತಿಯೊಬ್ಬ ಬಂದು ಈತನನ್ನು ಕಾಪಾಡಿ, ದೇವಸ್ಥಾನಕ್ಕೆ ಬಾ ಎಂದು ಕರೆದುಕೊಂಡು ಹೋಗುತ್ತಾರೆ. ಮಾರನೇ ದಿವಸ ಗೆಳೆಯನೊಂದಿಗೆ ಅದೇ ಸ್ಥಳಕ್ಕೆ ಆತ ಭೇಟಿ ನೀಡಿದಾಗ ಅ ವ್ಯಕ್ತಿ ಇರುವುದಿಲ್ಲ. ತನ್ನನ್ನು ಕಳ್ಳರಿಂದ ಕಾಪಾಡಿದ್ದು ಆ ಮಂಜುನಾಥನೇ ಅಂತ ಆತನಿಗೆ ಗೊತ್ತಾಗಿ ಶಿವನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾನೆ, ಆದರೆ ಒಬ್ಬ ನಾಸ್ತಿಕನಿಗೆ ಆ ದೇವರು ಏಕೆ ಸಹಾಯ ಮಾಡುತ್ತಾನೆಂದು ತಿಳಿದುಕೊಳ್ಳಬೇಕೆಂದರೆ ಪೂರ್ತಿ ಚಿತ್ರವನ್ನು ವೀಕ್ಷಿಸಬೇಕು.

ಪ್ರದರ್ಶನದ ನಂತರ ಮಾತನಾಡಿದ ನಿರ್ದೇಶಕ ನಿತೀಶ್, ನಾನು ಅರ್ಜುನ್ ಇಬ್ಬರು ಇಂಜಿನಿಯರಿಂಗ್ ಸ್ನೇಹಿತರು. ನಾವಿಬ್ಬರೂ ಸೇರಿ ಒಂದು ಸಿನಿಮಾ ಮಾಡಬೇಕೆಂದಾಗ ಈ ಥಾಟ್ ಬಂತು, ದೇವರನ್ನು ನಂಬದಿದ್ದರೂ, ಒಳ್ಳೆಯ ಕೆಲಸ ಮಾಡುವವರಿಗೆ ಆ ದೇವರು ಯಾವುದೋ ರೂಪದಲ್ಲಿ ಬಂದು ಕಾಪಾಡುತ್ತಾನೆ ಎಂದು ಈ ಚಿತ್ರದ ಮೂಲಕ ತೋರಿಸಿದ್ದೇವೆ, ಈಗಾಗಲೇ ನಮ್ಮ ಚಿತ್ರ ದರ್ಶನ ಪುಣೆ, ಮುಂಬೈ, ಔರಂಗಬಾದ್ ಚಿತ್ರೋತ್ಸವಗಳಲ್ಲಿ ಭಾಗವಹಿಸಿ ಪ್ರಶಸ್ತಿ ಗಳಿಸಿದೆ ಎಂದು ಹೇಳಿದರು. ಸಹೋದರ ಅರ್ಜುನ್ ಪರವಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಲಾವಣ್ಯ ಬಂಗಾರಪ್ಪ ಮಾತನಾಡುತ್ತ, ನಮ್ಮ ತಂದೆ ಕೂಡ ಸಿನಿಮಾ ಉದ್ಯಮದಲ್ಲಿ ತೊಡಗಿಕೊಂಡಿದ್ದವರು. ಈಗ ನಮ್ಮಣ್ಣ ಕೂಡ ಅದನ್ನೆ ಮುಂದುವರೆಸಿಕೊಂಡು ಹೋಗುತ್ತಿದ್ದಾನೆ. ಮುಂದೆ ಚಲನಚಿತ್ರದಲ್ಲಿ ನಟಿಸಲು ಆತ ತಯಾರಿ ಮಾಡಿಕೊಳ್ಳುತ್ತಿದ್ದಾನೆ. ಅದರ ಪೂರ್ವಸಿದ್ದತೆಗಾಗಿ ಈ ಕಿರುಚಿತ್ರವನ್ನು ನಿರ್ಮಿಸಿದ್ದಾನೆ ಎಂದು ಹೇಳಿದರು. ದರ್ಶನ ಕಿರುಚಿತ್ರದ ತಾರಾಗಣದಲ್ಲಿ ಶ್ಲೋಕ್, ಶ್ರೀಧನ್, ಚೇತನ್.ಎಸ್. ಮನೋಜ್‌ಗೌಡ, ದತ್ತಣ್ಣ, ಸಾಯಿ ಸುದರ್ಶನ್, ಗಗನ್ ಗೌಡ ಅಭಿನಯಿಸಿದ್ದಾರೆ. ಹರ್ಷವರ್ಧನ್ ರಾಜ್ ಅವರ ಸಂಗೀತ, ಹರ್ಷಿತ್.ಬಿ.ಗೌಡ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಸಿನಿಪದಬಂಧ-566



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.ದ್ರೋಣಾಚಾರ್ಯರ ಪ್ರೀತಿಯ ಮಗ ತೆರೆಗೆ ಬರಲು ತವಕದಲ್ಲಿದ್ದಾನೆ 4
3.ಕವಿತೆ ಬರೆದವನು 2
5.ಶಿವಣ್ಣ "ರಾಕ್ಷಸ" 3
7.ಬಂಜೆಯ ತೊಟ್ಟಿಲು ಕಥೆ ಆಧರಿಸಿರುವ ಚಿತ್ರ 2
8.ಕಠಾರಿವೀರನೊಂದಿಗೆ ಬಂದವಳು 6
10.ಹೊವೊಂದರಲ್ಲಿ ಚಿನ್ನ ಮತ್ತು ಆಗಸವಿದೆ 6
12.ವಿಷ್ಣುವರ್ಧನ್ – ಖುಷ್ಬೂ ಅಭಿನಯದ ಚಿತ್ರ 2
13.ರಣಚಂಡಿ ಅವತಾರ ಎತ್ತಿದವಳು 2
15.ಕುಮಾರ್ ಗೋವಿಂದ್ – ಸುಧಾರಾಣಿಯ ಪ್ರೀತಿ ಮಿಲನಗೊಂಡಿದೆ 7
18._ _ _ _ _ _ ಮಂದಿರ ಸುಂದರಿ ಭುವನ ಮನೋಹರಿ….." 6
19.ಕುಮಾರ್ ಬಂಗಾರಪ್ಪ ಅಭಿನಯದಲ್ಲಿ ಕುದುರೆಯ ಬಲಿ ಅನುಸರಣೆಯಾಗಿದೆ 4

ಮೇಲಿನಿಂದ ಕೆಳಕ್ಕೆ

1.ಅಂಬರೀಷ್ – ಸುಮಲತಾ ಅಭಿನಯದಲ್ಲಿ ವೇಷ ಬದಲಾಯಿಸಿದವನು 7
2." _ _ _ _ _ _ ಒಂದಾದರೆ ಬಾಳೇ ಹೊನ್ನಿನ ತಾವರೆ…. " 6
4.ಟೈಗರ್ ಪುತ್ರನಲ್ಲಿ ಇರುವ ತಮಾಷೆ 3
5.ರಮೇಶ್ – ಸುಧಾರಾಣಿಯ "ರಾಜಶುಕ" 4
6.ಆಕಾಶ್ ಚಿತ್ರದ ನಾಯಕಿ 2
9.ಶಂಕರ್‌ನಾಗ್ – ಜರೀನಾ ವಾಹಬ್ ಅಭಿನಯದ ಚಿತ್ರ 7
11.ಶಿವರಾಜ್ ಕುಮಾರ್ ಯುದ್ಧಕ್ಕಿಳಿದ ಭೂಮಿ 4
14.ಸೇಡು ತೀರಿಸಿಕೊಂಡವನಿಗೆ ಮಾತಿಲ್ಲ 2
15.,ಎರಡಲ್ಲದ್ದು, ಒಂದೇ ಆಗಿರುವುದು ಇದುವೇ ಅಜಯ್‌ರಾವ್ ಸಿದ್ಧಾಂತ! 3
16.ಶಂಕರ್ ನಾಗ್ – ಸುಮಲತಾ ಅಭಿನಯಕ್ಕೆ ದಿನೇಶ್‌ಬಾಬು ನಿರ್ದೇಶಕ 4
17.ವಿಕ್ರಂ "ಸೈ" ಎನಿಸಿಕೊಂಡಿದ್ದಾನೆ 3


ಸಿನಿ ಪದಬಂಧ 565ರ ಉತ್ತರ

ಸು	ಪ್ರ	ಭಾ	ತ		ರ	ವಿ		ನ	ರ್ಮ	ದಾ
ಮ			ಲ್ಲೆ			ರ		ವ		ದಾ
ನ್	ಗ		ನ	ಮ್ಮ	ರ	ಹ	ಮ್ಮೀ	ರ		
ರಂ			ನ್					ಸ		ಚೈ
ಗ		ರಾ	ಮ	ಶ್ಯಾ	ಮ	ಭಾ	ಮ			ತ್ರ
ನಾ	ರಿ		ಗ				ಹಾ		ನಂ	ದ
ಥ್					ಸೂ		ಕಾ			ಪ್ರೇ
		ಮ	ದ	ಕ	ರಿ	ನಾ	ಯ	ಕ		ಮಾ
ಮಾ		ದ						ರಿ		ಐ
ಲಾ	ಯ	ರ್	ಮ	ಗ	ಳು		ಅ	ನಾ	ಕ್ಷ	ಲಿ
ರ								ಗ		

ವಿಜೇತರು: ಜಿ.ರಾಜೇಶ್ವರಿ, ಚಾಮರಾಜಪುರಂ, ಜಯಲಕ್ಷ್ಮಿವಿಳಾಸ ರಸ್ತೆ, ಮೈಸೂರು.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಛಲವಿದ್ದರೆ ಯಾವುದೂ ಅಸಾಧ್ಯವಲ್ಲ



ಈ ಹಿಂದೆ ಯುದ್ಧ ಮತ್ತು ಸ್ವಾತಂತ್ರ ಚಿತ್ರದಲ್ಲಿ ನಟಿಸಿದ್ದ ನಟಿ ವಿದ್ಯಾ, ಬಹಳ ದಿನಗಳ ನಂತರ 'ಬೇಬೋ' ಎಂಬ ಚಿತ್ರದಲ್ಲಿ ನಾಯಕಿಯಾಗಿ ಬಣ್ಣ ಹಚ್ಚುತ್ತಿದ್ದಾರೆ. ಇತ್ತೀಚಿಗೆ ಆ ಚಿತ್ರದ ಮುಹೂರ್ತ ನೆರವೇರಿತು. ಬೇಬೋ ಚಿತ್ರಕ್ಕೆ 'ಆದ್ರೆ ಇವ್ಳು ಕರೀನಾ ಅಲ್ಲ' ಅಡಿಬರಹವಿದೆ. ಬಾಲಿವುಡ್ ನಟಿ ಕರೀನಾಕಪೂರ್‌ರನ್ನು ಅಭಿಮಾನಿಗಳು ಪ್ರೀತಿಯಿಂದ ಬೇಬೋ ಎಂದು ಕರೆಯುತ್ತಾರೆ. ಈ ಚಿತ್ರದ ನಾಯಕಿ ಮಹಾಲಕ್ಷ್ಮಿ ಕೂಡ ಪುನೀತ್ ರಾಜಕುಮಾರ್ ಮತ್ತು ಕರೀನಾ ಅವರ ದೊಡ್ಡ ಅಭಿಮಾನಿ. ನಾನೂ ಸಹ ಕರೀನಾ ಕಪೂರ್ ಥರ ಆಗಬೇಕೆಂದು ಕನಸು ಕಾಣುತ್ತಿರುತ್ತಾಳೆ. ಹಾಗಾಗಿ, ಗೆಳತಿಯರು ಆಕೆಯನ್ನು ಬೇಬೋ ಎಂದೇ ಕರೆಯುತ್ತಿರುತ್ತಾರೆ.

ಜಂಬು ಹರಿಪ್ರಸಾದ್ ಅವರ ನಿರ್ದೇಶನದ ಈ ಚಿತ್ರವನ್ನು ಸಂತೋಷ್ ವಿಜಯ್ ಮತ್ತು ಸುಪ್ರೀತ್ ವಿಜಯ್ ನಿರ್ಮಿಸುತ್ತಿದ್ದಾರೆ. ವಿ.ಮನೋಹರ್ ಸಂಗೀತ, ಸುರೇಶ್ ಚಿಕ್ಕಣ್ಣ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಸಿನಿಮಾ ಕುರಿತಂತೆ ನಾಯಕಿ ವಿದ್ಯಾ ಮಾತನಾಡುತ್ತ ಯಾರಾದ್ರೂ ದಪ್ಪಗಿದ್ದರೆ, ಅವರನ್ನು ದೂರವಿಡುವ ಸಮಾಜ, ಅವರಿಂದ ಏನೂ ಆಗಲ್ಲ ಎಂದು ನಿರ್ಧರಿಸುತ್ತೆ, ಮನಸ್ಸು ಮಾಡಿದರೆ ಹೆಚ್ಚು ತೂಕವಿರುವವರೂ ಸಹ ದೊಡ್ಡ ಸಾಧನೆ ಮಾಡಬಲ್ಲರು ಎಂಬುದನ್ನು ಈ ಚಿತ್ರದ ಮೂಲಕ ತೋರಿಸುತ್ತಿದ್ದೇನೆ. ನನ್ನ ತಾಯಿಯಾಗಿ ರೇಖಾದಾಸ್ ಅಭಿನಯಿಸಿದ್ದು, ರಾಧಾ ರಾಮಚಂದ್ರ ಆಧುನಿಕ ಅಜ್ಜಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಅನಿಲ್ ಮತ್ತು ಸೂರ್ಯವರ್ಧನ್ ನಾಯಕರಾಗಿ ನಟಿಸುತ್ತಿದ್ದಾರೆ ಎಂದರು.

ನಿರ್ದೇಶಕ ಜಯಹರಿಪ್ರಸಾದ್ ಮಾತನಾಡಿ, ಮನಸು ಮಾಡಿದರೆ ಧಡೂತಿ ದೇಹ ಇರುವ ಯುವತಿಯೂ ಸಹ ನೃತ್ಯದಲ್ಲಿ ದೊಡ್ಡ ಸಾಧನೆ ಮಾಡಬಹುದು, ಸತತ ಪ್ರಯತ್ನ ಮಾಡಿದರೆ, ಮನುಷ್ಯನಿಗೆ ಯಾವುದೂ ಕೂಡ ಅಸಾಧ್ಯವಲ್ಲ ಎಂಬ ಸಂದೇಶವನ್ನು ಈ ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಿದ್ದೇವೆ ಎಂದರು.

ನಟಿ ರೇಖಾದಾಸ್ ಮಾತನಾಡಿ, ನಾನು ಮತ್ತು ವಿದ್ಯಾ ಈ ಹಿಂದೆ ನಾಗಾಭರಣ ಎಂಬ ಚಿತ್ರದಲ್ಲಿ ಒಟ್ಟಿಗೆ ನಟಿಸಿದ್ದೆವು. ಈ ಚಿತ್ರದಲ್ಲಿ ಅವರ ತಾಯಿಯಾಗಿ ಕಾಣಿಸಿಕೊಳ್ಳುತ್ತಿದ್ದು, ತನ್ನ ಮಗಳು ಯಾರಿಗೇನೂ ಕಡಿಮೆ ಇಲ್ಲ ಎಂದು ಜಗತ್ತಿಗೆ ಸಾರುವ, ದಪ್ಪಗಿರೋ ಮಗಳಲ್ಲಿ ನೀನು ಖಂಡಿತ ಸಾಧಿಸುತ್ತೀಯ ಎಂಬ ಆತ್ಮವಿಶ್ವಾಸ ತುಂಬುವ ತಾಯಿ ಪಾತ್ರ ನನ್ನದು ಎಂದರು. ಬೇಬೋ ಚಿತ್ರಕ್ಕೆ ಬೆಂಗಳೂರಿನಲ್ಲೇ ಬಹುತೇಕ ಚಿತ್ರೀಕರಣ ನಡೆಯಲಿದ್ದು, ಚಿಕ್ಕಮಗಳೂರಿನಲ್ಲಿ ಹಾಡೊಂದನ್ನು ಚಿತ್ರೀಕರಿಸುವ ಯೋಜನೆಯಿದೆ,

ಏ.9 ಶ್ರೀಕಂಠೇಶ್ವರ ದೇವಾಲಯದ ಪಂಚ ಮಹಾರಥೋತ್ಸವ, 11ಕ್ಕೆ ತೆಪ್ಪೋತ್ಸವ

ಪಂಚ ಮಹಾರಥೋತ್ಸವಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಿ

ಅಧಿಕಾರಿಗಳಿಗೆ ಶಾಸಕ ದರ್ಶನ್ ಸೂಚನೆ


ಪಂಚ ಮಹಾರಥೋತ್ಸವ ಪ್ರಯುಕ್ತ ಪೂರ್ವಭಾವಿ ಸಭೆ ನಡೆಯಿತು.

ನಂಜನಗೂಡು, ಫೆ.27– ಏ.9ರಂದು ಶ್ರೀಕಂಠೇಶ್ವರ ಸ್ವಾಮಿಯವರ ಪಂಚ ಮಹಾರಥೋತ್ಸವ ಹಾಗೂ ಏ.11 ರಂದು ತೆಪ್ಪೋತ್ಸವ ನಡೆಯಲಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಶಾಸಕ ದರ್ಶನ್ ಸೂಚನೆ ನೀಡಿದರು.

ಇಲ್ಲಿನ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದಲ್ಲಿ ಪಂಚ ಮಹಾರಥೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಏ.9ರಂದು ನಡೆಯುವ ಪಂಚ ಮಹಾರಥೋತ್ಸವಕ್ಕೆ ಲಕ್ಷಾಂತರ ಜನರು ಆಗಮಿಸುವುದರಿಂದ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು. ಸಿ.ಸಿ ಟಿವಿ ಕ್ಯಾಮರಾ ಅಳವಡಿಸಬೇಕು. ತಾತ್ಕಾಲಿಕ ವಾಚ್ ಟವರ್‌ಗಳ ನಿರ್ಮಾಣ ಮಾಡಬೇಕು. ಸುಗಮ ವಾಹನ ಸಂಚಾರಕ್ಕೆ ಬ್ಯಾರಿಕೇಡ್ ವ್ಯವಸ್ಥೆ, ಮಾಹಿತಿ ಫಲಕಗಳು ಹಾಗೂ ಸ್ವಾಗತ ಕಮಾನು ಅಳವಡಿಕೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಥೋತ್ಸವದಂದು ರಥಗಳು ಚಲಿಸುವ ರಸ್ತೆಯಲ್ಲಿ ಅಡ್ಡ ಇರುವ ವಿದ್ಯುತ್ ತಂತಿಗಳನ್ನು ತೆಗೆದು, ರಥೋತ್ಸವ ಮುಗಿದ ನಂತರ ಮತ್ತೆ ಜೋಡಣೆ ಮಾಡಬೇಕು. ರಥೋತ್ಸವ ಮತ್ತು ತೆಪ್ಪೋತ್ಸವ ದಿನಗಳಂದು ನಿರಂತರ ವಿದ್ಯುತ್ ಪೂರೈಕೆ ಮಾಡುವಂತೆ ಚೆಸ್ಕಾಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಥೋತ್ಸವ ಪೂರ್ವಭಾವಿಯಾಗಿ 5 ರಥಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ದುರಸ್ತಿ ಇದ್ದಲ್ಲಿ ವರದಿ ನೀಡಬೇಕು ಹಾಗೂ ರಥ ಎಳೆಯಲು ಯೋಗ್ಯವಾಗಿರುವ ಬಗ್ಗೆ ದೃಢೀಕರಣ ನೀಡಬೇಕು. ರಥ ಚಲಿಸುವ ರಸ್ತೆಗಳಲ್ಲಿ ಹಳ್ಳ ದಿಣ್ಣೆಗಳು ಇದ್ದಲ್ಲಿ ಸಮತಟ್ಟು ಮಾಡಬೇಕು ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ರಥೋತ್ಸವ ಪ್ರಯುಕ್ತ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ಸಾಂಕ್ರಾಮಿಕ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಸುಸಜ್ಜಿತ ಆಂಬುಲೆನ್ಸ್ ವ್ಯವಸ್ಥೆ ಮಾಡಿಕೊಳ್ಳಬೇಕು. ತೆಪ್ಪೋತ್ಸವ ದಿನದಂದು ಕಪಿಲಾ ನದಿ ತೀರದಲ್ಲಿ ಭಕ್ತರ ಸುರಕ್ಷತಾ ದೃಷ್ಟಿಯಿಂದ ಮುಳುಗು ತಜ್ಞರೊಂದಿಗೆ ಬೋಟ್‌ಗಳ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ವಾಹನಗಳ ನಿಲುಗಡೆಗೆ ಹಾಗೂ ಸುಗಮ ಸಂಚಾರಕ್ಕೆ ತೊಂದರೆ ಆಗದಂತೆ ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ರಥೋತ್ಸವಕ್ಕೆ ಬರುವ ಜನಸಂಖ್ಯೆ ಬಗ್ಗೆ ಅರಿವು ಇರಬೇಕು. ಕುಡಿಯುವ ನೀರಿನ ವ್ಯವಸ್ಥೆ, ನೆರಳಿನ ವ್ಯವಸ್ಥೆ ಮಾಡಬೇಕು. ಒಂದು ಇಲಾಖೆಯವರು ಇನ್ನೊಂದು ಇಲಾಖೆ ಮೇಲೆ ಹೇಳುವುದನ್ನು ಬಿಡಿ. ಎಲ್ಲರೂ ಒಟ್ಟುಗೂಡಿ ರಥೋತ್ಸವಕ್ಕೆ ಅದ್ಧೂರಿ ಸಿದ್ಧತೆ ಮಾಡಿಕೊಳ್ಳಿ. ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಜಿಲ್ಲಾಡಳಿತ ವತಿಯಿಂದ ನೀಡಲಾಗುವುದು. ಕರ್ತವ್ಯ ಲೋಪ ಎಸಗುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ರಥೋತ್ಸವ ದಿನದಂದು ಸಂಘ ಸಂಸ್ಥೆಗಳು ಉಚಿತವಾಗಿ ನೀಡುವ ಪ್ರಸಾದ ವಿತರಣೆಗೆ ಅನುಮತಿ ಪಡೆಯಬೇಕು. ಪ್ರಸಾದ ವಿತರಣೆಗೆ ಯೋಗ್ಯವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಭಕ್ತರ ಸೌಕರ್ಯಕ್ಕಾಗಿ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಬೇಕು. ತಾತ್ಕಾಲಿಕ ಮೊಬೈಲ್ ಟಾಯ್ಲೆಟ್ ವ್ಯವಸ್ಥೆ ಮಾಡಬೇಕು ಎಂದು ತಿಳಿಸಿದರು. ಸಭೆಯಲ್ಲಿ ನಗರಸಭಾಧ್ಯಕ್ಷ ಸ್ವಾಮಿ, ತಹಸೀಲ್ದಾರ್ ಶಿವಕುಮಾರ್ ಕಾಸನೂರು, ಇಓ ಜಗದೀಶ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಶ್ರೀರಾಂಪುರ, ಶಂಕರಪುರ, ಗೋಳೂರು, ದೇವರಸನಹಳ್ಳಿ, ಗೀಕಳ್ಳಿ, ನಂಜನಗೂಡು ಕಸಬಾ ಮತ್ತು ಮುಳ್ಳೂರು ಗ್ರಾಮಗಳ ಮುಖ್ಯಸ್ಥರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಹ್ಯಾಕನೂರು ಡೈರಿಗೆ ಕುಮಾರ್ ಅಧ್ಯಕ್ಷ, ಜಯಮ್ಮ ಉಪಾಧ್ಯಕ್ಷೆ


ಅಧ್ಯಕ್ಷರಾಗಿ ಹೆಚ್.ಎಸ್.ಕುಮಾರ್, ಉಪಾಧ್ಯಕ್ಷೆಯಾಗಿ ಜಯಮ್ಮ ಆಯ್ಕೆಯಾದರು.

ತಿ.ನರಸೀಪುರ, ಫೆ.27– ತಾಲೂಕಿನ ಹ್ಯಾಕನೂರು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ನಾಮ ನಿರ್ದೇಶಿತ ಸದಸ್ಯ ಹೆಚ್.ಎಸ್. ಕುಮಾರ್ ಹಾಗೂ ಉಪಾಧ್ಯಕ್ಷೆಯಾಗಿ ಜಯಮ್ಮ ಅವಿರೋಧವಾಗಿ ಆಯ್ಕೆಯಾದರು.

ನಿರ್ದೇಶಕರ ಆಯ್ಕೆಗಾಗಿ ಫೆ.16ರಂದು ಚುನಾವಣೆ ನಡೆದು 9 ನಿರ್ದೇಶಕರು ಹಾಗೂ ಓರ್ವ ನಾಮನಿರ್ದೇಶಿತ ಸದಸ್ಯರ ಅವಿರೋಧ ಆಯ್ಕೆ ನಡೆದಿತ್ತು. ಒಟ್ಟು 12 ನಿರ್ದೇಶಕರ ಬಲದ ಸಹಕಾರ ಸಂಘ ಹಿಂದುಳಿದ ವರ್ಗ ಪ್ರವರ್ಗ 'ಎ' ಹಾಗೂ ಪ.ಪಂಗಡಕ್ಕೆ ಮೀಸಲಾದ ಸ್ಥಾನಕ್ಕೆ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಎರಡು ಸ್ಥಾನಕ್ಕೆ ಆಯ್ಕೆ ನಡೆದಿರಲಿಲ್ಲ. ಈ ಹಿನ್ನೆಲೆಯಲ್ಲಿ ಗುರುವಾರ ಸಹಕಾರ ಸಂಘದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಕ್ರಮವಾಗಿ ಹೆಚ್.ಎಸ್.ಕುಮಾರ್ ಹಾಗೂ ಜಯಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಓ ಹಸೀನಾ ಪ್ರಕಟಿಸಿದರು.

ನಿರ್ದೇಶಕರಾದ ಮಲ್ಲೇಶ್, ಶಿವಮಲ್ಲಪ್ಪ, ಮಲ್ಲಿಕಾರ್ಜುನಸ್ವಾಮಿ, ಬಸವರಾಜು, ಬಸವಯ್ಯ, ಗೌರಮ್ಮಣಿ, ಪುಟ್ಟಮ್ಮ ಹಾಗೂ ಶೇಖರಪ್ಪ ಚುನಾವಣೆಯಲ್ಲಿ ಹಾಜರಿದ್ದು ಸಹಕಾರ ಸಂಘದ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷ ಹೆಚ್.ಎಸ್.ಕುಮಾರ್ ಮಾತನಾಡಿ, ಹೈನುಗಾರಿಕೆಯಿಂದ ರೈತರು ನೆಮ್ಮದಿ ಜೀವನ ನಡೆಸಬಹುದು. ದಿನಕ್ಕೊಮ್ಮೆ ಸಂಘಕ್ಕೆ ಹಾಲು ಸರಬರಾಜು ಮಾಡಿ ರೈತರು ಹಣ ಪಡೆಯಬಹುದು. ಆದ್ದರಿಂದ ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತೊಡಗುವ ಮೂಲಕ ಆರ್ಥಿಕವಾಗಿ ಸಬಲರಾಗಬಹುದು ಎಂದು ಸಲಹೆ ನೀಡಿದರು.

ನನ್ನ ಅಧಿಕಾರಾವಧಿಯಲ್ಲಿ ಸಂಘ ಅಭಿವೃದ್ಧಿಗೊಳಿಸುವ ಜೊತೆಗೆ ರೈತರಿಗೆ ಸಿಗುವ ಸೌಲಭ್ಯಗಳನ್ನು ಒದಗಿಸುತ್ತೇನೆ. ಎಲ್ಲಾ ನಿರ್ದೇಶಕರ ಸಹಕಾರ ಪಡೆದು ಉತ್ತಮ ಆಡಳಿತ ನಡೆಸಲು ಮುಂದಾಗುವುದಾಗಿ ಭರವಸೆ ನೀಡಿದರು.

ಈ ವೇಳೆ ಗೌಡ್ರ ಮಹದೇವಪ್ಪ, ರವಿ, ಪುಟ್ಟಬುದ್ದಿ, ಬಸಣ್ಣ, ಮೂಗೂರು ಮಹೇಶ್, ರಾಜಬುದ್ದಿ, ಮಹೇಶ್ ಕುಮಾರ್, ಜಿ.ಹೆಚ್.ಪುಟ್ಟಮಾದಯ್ಯ, ಕೆಂಪರಾಜು, ಪ್ರಕಾಶ್, ನಾಗೇಂದ್ರ ಪ್ರಸಾದ್, ಗ್ರಾಪಂ ಮಾಜಿ ಅಧ್ಯಕ್ಷ ಶಿವಕುಮಾರ್, ಆಟೋ ಮಹೇಶ್, ಮಹದೇವಯ್ಯ, ಗುರುಮೂರ್ತಿ, ರೂಪೇಶ್, ಶಂಕರಪ್ಪ, ಪುಟ್ಟಸ್ವಾಮಿ, ಹೆಚ್.ಎಂ.ಸ್ವಾಮಿ, ಪ್ರಭುಸ್ವಾಮಿ, ಕೆ.ಸಾನ್ವಿ ಸೇರಿದಂತೆ ಇತರರಿದ್ದರು.

ಟಿವಿಎಸ್ ಮೊಪೆಡ್‌ಗೆ ಕ್ಯಾಂಟರ್ ಡಿಕ್ಕಿ; ಪತಿ ಸಾವು, ಪತ್ನಿಗೆ ತೀವ್ರ ಗಾಯ

ನಂಜನಗೂಡು, ಫೆ.27– ಟಿವಿಎಸ್ ಮೊಪೆಡ್‌ಗೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಪತಿ ಸಾವನ್ನಪ್ಪಿ, ಪತ್ನಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ರಾಷ್ಟ್ರೀಯ ಹೆದ್ದಾರಿ 766ರ ತಾಂಡವಪುರ ಸಮೀಪ ಬುಧವಾರ ರಾತ್ರಿ ನಡೆದಿದೆ.


ಚೆನ್ನಪ್ಪ

ನಗರದ ಚೆನ್ನಪ್ಪ ಬಡಾವಣೆ ನಿವಾಸಿ ಚೆನ್ನಪ್ಪ(68) ಮೃತಪಟ್ಟಿದ್ದು, ಸ್ಕೂಟರ್‌ನ ಹಿಂಬದಿ ಕುಳಿತಿದ್ದ ಅವರ ಪತ್ನಿ ಲಕ್ಷ್ಮಮ್ಮ (65) ಗಂಭೀರವಾಗಿ ಗಾಯಗೊಂಡಿದ್ದಾರೆ. ಬುಧವಾರ ರಾತ್ರಿ ಚೆನ್ನಪ್ಪ ಪತ್ನಿ ಲಕ್ಷ್ಮಮ್ಮ ಜೊತೆಗೂಡಿ ತನ್ನ ಟಿವಿಎಸ್ ಮೊಪೆಡ್‌ನಲ್ಲಿ ಮೈಸೂರು ಸಮೀಪದ ಹೊಸಹುಂಡಿಗೆ ತೆರಳಿ ವಾಪಸ್ ಬರುತ್ತಿದ್ದ ವೇಳೆ ರಾತ್ರಿ 8.30ರಲ್ಲಿ ತಾಂಡವಪುರ ಸಮೀಪದ ಪೆಟ್ರೋಲ್ ಬಂಕ್ ಬಳಿ ಎದುರಿನಿಂದ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರ ಗಾಯಗೊಂಡ ಚೆನ್ನಪ್ಪ ಸ್ಥಳದಲ್ಲೇ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ಪತ್ನಿ ಲಕ್ಷ್ಮಮ್ಮ ಅವರನ್ನು ಸ್ಥಳೀಯರು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಈ ಸಂಬಂಧ ಮೃತರ ಪುತ್ರ ನೀಡಿರುವ ದೂರನ್ನಾಧರಿಸಿ ನಗರದ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮಕ್ಕಳಿಗೆ ಶಿಕ್ಷಣ ನೀಡಿ, ಅವರನ್ನೇ ಆಸ್ತಿ ಮಾಡಿ


ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಹುಣಸೂರು, ಫೆ.27– ಮಕ್ಕಳಿಗೆ ಆಸ್ತಿ ಮಾಡುವ ಬದಲು ಅವರಿಗೆ ಶಿಕ್ಷಣ ನೀಡಿ ಅವರನ್ನೇ ಆಸ್ತಿ ಮಾಡಿ ಎಂದು ತಾಲೂಕು ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷೆ ಮಹದೇವಮ್ಮ ತಿಳಿಸಿದರು.

ತಾಲೂಕಿನ ಹಗರನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ವಿಶ್ವ ಕನ್ನಡ ಮಾತೃ ಭಾಷೆ ದಿನದ ಅಂಗವಾಗಿ 30 ಮಕ್ಕಳಿಗೆ ಮಕ್ಕಳ ಸಾಹಿತ್ಯ ಪರಿಷತ್‌ನಿಂದ ಪರೀಕ್ಷಾ ಸಾಮಗ್ರಿಗಳಾದ ಬರವಣಿಗೆ ಪ್ಯಾಡ್, ಪೆನ್ನು, ಪೆನ್ಸಿಲ್ ವಿತರಿಸಿ ಮಾತನಾಡಿ, ಮಕ್ಕಳ ಭವಿಷ್ಯ ಶಿಕ್ಷಣದಿಂದ ರೂಪಿತವಾದರೆ, ಸಮಾಜದಲ್ಲಿ ಸ್ವಾಸ್ಥ್ಯ ಮೂಡುತ್ತದೆ. ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ ನಾವು ಮಕ್ಕಳಿಗೆ ಮೌಲ್ಯಾಧಾರಿತ ಶಿಕ್ಷಣ ನೀಡಬೇಕು. ಶಿಕ್ಷಣದಿಂದ ಕೇವಲ ಮನುಷ್ಯ ಬದಲಾಗುವುದಿಲ್ಲ. ಇಡೀ ಸಮುದಾಯ ಹಾಗೂ ಸಮಾಜ ಬದಲಾಗುತ್ತದೆ ಎಂದರು.

ಮಕ್ಕಳು ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆ ಪಡೆದರೆ ಸಮಾಜಕ್ಕೆ ಒಳ್ಳೆಯ ಸೇವೆ ನೀಡಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಮಕ್ಕಳ ಸಾಹಿತ್ಯ ಪರಿಷತ್ ಮಕ್ಕಳ ಭವಿಷ್ಯ ರೂಪಿಸಲು ನಿರಂತರವಾಗಿ ಕೆಲಸ ಮಾಡಲಿದೆ ಎಂದರು.

ಈ ಸಂದರ್ಭ ಶಾಲಾ ಮುಖ್ಯೋಪಾಧ್ಯಾಯ ನಾಗೇಶ್, ಶಿಕ್ಷಕರಾದ ಸಂಪತ್ ಕುಮಾರ್, ನಾಗೇಂದ್ರ ಕುಮಾರ್, ಸಂತೋಷ್, ಕಲ್ಪನಾ, ಗಿರಿಜಮ್ಮ ಹಾಗೂ ಗ್ರಾಮಸ್ಥರಾದ ಶಂಕರೇಗೌಡ, ಮಾಲಿನಿ ಉಪಸ್ಥಿತರಿದ್ದರು.

ಗೋಪಾಲಪುರ ನಿವಾಸಿಗಳಿಗೆ ನಿವೇಶನ ಹಂಚಿಕೆ ಮಾಡಿ

ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಆಗ್ರಹ


ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿದರು.

ತಿ.ನರಸೀಪುರ, ಫೆ.27– ಪರಿಶಿಷ್ಟ ಸಮುದಾಯಗಳ ಬಗ್ಗೆ ನಿಜವಾದ ಕಾಳಜಿ ಇದ್ದರೆ, ಸಮಾಜ ಕಲ್ಯಾಣ ಇಲಾಖೆ ಜವಾಬ್ದಾರಿಯ ಅರಿವಿದ್ದರೆ ಮೊದಲು ಮಾದಿಗ ಸಮುದಾಯದ ಗೋಪಾಲಪುರ ನಿವಾಸಿಗಳಿಗೆ ಸರ್ವೆ ನಂ.7ರ ನಿವೇಶನ ಹಂಚಿಕೆ ಮಾಡಿ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಆಗ್ರಹಿಸಿದ್ದಾರೆ.

ಪಟ್ಟಣದ ಗೋಪಾಲಪುರ ಬಳಿ ಹಂಚಿಕೆಯಾಗದ ನಿವೇಶನದಲ್ಲಿ ನಿವಾಸಿಗಳು ಗುಡಿಸಲು ನಿರ್ಮಾಣ ಮಾಡಿಕೊಂಡಿರುವ ಸ್ಥಳದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸತತ 30 ವರ್ಷಗಳಿಂದ ಶಾಸಕ, ಸಚಿವ ಆಗುತ್ತಿರುವ ಡಾ.ಹೆಚ್.ಸಿ. ಮಹದೇವಪ್ಪನವರು 60 ವರ್ಷಗಳಿಂದ ನಿವೇಶನಕ್ಕಾಗಿ ಕಾಯುತ್ತಿರುವ ಜನರಿಗೆ ಹಂಚಿಕೆ ಮಾಡದಿರುವುದು ಅವರು ಸಚಿವರಾಗಿರಲು ಲಾಯಕ್ಕಿಲ್ಲ. ಸಮುದಾಯದ ಬಗ್ಗೆ ಪ್ರಜ್ಞೆ ಇಲ್ಲದ ಅವರು ಮಾದಿಗ ವಿರೋಧಿಯಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಹರಿಹಾಯ್ದರು.

ಕಿರಿದಾದ ಮನೆಗಳಲ್ಲಿ ಏಳೆಂಟು ಕುಟುಂಬ ಇಕ್ಕಟ್ಟಿನಲ್ಲಿ ಜೀವನ ಸಾಗಿಸುತ್ತಿದ್ದಾರೆ. ಹಲವು ದಶಕಗಳ ಹಿಂದೆಯೇ ಸಮಾಜ ಕಲ್ಯಾಣ ಸಚಿವರಾಗಿದ್ದ ಎನ್.ರಾಚಯ್ಯ ಅವರು ಇಲ್ಲಿನ ನಿವಾಸಿಗಳಿಗೆಂದೇ ನಿವೇಶನ ಕಾಯ್ದಿರಿಸಿದ್ದರು. ಈ ಜನರ ಓಟನ್ನು ಪಡೆದು ಅಧಿಕಾರ ಅನುಭವಿಸುತ್ತಿರುವ ಈಗಿನ ಸಚಿವರಿಗೆ ಅದರ ಪರಿವೇ ಇಲ್ಲ. ಸಿಎಂ ಸಿದ್ದರಾಮಯ್ಯ ಅವರು ಕೂಡ ನಿವೇಶನ ಹಂಚಿಕೆ ಮಾಡುವಂತೆ ಆದೇಶಿಸಿದ್ದರೂ, ಅಧಿಕಾರ ಕೊಟ್ಟ ಕೇಂದ್ರ ಸ್ಥಾನವಾಗಿರುವ ಕ್ಷೇತ್ರದಲ್ಲಿ ಕುಳಿತು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿ, ಸರ್ವೆ ನಂ.7ರ ನಿವೇಶನವನ್ನು ಹಂಚಿಕೆ ಮಾಡಬೇಕೆಂಬ ಕಾಳಜಿಯೇ ಇಲ್ಲವೆಂದು ಕಿಡಿಕಾರಿದರು. ಗೋಪಾಲಪುರ ನಿವಾಸಿಗಳು ಪ್ರಾಣ ಬಿಡುತ್ತೇವೆಯೇ ಹೊರತು, ಸಮುದಾಯಕ್ಕೆ ಮೀಸಲಾಗಿದ್ದ ನಿವೇಶನ ಬಿಟ್ಟುಕೊಡುವುದಿಲ್ಲ. ಸಚಿವ ಮಹದೇವಪ್ಪ ರಾಜಕಾರಣದಲ್ಲಿ ನನಗಿಂತಲೂ ಕಿರಿಯರು. ಸುನೀಲ್ ಬೋಸ್ ಅವರನ್ನು ಸಂಸದನನ್ನಾಗಿ ಮಾಡಿಕೊಂಡಿದ್ದೇನೆ. ಚುನಾವಣೆ ವೇಳೆ ದುಡ್ಡು ಕೊಟ್ಟು ವೋಟುಗಳನ್ನು ಪಡೆದುಕೊಂಡು ಗೆದ್ದು ಬಿಡುತ್ತೇನೆ ಎಂಬ ಭ್ರಮೆಯಲ್ಲಿದ್ದಾರೆ. ಅವರ ಮಾದಿಗ ವಿರೋಧಿ ನಡೆ ವಿರುದ್ಧ ಹಳ್ಳಿಯಲ್ಲಿ, ಪಟ್ಟಣ, ನಗರ ಹಾಗೂ ರಾಜ್ಯಾದ್ಯಂತ ಇರುವ ಸಮುದಾಯದ ಕೇರಿಗಳಿಗೆ ಹೋಗಿ ತಿಳಿಸುತ್ತೇವೆ. ಇಂತಹವರನ್ನೇ ಸುತ್ತಲು ಇಟ್ಟುಕೊಂಡಿರುವುದರಿಂದ ಸಿಎಂ ಸಿದ್ದರಾಮಯ್ಯ ಅವರು ಪ್ರಾಸಿಕ್ಯೂಷನ್‌ಗೆ ಒಳಗಾಗಿ ತನಿಖಾ ಸಂಸ್ಥೆಗಳ ಮುಂದೆ ನಿಲ್ಲಬೇಕಾಯಿತು. ಆದ್ದರಿಂದ ಮುಖ್ಯಮಂತ್ರಿಗಳು ಇಂತಹ ಬೇಜವಾಬ್ದಾರಿ ಸಚಿವರನ್ನು ಸಂಪುಟದಿಂದ ಕೈ ಬಿಡಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಯಜಮಾನ್ ರಾಜಣ್ಣ, ಮಹದೇವಯ್ಯ, ಮುಖಂಡರಾದ ವಿಶ್ವನಾಥ್ ಇತರರಿದ್ದರು.

ನ್ಯಾ.ಸದಾಶಿವ ಆಯೋಗ ಪ.ಜಾತಿಯ ಒಳ ಮೀಸಲಾತಿ ವರ್ಗೀಕರಣ ಆಗದಿರುವುದರಿಂದ ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಯನ್ನು ರಾಜ್ಯ ಸರ್ಕಾರ ಕೂಡಲೇ ತಡೆಹಿಡಿಯಬೇಕು. ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಗಳು ಒಳ ಮೀಸಲು ಜಾರಿ ನಿರ್ಧಾರವನ್ನು ಪ್ರಕಟಿಸಬೇಕು. -ಸಿ.ರಮೇಶ್. ಮೇಲ್ಮನೆಯ ಮಾಜಿ ಸದಸ್ಯ

ರಂಗಸಮುದ್ರ ಪಿಎಸಿಎಸ್‌ಗೆ 12 ನಿರ್ದೇಶಕರು ಆಯ್ಕೆ



ತಿ.ನರಸೀಪುರ, ಫೆ.27– ತಾಲೂಕಿನ ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 12 ಸ್ಥಾನಗಳಿಗೆ ಸಿ.ಬಸವೇಗೌಡರ ತಂಡದ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ಸಾಲಗಾರರ ಕ್ಷೇತ್ರದಿಂದ ಸಿ.ಬಸವೇಗೌಡ, ಟಿ.ವಾಸುದೇವ, ಆರ್.ಕಿರಣ್, ಎ.ಎಸ್.ಚಂದ್ರಶೇಖರ್, ಸಿದ್ದರಾಜು, ಮಂಜು, ಗೋಪಾಲ್, ರತ್ನಮ್ಮ, ರೇಖಾ, ಕಲ್ಯಾಣಮ್ಮ, ಜವರಯ್ಯ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ರೇವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ವಿಮಲ್ ಕುಮಾರ್ ಕಾರ್ಯ ನಿರ್ವಹಿಸಿದರು. ಟಿಎಪಿಸಿಎಂಎಸ್ ನಿರ್ದೇಶಕ ಟಿ.ವಾಸುದೇವ ಮಾತನಾಡಿ, ಸಂಘದ ಸಿಇಓ ಮನುರಾಜ್ ಅವರ ನಿಧನದ ನಂತರ ಹೊಸ ಸಿಇಓ ನೇಮಕ ಮಾಡಿಕೊಳ್ಳದೆ ಸಂಘದ ಅಭಿವೃದ್ಧಿಯಲ್ಲಿ ಕುಂಠಿತವಾಗಿದ್ದು, ಕೂಡಲೇ ನೂತನ ಸಿಇಓ ನೇಮಕ ಮಾಡಿಕೊಂಡು ಸಂಘದ ಅಭಿವೃದ್ಧಿಗೆ ಪಕ್ಷಾತೀತವಾಗಿ ಎಲ್ಲಾ ಸದಸ್ಯರು ಸಹಕರಿಸಬೇಕು. ಅಲ್ಲದೇ ರೈತರ ವ್ಯವಸಾಯಕ್ಕೆ ಅಗತ್ಯ ಇರುವ ಬಿತ್ತನೆ ಬೀಜ ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಮಾರಾಟ ಮಾಡುವ ವ್ಯವಸ್ಥೆ ಕೈಗೊಳ್ಳಬೇಕಿದೆ ಎಂದರು.

ಈ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ತುಂಬಲ ಪ್ರಶಾಂತ್ ಬಾಬು, ಆರ್.ಮಂಜುನಾಥ, ಚಿಕ್ಕ ರೇವಣ್ಣ, ಆರ್.ಎಸ್.ರವಿಕುಮಾರ್, ಶೇಖರ್, ಆರ್.ಮಹದೇವ, ಕೆ.ನಾರಾಯಣ, ಜಯರಾಮು, ಮಂಜುನಾಥ ಹೆಗ್ಗಡೆ, ಆರ್.ಸಿ. ರೇವಣ್ಣ, ಮರಿದ್ಯಾವೇಗೌಡ, ಪ್ರಭುಸ್ವಾಮಿ, ಅನಿಲ್, ಹೆಚ್.ಎ.ಮಂಜು, ಪ್ರಸಾದ್, ಬಸವರಾಜು ಸೇರಿದಂತೆ ಇನ್ನಿತರರಿದ್ದರು.

ಶ್ರೀಕಂಠೇಶ್ವರನ ಸನ್ನಿಧಿಗೆ ಹರಿದು ಬಂದ ಭಕ್ತ ಸಾಗರ

● ಸ್ವಾಮಿಗೆ ವಿಶೇಷ ಪೂಜೆ ● ಭಕ್ತರ ಮೆಚ್ಚುಗೆಗೆ ಪಾತ್ರವಾದ ಜಾಗರಣೆ ವಿಶೇಷ ಕಾರ್ಯಕ್ರಮ



ನಂಜನಗೂಡು, ಫೆ.27– ಮಹಾ ಶಿವರಾತ್ರಿ ಅಂಗವಾಗಿ ಬುಧವಾರ ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರನ ಸನ್ನಿಧಿಗೆ ರಾಜ್ಯದ ಮೂಲೆ ಮೂಲೆಯಿಂದಲೂ ಭಕ್ತ ಸಾಗರವೇ ಹರಿದು ಬಂದಿತ್ತು.

ಶಿವರಾತ್ರಿ ಪ್ರಯುಕ್ತ ದೇವರ ದರ್ಶನ ಹಾಗೂ ಜಾಗರಣೆ ಸಲುವಾಗಿ ಮಂಗಳವಾರ ರಾತ್ರಿಯೇ ನಗರಕ್ಕೆ ಆಗಮಿಸಿ ದೇವಾಲಯದ ಕೈಸಾಲೆಗಳಲ್ಲಿ ತಂಗಿದ್ದ ಭಕ್ತರು, ಬುಧವಾರ ಮಹಾಶಿವರಾತ್ರಿ ಜಾಗರಣೆ ಪ್ರಯುಕ್ತ ರಾತ್ರಿಯಿಡೀ ಶಿವನಾಮ ಸ್ಮರಣೆ ಮಾಡುವ ಮೂಲಕ ಜನರು ಭಕ್ತಿ ಸಾಗರದಲ್ಲಿ ಮಿಂದೆದ್ದು ದೇವರ ಕೃಪೆಗೆ ಪಾತ್ರರಾದರು.

ಬುಧವಾರ ಮುಂಜಾನೆ 4.30ರಿಂದಲೇ ಕಪಿಲಾ ನದಿಯಲ್ಲಿ ಮಿಂದು ದೇವರ ದರ್ಶನಕ್ಕಾಗಿ ಸಾಲುಗಟ್ಟಿ ನಿಂತಿದ್ದರು. ಮಹಾ ಶಿವರಾತ್ರಿ ಅಂಗವಾಗಿ ಶ್ರೀಕಂಠೇಶ್ವರ ಸ್ವಾಮಿಗೆ ವಿಶೇಷ ಪೂಜಾ ಕಾರ್ಯಗಳು ಜರುಗಿದವು. ಮುಂಜಾನೆ 5 ಗಂಟೆಗೆ ಉಷಾ ಕಾಲದ ಪೂಜೆಯಲ್ಲಿ ಕ್ಷೀರಾಭಿಷೇಕ, ಪದ್ಯಾಭಿಷೇಕ, ಫಲ ಪಂಚಾಮೃತಾಭಿಷೇಕ, ಮಹಾನ್ಯಾಸಕ ಪೂರ್ವಕವಾಗಿ ಏಕದಶಾವರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶಾಲ್ಯನ್ನ, ಮಹಾ ಮಂಗಳಾರತಿ ನೆರವೇರಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು.

ದೇವಾಲಯದ ಆವರಣದ ಮುಂಭಾಗದಲ್ಲಿ ಭಕ್ತರು ಉರುಳು ಸೇವೆ, ಧೂಪಸೇವೆ, ತುಲಾಭಾರ ಸೇವೆ ನೆರವೇರಿಸಿದರು. ಕಪಿಲಾ ನದಿಯಲ್ಲಿ ದೀಪಗಳನ್ನು ತೇಲಿ ಬಿಟ್ಟು ಹರ್ಷ ವ್ಯಕ್ತಪಡಿಸಿದರಲ್ಲದೆ ದೇವರ ಹುಂಡಿಗೆ ಹಣ, ಬೆಳ್ಳಿ, ಚಿನ್ನದ ಪದಾರ್ಥಗಳನ್ನು ಹಾಕಿ ಹರಕೆ ತೀರಿಸಿದರು.

ನಂತರ ದೇಗುಲದಲ್ಲಿ ಪ್ರಾತಃಕಾಲ, ಸಂಗಮ ಕಾಲ, ಮಧ್ಯಮ ಕಾಲದ ಪೂಜೆಗಳನ್ನು ನೆರವೇರಿಸಿದ ಬಳಿಕ ಸಂಜೆ 6 ಗಂಟೆಗೆ ಮೊದಲ ಜಾವದ ಪೂಜೆ, ರಾತ್ರಿ 9 ಗಂಟೆಗೆ 2ನೇ ಜಾವದ ಪೂಜೆ, ರಾತ್ರಿ 12 ಗಂಟೆಗೆ 3ನೇ ಜಾವದ ಪೂಜೆ ಮತ್ತು 3 ಗಂಟೆಗೆ 4ನೇ ಜಾವದ ಪೂಜಾ ವಿಧಿಗಳು ಸಾಂಗೋಪವಾಗಿ ನಡೆದವು. ಪ್ರತಿ ಜಾವದ ಪೂಜೆಯಲ್ಲೂ ಕೂಡ ಕ್ಷೀರಾಭಿಷೇಕ, ಪದ್ಯಾಭಿಷೇಕ, ಫಲ ಪಂಚಾಮೃತಾಭಿಷೇಕ, ಮಾಹಾನ್ಯಾಸಕ ಪೂರ್ವಕವಾಗಿ ಏಕದಶಾವರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶಾಲ್ಯನ್ನ, ಮಹಾ ಮಂಗಳಾರತಿ ನೆರವೇರಿಸಲಾಯಿತು.

ಬುಧವಾರ ಬೆಳಗ್ಗೆಯಿಂದ ಗುರುವಾರ ಮುಂಜಾನೆವರೆಗೂ ದೇವಾಲಯದ ಬಾಗಿಲು ತೆರದಿದ್ದರಿಂದಾಗಿ ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸಿದ್ದ ಭಕ್ತರು ದೇವರ ದರ್ಶನ ಪಡೆದು ಶ್ರೀಕಂಠೇಶ್ವರನಿಗೆ ಬಿಲ್ವಪತ್ರೆ ಸಮರ್ಪಿಸಿ ದೇವರ ಕೃಪೆಗೆ ಪಾತ್ರರಾಗಿ ಭಾವಪರವಶರಾದರು.

ಶಿವರಾತ್ರಿ ಹಬ್ಬದ ಅಂಗವಾಗಿ ದೇವಾಲಯದ ಒಳಾವರಣ, ಹೊರ ಆವರಣದ ಸುತ್ತಮುತ್ತ ವಿಶೇಷ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ತಳಿರು ತೋರಣಗಳಿಂದ ಹಾಗೂ ವಿದ್ಯುತ್ ದೀಪಾಲಂಕಾರದಿಂದ ದೇವಾಲಯವನ್ನು ಅಲಂಕರಿಸಲಾಗಿತ್ತು.


ದೇವಾಲಯದ ಮುಂಭಾಗ ಶಿವರಾತ್ರಿ ಅಂಗವಾಗಿ ಜಾಗರಣೆ ಪ್ರಯುಕ್ತ ಸರ್ಕಾರದ ವತಿಯಿಂದ ಶಿವರಾತ್ರಿ ಸಂಗೀತ ಜಾಗರಣೆ ಬೃಹತ್ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೆ ಶಾಸಕ ದರ್ಶನ್ ಚಾಲನೆ ನೀಡಿದರು. ಭಕ್ತಿ ಗೀತೆಗಳ ಗಾಯನ, ಶಿವನಾಮ ಸ್ಮರಣೆ ಭಕ್ತರ ಮನಗೆದ್ದವು. ಅಲ್ಲದೆ ಭರತನಾಟ್ಯ, ಜಾನಪದ ಗೀತೆ, ನೃತ್ಯ ರೂಪಕ, ಸಂಗೀತ ಸಂಜೆ ಕಾರ್ಯ ಕ್ರಮಗಳು ನೋಡುಗರ ಕಣ್ಮನ ಸೆಳೆದು. ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದವು.

ದೇವಾಲಯದ ದಾಸೋಹ ಭವನದಲ್ಲಿ ಬೆಳಗ್ಗೆಯಿಂದ ರಾತ್ರಿ 11 ಗಂಟೆವರೆಗೂ ಉಪಹಾರ, ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಅಲ್ಲದೆ ಸೇವಾರ್ಥದಾರರು ಕೇಸರಿಬಾತ್, ಖಾರಾಬಾತ್ ವಿನಿಯೋಗ ಮಾಡಿದರು. ಮುಂಜಾಗ್ರತಾ ಕ್ರಮವಾಗಿ ಸುರಕ್ಷತೆ ದೃಷ್ಟಿಯಿಂದ 250ಕ್ಕೂ ಹೆಚ್ಚಿನ ಪೊಲೀಸರನ್ನು ನಿಯೋಜಿಸಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ದೇವಾಲಯಕ್ಕೆ 100 ರೂ. ವಿಶೇಷ ದರ್ಶನದ ಟಿಕೆಟ್‌ನಿಂದಲೇ ಲಕ್ಷಾಂತರ ರೂ ಆದಾಯ ಬಂದಿದೆ ಎಂದು ದೇವಾಲಯದ ಇಓ ಜಗದೀಶ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಮಹಾಶಿವರಾತ್ರಿ ಅಂಗವಾಗಿ ಶಾಸಕ ದರ್ಶನ್, ಸಂಸದ ಸುನೀಲ್ ಬೋಸ್ ದೇವರ ದರ್ಶನ ಪಡೆದರು.

ಮಲ್ಲಿಕಾರ್ಜುನಸ್ವಾಮಿ ರಥೋತ್ಸವ

ಮಲ್ಕುಂಡಿ, ಫೆ.27– ಸಮೀಪದ ಹುರ ಗ್ರಾಮದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಶ್ರೀಭ್ರಮರಾಂಬ ಮಲ್ಲಿಕಾರ್ಜುನಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಶಾಸಕ ದರ್ಶನ್ ರಥೋತ್ಸವದಲ್ಲಿ ಭಾಗವಹಿಸಿ, ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಮಹಾಶಿವರಾತ್ರಿ ಹಬ್ಬದಂದು ಜನತೆ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿ ಮನಸ್ಸಿಗೆ ಶಾಂತಿ, ನೆಮ್ಮದಿ ಕೊಡುವಂತೆ ಪ್ರಾರ್ಥಿಸುವಂತೆ ತಿಳಿಸಿದ ಅವರು ಗ್ರಾಮದಲ್ಲಿ ಹಬ್ಬ ಆಚರಿಸುವಾಗ ಎಲ್ಲಾ ಜನಾಂಗದವರು ಯಾವುದೇ ಗಲಾಭೆಗೆ ಅವಕಾಶ ಕೊಡದೆ ಒಗ್ಗಟ್ಟಿನಿಂದ ಆಚರಿಸಿ ಎಂದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್ ಸೇರಿದಂತೆ ಗ್ರಾಮಸ್ಥರಿದ್ದರು.


ಮಲ್ಲಿಕಾರ್ಜುನಸ್ವಾಮಿಗೆ ಶಾಸಕ ದರ್ಶನ್ ಪೂಜೆ ಸಲ್ಲಿಸಿದರು.

ಸಂಭ್ರಮದ ಶ್ರೀವೈದ್ಯನಾಥೇಶ್ವರಸ್ವಾಮಿ ಬ್ರಹ್ಮರಥೋತ್ಸವ


ಪಿರಿಯಾಪಟ್ಟಣದಲ್ಲಿ ಶ್ರೀವೈದ್ಯನಾಥೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ನಡೆಯಿತು.

ಪಿರಿಯಾಪಟ್ಟಣ, ಫೆ.27– ಇತಿಹಾಸ ಪ್ರಸಿದ್ಧ ಶ್ರೀವೈದ್ಯನಾಥೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ ಗುರುವಾರ ಸಂಭ್ರಮದಿಂದ ನಡೆಯಿತು. ಪಟ್ಟಣದ ಶ್ರೀವೈದ್ಯನಾಥೇಶ್ವರಸ್ವಾಮಿ ದೇವಾಲಯದಲ್ಲಿ ಕಳೆದ 3 ದಿನಗಳಿಂದ ವಿಶೇಷ ಪೂಜೆ, ಹೋಮಗಳು ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆದವು.

ಬುಧವಾರ ರಾತ್ರಿ ಗಿರಿಜಾ ಕಲ್ಯಾಣೋತ್ಸವ ನೆರವೇರಿತು. ಗುರುವಾರ ಬೆಳಗ್ಗೆ 10.30 ರಿಂದ 11.30 ರೊಳಗೆ ಸಲ್ಲುವ ಮೇಷ ಲಗ್ನದಲ್ಲಿ ಶ್ರೀವೈದ್ಯನಾಥೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ ನೆರವೇರಿತು.

ರಥವನ್ನು ಬಗೆ ಬಗೆಯ ಹೂಗಳಿಂದ ಅಲಂಕಾರಗೊಳಿಸಿ, ಪಾರ್ವತಿ ಸಮೇತ ಶ್ರೀವೈದ್ಯನಾಥೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ, ದೇವಾಲಯದ ಸುತ್ತಲೂ ಪ್ರದಕ್ಷಿಣೆ ಹಾಕಿಸಲಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಭಕ್ತರು ಹಣ್ಣು ಜವನ ಎಸೆದು ತೇರು ಎಳೆಯುವ ಮೂಲಕ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿ ಪುನೀತರಾದರು. ಜಾತ್ರಾ ಮಹೋತ್ಸವದ ಅಂಗವಾಗಿ ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಶ್ರೀಸೋಮೇಶ್ವರಸ್ವಾಮಿ ಕೊಂಡೋತ್ಸವ

ಸರಗೂರು, ಫೆ.27– ಮಹಾ ಶಿವರಾತ್ರಿ ಅಂಗವಾಗಿ ಪಟ್ಟಣದ ಶ್ರೀಸೋಮೇಶ್ವರ ಸ್ವಾಮಿ ದೇವಾಲಯದಲ್ಲಿ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು.


ಭಕ್ತರು ಕೆಂಡದ ಮೇಲೆ ನಡೆದು ಹರಕೆ ತೀರಿಸಿದರು.

ದೇವಾಲಯದಲ್ಲಿ ಮುಂಜಾನೆಯಿಂದಲೇ ಗಣಪತಿ ಹೋಮ, ಪುಣ್ಯಾಹ, ಕಳಸ ಪ್ರತಿಷ್ಠಾಪನೆ, ಬಿಲ್ವಾರ್ಚನೆ, ಶಿವ ಸಹಸ್ರನಾಮ, ಕುಂಕುಮಾರ್ಚನೆ ಸೇರಿದಂತೆ ಪೂಜಾ ಕೈಂಕರ್ಯಗಳು ಜರುಗಿದವು. ಬಳಿಕ ದೇವರನ್ನು ವಿವಿಧ ಹೂಗಳಿಂದ ಅಲಂಕರಿಸಿ ಕಪಿಲಾ ನದಿಗೆ ತೆರಳಿ, ಗಂಗೆ ಪೂಜೆ ನಡೆಸಿ ಉಮಾ ಮಹೇಶ್ವರ ಉತ್ಸವಮೂರ್ತಿಯನ್ನು ಪೂರ್ಣಕುಂಭ ಕಳಸ ದೊಂದಿಗೆ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮಂಗಳವಾದ್ಯ, ಸತ್ತಿಗೆ, ವೀರಗಾಸೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ದೇವಾಲಯ ತಲುಪಿದ ಉತ್ಸವ ಮೂರ್ತಿಯನ್ನು ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ಬಳಿಕ ನಡೆದ ಕೊಂಡೋತ್ಸವದಲ್ಲಿ ಭಕ್ತರು ಕೊಂಡ ಹಾಯ್ದು ಹರಕೆ ತೀರಿಸಿದರು.

ಮೈಸೂರು ಮಿತ್ರ

ಶಿವನಾಮ ಸ್ಮರಣೆಯಲ್ಲಿ ಮುಳುಗೆದ್ದ ಮೈಸೂರು

ಶಿವಾಲಯಗಳಲ್ಲಿ, ಪ್ರತಿಯೊಬ್ಬರ ಮನ-ಮನೆಯಲ್ಲಿ ಹೊಮ್ಮಿತು 'ಓಂ ನಮಃಶಿವಾಯ'

ಮೈಸೂರು, ಫೆ.27(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನ ಜನತೆ ಬುಧವಾರ ಶಿವನಾಮ ಸ್ಮರಣೆಯಲ್ಲಿ ಮಿಂದೆದ್ದರು. ಅರಮನೆಯ ತ್ರಿನೇಶ್ವರ ಸ್ವಾಮಿ ದೇವಾಲಯ ಸೇರಿದಂತೆ ವಿವಿಧೆಡೆ ಯಿರುವ ಶಿವನ ದೇವಾಲಯಗಳಲ್ಲಿ ಜರುಗಿದ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆ ಭಕ್ತರು ಪಾಲ್ಗೊಂಡು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ಮೈಸೂರಿನ ವಿವಿದೆಡೆಯಲ್ಲಿರುವ ಶಿವ, ಮಲೆ ಮಹದೇಶ್ವರ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಬುಧವಾರ ಮುಂಜಾನೆ ಯಿಂದಲೇ ಅಭಿಷೇಕ ಪ್ರಿಯ ಶಿವನಿಗೆ ವಿವಿಧ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ನೆರವೇರಿಸಿ, ಬಣ್ಣ ಬಣ್ಣದ ಹೂವಿನ ಅಲಂಕಾರ ಮಾಡಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಬಹುತೇಕ ಎಲ್ಲಾ ದೇವಾಲಯಗಳಲ್ಲಿ ಬುಧವಾರ ಮುಂಜಾನೆಯಿಂದ ಮಧ್ಯರಾತ್ರಿವರೆಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ಶಿವನ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಚಿನ್ನದ ಕೊಳಗದಲ್ಲಿ ಕಂಗೊಳಿಸಿದ ತ್ರಿನೇಶ್ವರ: ಅರಮನೆ ಆವರಣದಲ್ಲಿರುವ ತ್ರಿನೇಶ್ವರಸ್ವಾಮಿ ದೇವಾಲಯ ದಲ್ಲಿ ಶಿವರಾತ್ರಿ ಹಿನ್ನೆಲೆಯಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಶಿವಲಿಂಗಕ್ಕೆ 11 ಕೆಜಿ ತೂಕದ ಚಿನ್ನದ ಕೊಳಗವನ್ನು ಧರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಾಲಯದ ಅರ್ಚಕ ಸಂತಾನಂ ಹಾಗೂ ಶ್ರೀಹರಿ ನೇತೃತ್ವದಲ್ಲಿ ಶಿವಲಿಂಗಕ್ಕೆ ವಿವಿಧ ಅಭಿಷೇಕ ನೆರವೇರಿಸಿದ ಬಳಿಕ ಮುಂಜಾನೆ ಚಿನ್ನದ ಕೊಳಗ ಧಾರಣೆ ಮಾಡಿ ಅಲಂಕಾರ ಮಾಡಲಾಯಿತು. ಮಂಗಳಾರತಿ ಬೆಳಗಿದ ಬಳಿಕ ರಾಜವಂಶಸ್ಥರ ಹೆಸರಲ್ಲಿ ಪ್ರಥಮ ಪೂಜೆ ಸಲ್ಲಿಸಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ಅರಮನೆಯ ಜಯಮಾರ್ತಾಂಡ, ಬಲರಾಮ, ಕರಿಕಲ್ಲು ತೊಟ್ಟಿ, ವರಹಾ ಗೇಟ್‌ನಿಂದ ಬುಧವಾರ ಮುಂಜಾನೆಯಿಂದಲೇ ಅರಮನೆ ಆವರಣಕ್ಕೆ ಆಗಮಿಸಿದ್ದ ಭಕ್ತರ ದಂಡು ತ್ರಿನೇಶ್ವರಸ್ವಾಮಿ ದೇವಾಲಯ ಮುಂದೆ ಸರದಿ ಸಾಲಿನಲ್ಲಿ ನಿಂತು ಚಿನ್ನದ ಕೊಳಗದಲ್ಲಿ ಕಂಗೊಳಿಸುತ್ತಿದ್ದ ತ್ರಿನೇಶ್ವರಸ್ವಾಮಿಯನ್ನು ಕಣ್ತುಂಬಿ ಕೊಳ್ಳಲು ತವಕಿಸಿದರು. ಶಿವರಾತ್ರಿ ಜಾಗರಣೆ ಪದ್ಧತಿ ಯಿರುವ ಹಿನ್ನೆಲೆಯಲ್ಲಿ ಅರಮನೆ ದೇವಾಲಯಕ್ಕೆ ರಾತ್ರಿಯಿಡೀ ಭಕ್ತರು ಆಗಮಿಸಿ ದರ್ಶನ ಪಡೆದರು.

ಸುಸೂತ್ರವಾಗಿ ದರ್ಶನ ಪಡೆಯಲು ಚಾಮುಂಡೇಶ್ವರಿ ಶ್ರೀ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಹಾಗೂ ಅರಮನೆ ಮಂಡಳಿ ವತಿಯಿಂದ ವಿವಿಧ ವ್ಯವಸ್ಥೆ ಕಲ್ಪಿಸಲಾಗಿತ್ತು. ದರ್ಶನ ಪಡೆದ ಬಳಿಕ ಭಕ್ತರಿಗೆ ಪ್ರಸಾದ ವಿನಿಯೋಗಿಸಲಾಯಿತು.

ತ್ರಿನೇಶ್ವರ ಸ್ವಾಮಿ ದರ್ಶನ ಪಡೆದ ಬಳಿಕ ಭಕ್ತರು ದೇವಾಲಯ ಗರ್ಭಗುಡಿಯ ಹಿಂಭಾಗದಲ್ಲಿರುವ ಶಿವಲಿಂಗಕ್ಕೆ ಬಿಲ್ವಪತ್ರೆ ಸಮರ್ಪಿಸಿ, ಪೂಜೆ ಸಲ್ಲಿಸಿದರು. ರಾಜವಂಶಸ್ಥ, ಸಂಸದ ಯದುವೀರ ಕೃಷ್ಣದತ್ತ ಚಾಮರಾಮ ಒಡೆಯರ್, ಪತ್ನಿ ತ್ರಿಷಿಕಾ ಕುಮಾರಿ ಒಡೆಯರ್, ಪುತ್ರರಾದ ಆದ್ಯವೀರ್ ನರಸಿಂಹರಾಜಒಡೆಯರ್, ಯುಗಾಧ್ಯಕ್ಷ ಕೃಷ್ಣರಾಜ ಒಡೆಯರ್ ಅವರೊಂದಿಗೆ ಆಗಮಿಸಿ ತ್ರಿನೇಶ್ವರಸ್ವಾಮಿ ದರ್ಶನ ಪಡೆದರು.

ಗುರುಕುಲದಲ್ಲಿ ಭಕ್ತರ ಜಂಗುಳಿ: ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿ ಶಿವರಾತ್ರಿ ವಿಶೇಷ ಪೂಜಾ ಮಹೋತ್ಸವ ಜರುಗಿತು. ಗುರುಕುಲದಲ್ಲಿ ಒಂದೇ ಸ್ಥಳದಲ್ಲಿರುವ 108 ಶಿವಲಿಂಗಕ್ಕೆ ಸಾವಿರಾರು ಭಕ್ತರು ಬಿಲ್ವಪತ್ರೆ ಸಮರ್ಪಿಸಿ, ಪೂಜೆ ಸಲ್ಲಿಸಿದರು. ಮುಂಜಾನೆಯಿಂದಲೇ ಗುರುಕುಲಕ್ಕೆ ಭಕ್ತರ ದಂಡು ಆಗಮಿಸಿತು. ಸರಿರಾತ್ರಿವರೆಗೂ ಭಕ್ತರು ಗುರುಕುಲಕ್ಕೆ ಬಂದು ದರ್ಶನ ಪಡೆದರು. ಬಳಿಕ ಸಮೀಪ ದಲ್ಲಿಯೇ ಇರುವ ಕಾಮೇಶ್ವರ, ಕಾಮೇಶ್ವರಿ ದೇವಾಲಯಕ್ಕೂ ಭೇಟಿ ನೀಡಿ ದರ್ಶನ ಪಡೆದರು.

ವಿವಿಧ ದೇವಾಲಯದಲ್ಲಿ ವಿಶೇಷ ಪೂಜೆ: ಮೈಸೂರಿನ ವಿವಿಧ ದೇವಾಲಯಗಳಲ್ಲೂ ಶಿವರಾತ್ರಿ ಪೂಜಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ಅಮೃತೇಶ್ವರ ದೇವಾಲಯ, ಚಂದ್ರಮೌಳೇಶ್ವರ ದೇವಾಲಯ, ನನ್ನೇಶ್ವರ, ಮಹಾಲಿಂಗೇಶ್ವರ, ಮರುಳೇಶ್ವರ, ವಿವಿಧ ಬಡಾವಣೆಯಲ್ಲಿರುವ ಮಲೆ ಮಹದೇಶ್ವರ ದೇವಾಲಯಗಳಲ್ಲಿ ಶಿವರಾತ್ರಿ ವಿಶೇಷ ಪೂಜಾ ಮಹೋತ್ಸವ ಜರುಗಿತು. ದೇವಾಲಯಗಳನ್ನು ಅಲಂಕಾರ ಹಾಗೂ ದೀಪಾಲಂಕಾರ ಮಾಡಲಾಗಿತ್ತು. ಬಹುತೇಕ ಎಲ್ಲಾ ದೇವಾಲಯಗಳಲ್ಲೂ ಭಕ್ತರು ದಿನವಿಡೀ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಸಂಭ್ರಮಿಸಿದರು.

ಕಾಶಿ ವಿಶ್ವನಾಥ ದೇವಾಲಯ: ಮೈಸೂರಿನ ವಿಜಯನಗರದ ಭಾರತೀಯ ವಿದ್ಯಾಭವನ ಮುಂಭಾಗದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ವತಿಯಿಂದ ನಿರ್ಮಿಸಿದ್ದ ವಾರಣಾಸಿಯ 'ಕಾಶಿ ವಿಶ್ವನಾಥ ಮಂದಿರದ ಮಾದರಿ ಪ್ರತಿರೂಪ'ದ ವೀಕ್ಷಣೆಗೆ ಭಕ್ತ ಸಾಗರವೇ ಹರಿದು ಬಂದಿತ್ತು. 150 ಅಡಿ ಉದ್ದ, 50 ಅಡಿ ಎತ್ತರದ ಕಾಶಿ ವಿಶ್ವನಾಥ ಮಂದಿರದ ಮಾದರಿಯನ್ನು ಭಕ್ತರು ಕಣ್ತುಂಬಿಕೊಂಡು ಸಂಭ್ರಮಿಸಿದರು. ಅಲ್ಲದೆ, 21 ಅಡಿ ಎತ್ತರದ ಶಿವಲಿಂಗಕ್ಕೆ ನಮಿಸುವ ಮೂಲಕ ಭಕ್ತರು ಶಿವರಾತ್ರಿ ಹಬ್ಬವನ್ನು ಆಚರಿಸಿದರು.



ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿರುವ 108 ಲಿಂಗಕ್ಕೆ ನಮಿಸುತ್ತಿರುವ ಭಕ್ತರು.



ಮೈಸೂರು ಅರಮನೆ ಆವರಣದ ತ್ರಿನೇಶ್ವರ ಸ್ವಾಮಿ ದೇವಾಲಯದಲ್ಲಿ ಚಿನ್ನದ ಕೊಳಗದಿಂದ ಕಂಗೊಳಿಸುತ್ತಿರುವ ತ್ರಿನೇಶ್ವರಸ್ವಾಮಿ.



ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯದ ವತಿಯಿಂದ ನಿರ್ಮಿಸಿದ್ದ ವಾರಣಾಸಿಯ 'ಕಾಶಿ ವಿಶ್ವನಾಥ ಮಂದಿರದ ಮಾದರಿ ಪ್ರತಿರೂಪ'ದ ವೀಕ್ಷಣೆಗೆ ಮುಗಿಬಿದ್ದ ಭಕ್ತ ಸಮೂಹ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಶಭಾಷ್ ಬಡ್ಡಿಮಗ್ನೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಡ್ರ್ಯಾಗನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
1990's (ಕ)	4 ಪ್ರದರ್ಶನಗಳು
ಗಾಯಿತ್ರಿ	
ಛಾವಾ (ಹಿಂ)	4 ಪ್ರದರ್ಶನಗಳು
ರಾಜಕಮಲ್	
ಶಬ್ದಂ(ತ)	4 ಪ್ರದರ್ಶನಗಳು
ಸಂಗಂ	
ಅಪಾಯವಿದೆ ಎಚ್ಚರಿಕೆ + FIR (ಕ)	2+2 ಪ್ರದರ್ಶನಗಳು
ಲಿಡೋ	
1990's (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
FORST (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೆಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ಸಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆಯಿಂದ ಮೂರು ದಿನ ಪಡುವಾರಹಳ್ಳಿ ಶ್ರೀ ಜೋಡಿ ಮಾರಮ್ಮನ ಅದ್ಧೂರಿ ಜಾತ್ರೆ


ಭಕ್ತಿ-ಭಾವೈಕ್ಯತೆ ಬೆಸೆಯುವ ಬಹುದೊಡ್ಡ ಧಾರ್ಮಿಕ-ಸಾಂಸ್ಕೃತಿಕ ಉತ್ಸವ



ಮೈಸೂರಿನ ಪಡುವಾರಹಳ್ಳಿಯಲ್ಲಿರುವ (ವಿನಾಯಕನಗರ) ಶ್ರೀ ಜೋಡಿ ಮಾರಮ್ಮ ದೇವಸ್ಥಾನ.

ಜಾತ್ರೆಗೆ 500 ವರ್ಷಗಳಿಗೂ ಅಧಿಕ ಕಾಲದ ಇತಿಹಾಸವಿದೆ...

ಜೋಡಿ ಮಾರಮ್ಮ ನಮ್ಮ ಪಡುವಾರಹಳ್ಳಿಯ ಗ್ರಾಮದೇವತೆ. ಜಾತ್ರೆಯ ಪ್ರಯುಕ್ತ ಗುಡಿಯಲ್ಲಿರುವ ಜೋಡಿ ಮಾರಮ್ಮ ವಿಗ್ರಹಕ್ಕೆ ಶುಕ್ರವಾರ ಪಂಚಲೋಹದ ಎರಡು ಕೊಳಗಗಳನ್ನು ಧಾರಣೆ ಮಾಡಲಾಗುತ್ತದೆ ಎನ್ನುತ್ತಾರೆ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ.



4 ಕೆಜಿ ಬೆಳ್ಳಿಯಲ್ಲಿ ಎರಡು ಕೊಳಗ ಮಾಡಿಸಲಾಗುತ್ತಿದೆ. ಆದರೆ ಈ ಬಾರಿ ಅದು ಲಭ್ಯವಿಲ್ಲ. ಮುಂದಿನ ಜಾತ್ರೆಗೆ ಇದರ ಧಾರಣೆ ಮಾಡಲಾಗುವುದು. ಮಾರಿಗುಡಿಯಲ್ಲಿ ಗಂಧದ ಮರದಲ್ಲಿ ಕೆತ್ತನೆ ಮಾಡಿರುವ ಜೋಡಿ ಮಾರಮ್ಮ ವಿಗ್ರಹಗಳಿವೆ. ಇದು ಎರಡು ಮುಖಗಳನ್ನು ಹೊಂದಿದೆ. ಈ ವಿಗ್ರಹಕ್ಕೆ ಜಾತ್ರೆ ಸಂದರ್ಭದಲ್ಲಿ 9 ದಿನಗಳ ಕಾಲ ಕೊಳಗಗಳನ್ನು ಧಾರಣೆ ಮಾಡಲಾಗುತ್ತದೆ.

ಮಾರಿಗುಡಿಯಲ್ಲಿರುವ ಗಂಧದಮರದ ಜೋಡಿ ಮಾರಮ್ಮ ವಿಗ್ರಹಕ್ಕೆ ಸುಮಾರು 500 ವರ್ಷಗಳ ಇತಿಹಾಸ ಇದೆ. ನಮ್ಮ ಪೂರ್ವಿಕರು ತಲೆಮಾರಿನಿಂದ ತಲೆಮಾರಿಗೆ ಮಾರಮ್ಮನ ಬಗ್ಗೆ ಹೇಳುತ್ತಾ ಬಂದ ಹಿನ್ನೆಲೆಯಲ್ಲಿ ನಮಗೆ ಇದರ ಇತಿಹಾಸ ಲಭ್ಯವಾಗಿದೆ. 5 ಶತಮಾನಗಳಷ್ಟು ಹಳೆಯಾದ ಹಿನ್ನೆಲೆಯಲ್ಲಿ ಗಂಧದ ಮರದ ವಿಗ್ರಹ ಸ್ವಲ್ಪ ಭಿನ್ನವಾಗಿತ್ತು. ಹಾಗಾಗಿ ಐದಾರೂ ವರ್ಷಗಳ ಹಿಂದೆಯಷ್ಟೇ ಅರಣ್ಯ ಇಲಾಖೆಯಿಂದ ಗಂಧದ ಮರ ಖರೀದಿ ಮಾಡಿ ವಿಗ್ರಹ ಭಿನ್ನವಾಗಿದ್ದ ಭಾಗದಲ್ಲಿ ಕೆತ್ತನೆ ಮೂಲಕ ಸರಿಪಡಿಸಲಾಗಿದೆ. ಇದರ ಪ್ರತಿಷ್ಠಾಪನೆ ವಿಧಿವಿಧಾನ ಸಹ ನಡೆಸಲಾಯಿತು. ದೇವಸ್ಥಾನ ಮತ್ತು ಜಾತ್ರೆಗೆ 500 ವರ್ಷಗಳಿಗೂ ಪೂರ್ವದ ಇತಿಹಾಸವಿದೆ ಎನ್ನುತ್ತಾರೆ ಅವರು.

● ಎಂ.ಬಿ.ಪವನ್‌ಮೂರ್ತಿ

ಮೈಸೂರು,ಫೆ.27– 'ಮಾರಮ್ಮ' ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಇರುವ ಆದಿಶಕ್ತಿ, ಶಕ್ತಿದೇವತೆ. ಆಯಾಯ ಊರುಗಳಲ್ಲಿ ವಿವಿಧ ಹೆಸರುಗಳಿಂದ ಪೂಜಿಸಲ್ಪಡುವ ಗ್ರಾಮ ದೇವತೆಯೇ ಮಾರಮ್ಮ. ಆದರೆ 'ಜೋಡಿ ಮಾರಮ್ಮ' ಹೆಸರಿನಲ್ಲಿ ಪೂಜಿಸಲ್ಪಡುವ ಗ್ರಾಮ ದೇವತೆ ಇರುವುದು ಮೈಸೂರಿನ ಪಡುವಾರಹಳ್ಳಿಯಲ್ಲಿ ಮಾತ್ರ ಎಂಬುದು ವಿಶೇಷ.

ಹೌದು, ಪಡುವಾರಹಳ್ಳಿ ಹೊರತಾಗಿ 'ಜೋಡಿ ಮಾರಮ್ಮ' ಹೆಸರಿನ ಗ್ರಾಮ ದೇವತೆ ರಾಜ್ಯದ ಯಾವುದೇ ಗ್ರಾಮದಲ್ಲೂ ಇಲ್ಲ. ಇದು ಪಡುವಾರಹಳ್ಳಿ (ವಿನಾಯಕನಗರ) ಮುಖಂಡರ ಅಭಿಮತ. ಪಡುವಾರಹಳ್ಳಿ (ವಿನಾಯಕನಗರ) ಗ್ರಾಮಾಭ್ಯುದಯ ಟ್ರಸ್ಟ್ ವತಿಯಿಂದ ವರ್ಷಕ್ಕೊಮ್ಮೆ ಶ್ರೀ ಜೋಡಿ ಮಾರಮ್ಮ ಜಾತ್ರಾ ಮಹೋತ್ಸವ ಅದ್ಧೂರಿಯಾಗಿ ನಡೆದುಕೊಂಡು ಬಂದಿದೆ. ಗ್ರಾಮದಲ್ಲಿರುವ ಶ್ರೀ ಜೋಡಿ ಮಾರಮ್ಮ ದೇವಸ್ಥಾನವೇ ಜಾತ್ರೆಯ ಕೇಂದ್ರಬಿಂದು.

ಜೋಡಿ ಮಾರಮ್ಮ ಜಾತ್ರೆಯು ಮಾ.1ರಿಂದ 3ರವರೆಗೆ ಮೂರು ದಿನಗಳ ಕಾಲ ಅದ್ಧೂರಿಯಾಗಿ ನಡೆಯಲಿದೆ. ಜಾತ್ರೆಯನ್ನು ಸಡಗರ ಸಂಭ್ರಮದಿಂದ ಆಚರಿಸಲು ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ದೇವಸ್ಥಾನದ ದುರಸ್ತಿ ಹಾಗೂ ಸುಣ್ಣ ಬಣ್ಣ ಲೇಪನ ಬಹುತೇಕ ಪೂರ್ಣಗೊಂಡಿದೆ. ಮೂರು ದಿನಗಳ ಕಾಲ ಮಾರಿಗುಡಿ ಆವರಣವು ಗ್ರಾಮಸ್ಥರು ಹಾಗೂ ನೆಂಟರಿಷ್ಟರು ಸೇರಿದಂತೆ ಅಪಾರ ಸಂಖ್ಯೆಯ ಭಕ್ತಸಾಗರದಿಂದ ತುಂಬಿ ತುಳುಕಲಿದೆ.

ಪಾರಂಪರಾಗತವಾಗಿ ನಡೆದು ಬಂದಿರುವ ಜೋಡಿ ಮಾರಮ್ಮನ ಜಾತ್ರೆಯನ್ನು ಇಂದಿನ ಆಧುನಿಕ ಕಾಲಘಟ್ಟದಲ್ಲಿ ಸಹ ಪಡುವಾರಹಳ್ಳಿ ಗ್ರಾಮಸ್ಥರು ತಮ್ಮ ಪೂರ್ವಜರು ಹಾಕಿಕೊಟ್ಟಿರುವ ಪರಂಪರೆಯಂತೆಯೇ ನಡೆಸಿಕೊಂಡು ಬರುತ್ತಿದ್ದಾರೆ. ಅಲ್ಲದೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಮೂಲಕ ಜಾತ್ರೆಯ ವೈಶಿಷ್ಟ್ಯಕ್ಕೆ ಮತ್ತಷ್ಟು ಮೆರುಗು ನೀಡಲಾಗಿದೆ.

ಅಕ್ಕತಂಗಿಯರೇ ಜೋಡಿ ಮಾರಮ್ಮ: ಜೋಡಿ ಮಾರಮ್ಮ ಅಂದರೆ ಅಕ್ಕತಂಗಿಯರು. ಅವರೇ ಚಿಕ್ಕಮಾರಮ್ಮ ಮತ್ತು ದೊಡ್ಡಮಾರಮ್ಮ ಎನ್ನುತ್ತಾರೆ ಪಡುವಾರಹಳ್ಳಿ (ವಿನಾಯಕನಗರ) ಗ್ರಾಮಾಭ್ಯುದಯ ಟ್ರಸ್ಟ್ ಉಪಾಧ್ಯಕ್ಷ ರಾಮಣ್ಣ. ಇಡೀ ಕರ್ನಾಟಕದಲ್ಲಿ 'ಜೋಡಿ ಮಾರಮ್ಮ' ದೇವಿ ಇರುವುದು ನಮ್ಮ ಪಡುವಾರಹಳ್ಳಿಯಲ್ಲಿ ಮಾತ್ರವೇ. ನಾನು ನೋಡಿದ ಮಟ್ಟಿಗೆ ಬೇರೆ ಎಲ್ಲೂ ಜೋಡಿ ಮಾರಮ್ಮ ಪರಿಕಲ್ಪನೆ ಇಲ್ಲ. ಜಾತ್ರೆಯ ಪ್ರಯುಕ್ತ ನಡೆಯುವ 'ವಡ್ಡಬಾಯಿ' ವರ್ಣರಂಜಿತ ಕಾರ್ಯಕ್ರಮ. ಗ್ರಾಮದ ಹಲವು ಪುರುಷರು ವಿವಿಧ ವೇಷಧಾರಿಗಳಾಗಿ ಮಾರಿಗುಡಿ ಸುತ್ತಲು ಮೂರು ಬಾರಿ ಪ್ರದಕ್ಷಿಣೆ ಹಾಕುತ್ತಾರೆ. ಇದೇ ವಡ್ಡಬಾಯಿ ಕಾರ್ಯಕ್ರಮ. ಗ್ರಾಮದಲ್ಲಿರುವ ಒಕ್ಕಲಿಗ ಸಮುದಾಯ, ಪರಿಶಿಷ್ಟ ಜಾತಿ ಮತ್ತು ಪಂಗಡ ಸಮಾಜದವರು ಸೇರಿ ಆಚರಿಸುವ ಜಾತ್ರೆ ಇದಾಗಿದೆ. ಮಾರಮ್ಮನಿಗೆ ಭಕ್ತಿ ಸಮರ್ಪಿಸುವ ಜೊತೆಗೆ ಭಾವೈಕ್ಯತೆ ಬೆಸೆಯುವ ಜಾತ್ರೆಯೂ ಹೌದು ಎನ್ನುತ್ತಾರೆ ಅವರು.

ಜಾತ್ರೆಯ ವೈಶಿಷ್ಟ್ಯ: ಧಾರ್ಮಿಕ–ಸಾಂಸ್ಕೃತಿಕ ಸಮ್ಮಿಲನದ ವೈವಿಧ್ಯತೆ ಈ ಜಾತ್ರೆಯ ವೈಶಿಷ್ಟ್ಯ. ಮಾರಮ್ಮನಿಗೆ ಭಕ್ತಿ ಸಮರ್ಪಿಸಲು ಅನೇಕ ಧಾರ್ಮಿಕ ವಿಧಿವಿಧಾನಗಳು ಶ್ರದ್ಧಾಭಕ್ತಿಯಿಂದ ನಡೆಸಲಾಗುತ್ತದೆ. ಜೊತೆಗೆ ನಾಟಕ, ಸಂಗೀತದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುತ್ತವೆ. ಮಾ.1ರಂದು ಶನಿವಾರ ಮಧ್ಯರಾತ್ರಿ 2 ಗಂಟೆಗೆ ದೇವಸ್ಥಾನದ ಆವರಣದಲ್ಲಿ ವಡ್ಡಬಾಯಿ ನಡೆಯಲಿದೆ.

ಸಾಂಸ್ಕೃತಿಕ ಕಾರ್ಯಕ್ರಮ

ಜಾತ್ರೆ ಪ್ರಯುಕ್ತ ದೇವಸ್ಥಾನ ಆವರಣದಲ್ಲಿ ಮಾ.2ರಂದು ಭಾನುವಾರ ಸಂಜೆ 7 ಗಂಟೆಯಿಂದ 10ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ರಾತ್ರಿ 10 ಗಂಟೆಗೆ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಮಾ.3 ರಂದು ಸೋಮವಾರ ರಾತ್ರಿ 9 ಗಂಟೆಗೆ ದೇವಸ್ಥಾನದ ಆವರಣದಲ್ಲಿ 'ಸಂಪೂರ್ಣ ರಾಮಾಯಣ' ಪೌರಾಣಿಕ ನಾಟಕ ಪ್ರದರ್ಶನ ನಡೆಯಲಿದೆ.

ಇದು ವರ್ಣರಂಜಿತವಾಗಿ ನಡೆಯುವುದು ವಿಶೇಷ. ಊರಿನ ಪುರುಷರು ವಿವಿಧ ವೇಷಗಳನ್ನು ಧರಿಸಿ ಮಾರಿಗುಡಿಯ ಸುತ್ತಲೂ ಮೂರು ಸುತ್ತು ಪ್ರದಕ್ಷಿಣೆ ಹಾಕಿ ಬಳಿಕ ತಮ್ಮ ವೇಷದ ಸಾಮಗ್ರಿಗಳನ್ನು ಬೆಂಕಿಯಲ್ಲಿ ಸುಟ್ಟು ಹಾಕುತ್ತಾರೆ. ಗುಡಿಯ ಮೂಲೆಯಲ್ಲಿ ಈ ಸುಡುವ ಪ್ರಕ್ರಿಯೆ ನಡೆಯುತ್ತದೆ. ನಂತರ ವಡ್ಡಬಾಯಿ ಸಾರುವ ಪದ್ಧತಿಗೆ ಚಾಲನೆ ದೊರೆಯಲಿದೆ. ಅಲ್ಲಿಗೆ ಶನಿವಾರದ ವಿಧಿವಿಧಾನಗಳು ಪೂರ್ಣಗೊಳ್ಳಲಿದೆ.

ಗ್ರಾಮದೇವತೆ ಜಾತ್ರೆಯಲ್ಲಿ ಮಾರಮ್ಮನಿಗೆ ತಂಪು ಕೊಡುವುದು ವಿಶೇಷ ಆಚರಣೆಯಾಗಿದ್ದು, ಅಂತೆಯೇ ಜೋಡಿ ಮಾರಮ್ಮನ ಜಾತ್ರೆಯಲ್ಲಿಯೂ ಮಾ.2 ರಂದು ಭಾನುವಾರ ಮಧ್ಯರಾತ್ರಿ 2 ಗಂಟೆಗೆ ದೇವಸ್ಥಾನ ಆವರಣದಿಂದ ತಂಪಿನ ಮೆರವಣಿಗೆ ಹೊರಡಲಿದೆ. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಲಿದೆ. ಮಧ್ಯರಾತ್ರಿ 3.30ರ ಸುಮಾರಿಗೆ ಮಾರಿಗುಡಿ ಆವರಣಕ್ಕೆ ಮೆರವಣಿಗೆ ಮರಳಲಿದೆ. ಬಳಿಕ ತಂಬಿಟ್ಟು ಹೊತ್ತ ಮಹಿಳೆಯರು ಸಾಲಿನಲ್ಲಿ ಕೂರಲಿದ್ದಾರೆ. ನಂತರ ಗಂಟೆಗೂ ಹೆಚ್ಚು ಕಾಲ ಗುಡಿಯಲ್ಲಿ ಮಾರಮ್ಮನಿಗೆ ಪೂಜಾ ಕೈಂಕರ್ಯ ನಡೆಯಲಿದ್ದು, ನಂತರದಲ್ಲಿ ತೀರ್ಥ ತಂದು ಹೊರಾವರಣದಲ್ಲಿ ಎರಚಲಾಗುತ್ತದೆ. ಆ ಮೂಲಕ ಮುಂಜಾನೆ 4ರ ವೇಳೆಗೆ ಎಲ್ಲಾ ವಿಧಿ ವಿಧಾನಗಳು ಪೂರ್ಣಗೊಳ್ಳಲಿವೆ.



ಬಾಯಿ ಬೀಗ ಮೆರವಣಿಗೆ: ಮಾ.3 ರಂದು ಸೋಮವಾರ ಬೆಳಗ್ಗೆಯಿಂದಲೇ ಮಾರಿಗುಡಿಯಲ್ಲಿ ಪೂಜಾ ವಿಧಿವಿಧಾನಗಳು ನಡೆಯುವ ಜೊತೆಗೆ ಭಕ್ತರು ದರ್ಶನಕ್ಕೂ ಅವಕಾಶ ಕಲ್ಪಿಸಲಾಗುತ್ತದೆ. ಅದೇ ದಿನ ಮಧ್ಯಾಹ್ನ 3 ಗಂಟೆಗೆ ಬಾಯಿ ಬೀಗದ ಮೆರವಣಿಗೆ ಹೊರಟು, ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ, ಸಂಜೆ ವೇಳೆಗೆ ದೇವಸ್ಥಾನಕ್ಕೆ ಮರಳಲಿದೆ. ನಂತರದಲ್ಲಿ ಬಾಯಿ ಬೀಗ ತೆರವು ಮಾಡುವ ವಿಧಿ ವಿಧಾನ ನಡೆಯಲಿದೆ. ಬಾಯಿ ಬೀಗ ಹರಕೆ ಹೊತ್ತವರು ಉಪವಾಸ ಇದ್ದು ಹರಕೆ ತೀರಿಸುವುದು ವಿಶೇಷ. 'ಈ ಬಾರಿ ಸುಮಾರು 2 ಸಾವಿರ ಮಂದಿ ಬಾಯಿ ಬೀಗ ಹರಕೆ ತೀರಿಸಲಿದ್ದಾರೆ. ಜೊತೆಗೆ ಇವರೊಂದಿಗೂ ಸಾವಿರಾರು ಮಂದಿಗೆ ಹೆಜ್ಜೆ ಹಾಕುವ ಮೂಲಕ ಏಳೆಂಟು ಸಾವಿರ ಮಂದಿ ಮೆರವಣಿಗೆಯಲ್ಲಿ ಸಾಗಲಿದ್ದಾರೆ' ಎನ್ನುತ್ತಾರೆ ಟ್ರಸ್ಟ್ ಉಪಾಧ್ಯಕ್ಷ ರಾಮಣ್ಣ.

ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಾರಿಗುಡಿ ಮುಂಭಾಗ ಮೇಕೆ ಬಲಿ ಕೊಡುವ ಪ್ರಕ್ರಿಯೆ ನಡೆಯಲಿದೆ. ಮಾರನೇ ದಿನ ಗ್ರಾಮಸ್ಥರು ತಮ್ಮ ಮನೆಗಳಲ್ಲಿ ಮಾಂಸಾಹಾರದೊಂದಿಗೆ ವಿವಿಧ ಭಕ್ಷ್ಯ–ಭೋಜನವನ್ನು ನೆಂಟರಿಷ್ಟರಿಗೆ ಉಣಬಡಿಸಲಿದ್ದಾರೆ.

'ಇಡೀ ಕರ್ನಾಟಕದಲ್ಲಿ ಪಡುವಾರಹಳ್ಳಿಯಲ್ಲಿ ಹೊರತು ಜೋಡಿ ಮಾರಮ್ಮ ಎಲ್ಲಿಯೂ ಇಲ್ಲ. ಸೋಮವಾರ ಹೊರಗಡೆ ಜನ ಭಾರಿ ಸಂಖ್ಯೆಯಲ್ಲಿ ಜೋಡಿ ಮಾರಮ್ಮನ ದರ್ಶನ ಪಡೆಯುತ್ತಾರೆ. ಜಾತ್ರೆ ಮುಗಿದ ಬಳಿಕ ಬರುವ ಮೊದಲ ಭಾನುವಾರದ ದಿನದಂದು ಮಾರಮ್ಮನ ಕೊಳಗ ಎತ್ತುವ ವಿಧಿ ವಿಧಾನ ನಡೆಯಲಿದ್ದು, ಅಂದು ಬೆಳಗ್ಗೆಯಿಂದ ಸಂಜೆವರೆಗೆ ಭಕ್ತರು ಮಾರಿಗುಡಿ ಆವರಣದಲ್ಲಿ ಕುರಿ, ಮೇಕೆ, ಕೋಳಿ ಬಲಿ ಕೊಡುತ್ತಾರೆ ಎನ್ನುತ್ತಾರೆ ರಾಮಣ್ಣ.

ಪ್ರಧಾನಿ ಮೋದಿ ಪದವಿ ವಿವಾದ: ತೀರ್ಪು ಕಾಯ್ದಿರಿಸಿದ ದೆಹಲಿ ಹೈಕೋರ್ಟ್

ನವದೆಹಲಿ, ಫೆ.27– ಪ್ರಧಾನಿ ನರೇಂದ್ರ ಮೋದಿ ಅವರ ಪದವಿಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿಸುವಂತೆ ಕೇಂದ್ರ ಮಾಹಿತಿ ಆಯೋಗ(ಸಿಐಸಿ) ನೀಡಿದ್ದ ಆದೇಶ ಪ್ರಶ್ನಿಸಿ ದೆಹಲಿ ವಿಶ್ವವಿದ್ಯಾಲಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಪೂರ್ಣಗೊಳಿಸಿದ ದೆಹಲಿ ಹೈಕೋರ್ಟ್ ಗುರುವಾರ ತೀರ್ಪು ಕಾಯ್ದಿರಿಸಿದೆ.


ವಾದ, ಪ್ರತಿವಾದಗಳನ್ನು ಆಲಿಸಲಾಗಿದೆ. ತೀರ್ಪು ಕಾಯ್ದಿರಿಸಲಾಗಿದೆ ಎಂದು ಕಕ್ಷಿದಾರರ ವಾದ ಆಲಿಸಿದ ನಂತರ ನ್ಯಾಯಮೂರ್ತಿ ಸಚಿನ್ ದತ್ತ ಅವರು ಹೇಳಿದ್ದಾರೆ. ಸಿಐಸಿಯ ಆದೇಶವನ್ನು ರದ್ದುಗೊಳಿಸಲು ಅರ್ಹವಾಗಿದೆ ಎಂದು ದೆಹಲಿ ವಿವಿ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದ್ದಾರೆ.

ಆದಾಗ್ಯೂ, ದಾಖಲೆಯನ್ನು ನ್ಯಾಯಾಲಯಕ್ಕೆ ತೋರಿಸುವುದಕ್ಕೆ ದೆಹಲಿ ವಿವಿ ಯಾವುದೇ ಆಕ್ಷೇಪಣೆ ವ್ಯಕ್ತಪಡಿಸಿಲ್ಲ ಎಂದು ಮೆಹ್ತಾ ಹೇಳಿದ್ದಾರೆ. ವಿಶ್ವವಿದ್ಯಾಲಯವು ದಾಖಲೆಯನ್ನು ನ್ಯಾಯಾಲಯಕ್ಕೆ ತೋರಿಸಲು ಯಾವುದೇ ಆಕ್ಷೇಪಣೆಯನ್ನು ವ್ಯಕ್ತಪಡಿಸಿಲ್ಲ. 1978 ರಲ್ಲಿ ಕಲಾ ಪದವಿ ಪಡೆದಿದ್ದು ಎಂದು ಮೆಹ್ತಾ ತಿಳಿಸಿದ್ದಾರೆ.

ನೀರಜ್ ಎಂಬುವರು ಆರ್‌ಟಿಐ ಅರ್ಜಿ ಸಲ್ಲಿಸಿದ ನಂತರ, ಕೇಂದ್ರ ಮಾಹಿತಿ ಆಯೋಗ (ಸಿಐಸಿ) ಡಿಸೆಂಬರ್ 21, 2016 ರಂದು, 1978ರಲ್ಲಿ ಬಿಎ ಪರೀಕ್ಷೆಯಲ್ಲಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳ ದಾಖಲೆಗಳನ್ನು ಪರಿಶೀಲಿಸಲು ಅವಕಾಶ ನೀಡಬೇಕು ಎಂದು ಆದೇಶಿಸಿತ್ತು ಇದೇ ವರ್ಷ ಪ್ರಧಾನಿ ಮೋದಿ ಕೂಡ ಉತ್ತೀರ್ಣರಾಗಿದ್ದಾರೆ ಎನ್ನಲಾಗಿದೆ. ಜನವರಿ 23, 2017 ರಂದು ದೆಹಲಿ ಹೈಕೋರ್ಟ್, ಸಿಐಸಿ ಆದೇಶಕ್ಕೆ ತಡೆ ನೀಡಿತ್ತು.

ರಾಜಮೌಳಿ ಮೇಲೆ ಗಂಭೀರ ಆರೋಪ : ನಿರ್ಮಾಪಕ ಆತ್ಮಹತ್ಯೆ

ಹೈದರಾಬಾದ್, ಫೆ.27–ಭಾರತೀಯ ಸಿನಿಮಾ ರಂಗದ ಖ್ಯಾತ ನಿರ್ದೇಶಕ ಎಸ್.ಎಸ್.ರಾಜಮೌಳಿ ಮೇಲೆ ಗಂಭೀರ ಆರೋಪ ಮಾಡಿ, ಖ್ಯಾತ ನಿರ್ಮಾಪಕ ಶ್ರೀನಿವಾಸ್ ರಾವ್ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂಬ ಮಾಹಿತಿ ಇದೆ. ಜ್ಯೂನಿಯರ್ ಎನ್‌ಟಿಆರ್ ನಟನೆಯ 'ಯಮದೊಂಗ್' ಸಿನಿಮಾವನ್ನು ಶ್ರೀನಿವಾಸ್ ರಾವ್ ನಿರ್ಮಾಣ ಮಾಡಿದ್ದರು.



ರಾಜಮೌಳಿ ನಿರಂತರವಾಗಿ ನನಗೆ ಟಾರ್ಚರ್ ಕೊಡುತ್ತಿದ್ದಾರೆ ಎಂದು ಡೆತ್ ನೋಟ್ ಮತ್ತು ವಿಡಿಯೋದಲ್ಲಿ ಶ್ರೀನಿವಾಸ್ ರಾವ್ ಬರೆದಿದ್ದು, ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ರಾಜಮೌಳಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಡೆತ್ ನೋಟ್‌ನಲ್ಲಿ ಉಲ್ಲೇಖ ಮಾಡಲಾಗಿದೆ. ಆದರೆ, ಈವರೆಗೂ ಶ್ರೀನಿವಾಸ್ ರಾವ್ ಅವರ ಮೃತದೇಹ ಸಿಕ್ಕಿಲ್ಲ.

ಎಸ್.ಎಸ್.ರಾಜಮೌಳಿಯ ಆತ್ಮೀಯ ಸ್ನೇಹಿತನೂ ಆಗಿದ್ದ ಶ್ರೀನಿವಾಸ್ ರಾವ್ ಡೆತ್ ನೋಟ್ ಮತ್ತು ಸಾಯುವ ಮುನ್ನ ವಿಡಿಯೋವೊಂದನ್ನು ಮಾಡಿ, ತನ್ನ ಸಾವಿಗೆ ರಾಜಮೌಳಿ ಮತ್ತು ಅವರ ಪತ್ನಿ ರಮಾ ಕಾರಣ ಎಂದು ಹೇಳಿಕೊಂಡಿದ್ದಾರೆ. ಜೊತೆಗೆ ರಾಜಮೌಳಿ ಮತ್ತು ತನ್ನ ನಡುವಿನ ಲವ್ ಸ್ಟೋರಿಯನ್ನು ಶ್ರೀನಿವಾಸ್ ಹಂಚಿಕೊಂಡಿದ್ದಾರೆ.

ಹುಟ್ಟುಹಬ್ಬದ ಶುಭಾಶಯಗಳು



ರಾಜುಗೌಡ ಬಿ.ಟಿ ಅವರಿಗೆ

ರಾಜ್ ಕಾರ್ಸ್ ಮಾಲೀಕರು

ಶುಭಕೋರುವವರು:
ಟಿ.ಕೆ ಬಡಾವಣೆಯ ಸ್ನೇಹಿತರು

- Thorough knowledge of MS OFFICE
- English and Kannada Drafting and correspondence
- Knowledge of GEM PORTAL handling and Tenders.
- Sales and Marketing

Interested people can contact :
82775 29922
Mail your CV to :
resumes182@gmail.com

FOR SALE

1 BHK East (40x60) in Vijayanagar 4th Stage

Hanu Reddy Realty ®
International Real Estate Company
90088 28866
www.hanureddyrealty.com

JOB OPPORTUNITY FOR FRESHERS!

Any Graduates can apply
Role: **Data Annotator and Process Executive**
Open Positions - 100
Work from Office

Walk in for an interview
Mon-Sat (10 am-4 pm) at
'Prudent Partners LLP'
667, Shrinidhi Plaza
Nrupatunga Road, M-Block
Next to Royal Warrior Bakery,
Mysuru - 570023.
email: hr@prudentpartners.in
Ph: 9743664206

Radisson BLU PLAZA HOTEL MYSORE

TENDER FOR ANNUAL CONTRACT

Sealed tenders are invited for supplying the following items to the hotel on an annual contract basis for the period April 2025 to March 2026:

1. Vegetables
2. Fruits
3. Dairy Products (Milk/Unsalted Butter etc.)
4. Ice Creams
5. Mutton
6. Chicken
7. Seafood
8. Meat (Pork, Sausages etc.)
9. Cleaning Supplies
10. F&B Catering Supplies
11. General Stationery
12. Groceries/ Provisions (Rice / Oil etc.)
13. Electricals (LED Bulbs, Fittings etc.)
14. Plumbing Supplies
15. Paints
16. Scrap Clearance
17. Frozen Items

All vendors are to comply with FSSAI Act / GST / Shops & Establishments Act. The right to select / reject any tender without assigning any reason thereof, reserved.
Last date for application issue: 06.03.2025
Last date for receiving sealed application: 13.03.2025
Cost of application (direct / by post) per item: Rs. 500.00

Contact : Manager - Materials
RADISSON BLU PLAZA HOTEL MYSORE
1, MG Road, Mysore,-570 010. Karnataka, India.
Tel: +91 8884445066

ತಕ್ಷಣ ಬೇಕಾಗಿದ್ದಾರೆ

ಹಿನಕಲ್‌ನಲ್ಲಿರುವ
ಜೀನಿಯಸ್ ಮೋಟಾರ್ಸ್,
ಮಲ್ಟಿ ಬ್ರ್ಯಾಂಡ್ ಕಾರ್ ಸರ್ವೀಸ್ ಸೆಂಟರ್‌ಗೆ ವಾಷಿಂಗ್ ಬಾಯ್ (ಎಸ್‌ಎಸ್‌ಎಲ್‌ಸಿ / ಐಟಿಐ), ನುರಿತ ಮೆಕ್ಯಾನಿಕ್ (ಐಟಿಐ/ಡಿಪ್ಲೋಮಾ – ಪಾಸ್ / ಫೇಲ್) ಮತ್ತು ಪಾಲಿಶಿಂಗ್ ಹುಡುಗರು ತಕ್ಷಣ ಬೇಕಾಗಿದ್ದಾರೆ.
Mob: 9980676250



K.P.R SUZUKI
C-1, New Kantharaja Urs Road, Kuvempunagara, Mysore - 570023. Ph : 0821 - 4000009, M : 88841 81777
L31/1, Five Light Circle, Lashkar Mohalla, Mysore - 570010. Ph : 0821 - 2446677, M : 76187 89901
KL-59, Bangalore-Mysore Highway Road, Kallahalli, Mandya - 571404. Ph : 08232-222259, M : 88842 21818

ನಿಧನ



ಶ್ರೀಯುತರು ದಿ:27–02–2025ರಂದು ದೈವಾಧೀನರಾಗಿದ್ದು, ದಿ:28–02–2025ರ ಮಧ್ಯಾಹ್ನ 12:00 ಗಂಟೆಗೆ ಮೃತರ ಅಂತ್ಯಕ್ರಿಯೆಯನ್ನು ಹಿನಕಲ್ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಆಸ್ಪತ್ರೆ ಮಹದೇವಪ್ಪ
ಹಿನಕಲ್ ಗ್ರಾಮ, ಮೈಸೂರು

ದುಃಖಿತರು: ಮಕ್ಕಳು, ಮೊಮ್ಮಕ್ಕಳು, ಕುಟುಂಬವರ್ಗ ಹಾಗೂ ಗ್ರಾಮಸ್ಥರು. ಮೊ: 8050225301

7ನೇ ವರ್ಷದ ಪುಣ್ಯಸ್ಮರಣೆ



ನಾರಾಯಣಗೌಡ್ರು
ನಿಧನ: 28.02.18

ದುಃಖಿತಪ್ತರು: ಧರ್ಮಪತ್ನಿ ಶ್ರೀಮತಿ ಜಯಮ್ಮ ಹಾಗೂ ಮಕ್ಕಳು ಕುಟುಂಬವರ್ಗದವರು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತಿ

ಬೆಟ್ಟದಪುರ, ಪಿರಿಯಾಪಟ್ಟಣ ತಾಲೂಕು

ಚುನಾವಣಾ ವೇಳಾ ಪಟ್ಟಿ

ಇವರ ಆಡಳಿತ ಮಂಡಳಿಯ ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳವರೆಗೆ ಚುನಾವಣೆ. ಮತದಾನದ ದಿನಾಂಕ 15–3–25ನೇ ಶನಿವಾರ ಬೆಳಗ್ಗೆ 9:00 ರಿಂದ ಸಂಜೆ 4 ಗಂಟೆವರೆಗೆ. ಸ್ಥಳ: ಸಂಘದ ಕಚೇರಿ ಹಾಗೂ ಎಪಿಎಂಸಿ ಆವರಣ ಬೆಟ್ಟದಪುರ ಪಿರಿಯಾಪಟ್ಟಣ ತಾಲೂಕು. ನಾಮಪತ್ರ ಸಲ್ಲಿಸುವ ದಿನಾಂಕ 1–3–25ನೇ ಶನಿವಾರ ದಿಂದ ದಿನಾಂಕ 07–3–2025ರ ಶುಕ್ರವಾರ ಮಧ್ಯಾಹ್ನ 2 ಗಂಟೆಯವರೆಗೆ ಸಂಘದ ಕಚೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ಸಲ್ಲಿಸತಕ್ಕದ್ದು. ದಿನಾಂಕ 8 ಬೆಳಗ್ಗೆ 11 ಗಂಟೆಗೆ ನಾಮಪತ್ರ ಪರಿಶೀಲನೆ ನಡೆಯಲಿದೆ. ದಿನಾಂಕ: 9–3–25ರ ಭಾನುವಾರ ನಾಮಪತ್ರ ವಾಪಸ್ಸು ಪಡೆಯಲು ಅವಕಾಶವಿರುತ್ತದೆ. ನಂತರ ದಿನಾಂಕ 15 ರ ಶನಿವಾರ ಬೆಳಗ್ಗೆ 9:00 ಗಂಟೆಯಿಂದ ಸಂಜೆ 4:00 ವರೆಗೆ ಚುನಾವಣೆ ನಡೆಯಲಿದೆ. ಒಟ್ಟು ಸ್ಥಾನಗಳು 12 ಇದರಲ್ಲಿ 5 ಸಾಮಾನ್ಯ 1 ಹಿಂದುಳಿದ ಪ್ರವರ್ಗ ಎ ಹಿಂದುಳಿದ ಪ್ರವರ್ಗ ಬಿ 1 ಒಂದು ಸ್ಥಾನ, ಪರಿಶಿಷ್ಟ ಜಾತಿ ಒಂದು ಸ್ಥಾನ, ಪರಿಶಿಷ್ಟ ಪಂಗಡ ಎರಡು ಸ್ಥಾನ, ಮಹಿಳಾ ಮೀಸಲು ಸ್ಥಾನ ಹಾಗೂ ಒಂದು ಸ್ಥಾನ ಸಾಲಗಾರರಲ್ಲದ ಕ್ಷೇತ್ರಕ್ಕೆ ಚುನಾವಣೆ ನಡೆಯಲಿದೆ.

ಸಹಿ/– ಕೆ ಎನ್ ಗಿರೀಶ್, ರಿಟರ್ನಿಂಗ್ ಅಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತಿ, ಬೆಟ್ಟದಪುರ. ಪಿರಿಯಾಪಟ್ಟಣ ತಾ.

ವೃದ್ಧಾಶ್ರಮ

ನಿಮ್ಮ ಪ್ರೀತಿಯ ವೃದ್ಧರನ್ನು, ಪಾರ್ಶ್ವವಾಯು ಪೀಡಿತರನ್ನು ಮತ್ತು ಹಾಸಿಗೆ ಹಿಡಿದ ಯಾವುದೇ ವ್ಯಕ್ತಿಗಳನ್ನು ಇರಿಸಲು ಸೂಕ್ತವಾದ ಸ್ಥಳಕ್ಕಾಗಿ ಮೈಸೂರಿನಲ್ಲಿ ಹುಡುಕಾಟ ನಡೆಸುತ್ತಿದ್ದರೆ ಇಂದೇ ನಮ್ಮನ್ನು ಸಂಪರ್ಕಿಸಿ, ಸುಸಜ್ಜಿತವಾದ ಪರಿಸರ ಮತ್ತು ಶುದ್ಧ ಆಹಾರವನ್ನು ನೀಡಿ 24/7 ಎಚ್ಚರಿಕೆಯಿಂದ ನೋಡಿಕೊಳ್ಳುತ್ತೇವೆ ಹಾಗೂ ಹೋಂ ನರ್ಸ್ ಸೇವೆಯೂ ಲಭ್ಯವಿದೆ. ಸಂಪರ್ಕಿಸಿ:
Mob: 9916905188

---

neem BOND PLATINUM®
PLYWOOD DOORS 10 YEARS WARRANTY ISI
@ FACTORY RATES
Build Mart®
Kushalnagar Mys. / Blr.
9901291267 / 9731591267

ವಾಣಿಜ್ಯ ಪದವೀಧರರೇ ಗಮನಿಸಿ

ಕಲಿಯಿರಿ ಟ್ಯಾಲಿ, ಇ–ಫೈಲಿಂಗ್, ಜಿಎಸ್‌ಟಿ & ಇನ್‌ಕಂ ಟ್ಯಾಕ್ಸ್
ತಕ್ಷಣವೇ ಉದ್ಯೋಗ ಪಡೆದುಕೊಳ್ಳಬಹುದು.
* ವಯಸ್ಸಿನ ಮಿತಿ ಇಲ್ಲ * ಗೃಹಿಣಿಯರಿಗೂ ಅವಕಾಶ.
ತರಗತಿಗಳು ಪ್ರಾರಂಭ 05-03-2025 ರಿಂದ
Contact: **GLOBAL ACCOUNTS**
Mob: 8951525007

ಹಸಿರು ನಮ್ಮ ಉಸಿರು

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ನಿ.,

ದೂ: 0821–2520894/4259665
ಎನ್. ಮಾಧವರಾವ್ ವೃತ್ತ (ಅಗ್ರಹಾರ), ಮೈಸೂರು

'ಚಿನ್ನಾಭರಣ ಸಾಲದ ಮೇಳ'

ದಿನಾಂಕ: 01.03.2025 ರಿಂದ 31.03.2025ರವರೆಗೆ
(Without Processing Fees) ನಿರ್ವಹಣಾ ಶುಲ್ಕ ಇರುವುದಿಲ್ಲ
ಸದಸ್ಯರು ಮತ್ತು ಸದಸ್ಯರೇತರರಿಗೆ ಚಿನ್ನಾಭರಣಗಳ ಮೇಲೆ ಬಡ್ಡಿದರ 75 ಪೈಸೆಯಂತೆ ಗ್ರಾಂಗೆ ರೂ. 6000/- ರಂತೆ ಶೀಘ್ರವಾಗಿ ಸಾಲ ನೀಡಲಾಗುತ್ತಿದೆ.

ಡಿ.ಬಸವರಾಜು (ಬಸಪ್ಪ)	ಹೆಚ್.ಎನ್. ಸರ್ವಮಂಗಳ	ಡಿ. ಅನಂತವೀರಪ್ಪ
ಅಧ್ಯಕ್ಷರು	ಉಪಾಧ್ಯಕ್ಷರು	ಪ್ರ.ವ್ಯವಸ್ಥಾಪಕರು

ನಿರ್ದೇಶಕರುಗಳಾದ: ನಂಸಿದ್ಧಪ್ಪ, ಜಿ.ಎಂ. ಪಂಚಾಕ್ಷರಿ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ, ಪ್ರತಿಧ್ವನಿಪ್ರಸಾದ್, ಟಿ.ವಿ.ಗಣೇಶಮೂರ್ತಿ, ಶ್ರೀಮತಿ ಜಿ.ನಾಗಜ್ಯೋತಿ, ಎಂ.ಎನ್.ನವೀನ್ ಕುಮಾರ್, ಎಂ.ಎಸ್.ಅರುಣ್ ಸಿದ್ದಪ್ಪ ಹೆಚ್.ವಾಸು, ಎಂ. ಶಿವಪ್ರಕಾಶ್
ಆಡಳಿತ ಮಂಡಳಿ ಅಪ್ಪಣೆಯ ಮೇರೆಗೆ
ಸಹಿ/– ಪ್ರಭಾರ ವ್ಯವಸ್ಥಾಪಕರು

PUBLIC NOTICE

My client intends to purchase the below mentioned "Schedule property" from Smt. Kamalamma, W/o Late. C. Sridharan, residing at 508, Garuthaman Park, R V Road, Basavanagudi, Bengaluru. Originally the Schedule Property and other property was belongs to Narayana B, S/o Gundappa. Narayan B was sold the same infavour of B Basavaiah and Siddaiah B under a registered sale deed dated : 28-9-1957. B Basavaiah and B Siddaiah and his sisters have affected a registered Partition of the Schedule Property and other properties under a registered partition deed dated : 18-11-1974. Under the partition Sy.No. 114,115,117 totally 3 Acre 39 Guntas was allotted to the share of B Siddaiah. On 21-8-1996 B. Siddaiah has executed a registered WILL bequeathing the Schedule Property and other properties infavour of his grand childrens Manikanta, Srikanta, Vasudeva, Shobha. B Siddaiah died, upon his death the RTC was mutated in the name of Chikkatayamma, W/o Late. Siddaiah B. Subsequently, the Survey number 115 was rephodied as 115/2/1P and 115/2/2, 115/1A/2P, 115/1B/1P and 115/2A/2P totally 31 Guntas and Sy.no. 117 was rephodied as 117/2B/2 and 117/2B/1 measuring 00.18 Guntas. Later on all the Sy.Nos. which are rephodied has become 115/2A2 measuring 16 Guntas and 115/2B measuring 00.16 Guntas and Sy.No. 117 has become 117/3 measuring 00.18 Guntas. On 5-7-2006 Chikkathayamma and their family members have sold the above agricultural property infavour of Sridharan C. On 29-10-2007 Sridharan died intestate leaving behind his wife Kamalamma and a daughter as a legal heir to succeed entire estate. On 4-1-2010 the family members of Sridharan C has obtained conversion order to the Schedule A property from the office of the Deputy Commissioner of Mysore District vide reference number ALN (1) CR 302/2009-10 dated : 9-6-2010 and Schedule B Property remained as an agricultural property. Hence this notice if any person/s, or the family members of Siddhaiah B, Chikkathayamma or Sridharan or Kamalamma or her daughter Sundaramma, anybody claiming any sort of right, title, interest, charges or claims or any suit, petition is pending on the above mentioned land or Schedule property of any kind whatsoever nature over the "Schedule Property" please do notify the same to the under signed within Seven days from the date of this public notice, attaching all the relevant documents substantiating such right and claims. If, no such objections are received within Seven days, my client will proceed to purchase the Schedule property. After the expiry of the said Seven days notice period, my client shall be at liberty not to entertain any complaint or claims.

SCHEDULE 'A' PROPERTY

a) All that is converted and undeveloped land bearing Sy.Nos. 115/2B measuring 00.16 Guntas situated at Belavatha village, Kasaba Hobli, Mysore Tq bounded on East by Land bearing Sy.no. 114/2, West by land bearing Sy.no. 117/3, North by Land bearing Sy.no. 115/2A2 and South by Land bearing Sy.No. 123,124.

b) All that is converted and undeveloped land bearing Sy.Nos. 117/3 measuring 00.18 Guntas situated at Belavatha village, Kasaba Hobli, Mysore Tq bounded on East by Land bearing Sy.no. 115/2A2, 2B, West by Land bearing Sy.no. 117/2, North by Ring Road and South by Land bearing Sy.No. 123.

SCHEDULE 'B' PROPERTY.

a) All that is agriculutral land bearing Sy.Nos. 115/2A2 measuring 00.15 Guntas situated at Belavatha village, Kasaba Hobli, Mysore Tq., bounded on East by Land bearing Sy.no. 114, West by remaining property of Kamalamma, North by Ring Road and South by Land belongs to Basavaiah in Sy.no. 115/2B.

Sd/- Subramanya J.
Advocate,
890/4, 1st floor, 1st Main, Lakshmipuram, Mysore-570 004
Mob : 98441 54581, Email : advocate.subramanya@gmail.com
Date : 26.2.2025, Place : Mysuru

HP HYLAND PROPERTIES — DTCP APPROVAL

ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಕೇವಲ ₹650/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

30x40	30x50
40x60	50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
88840 71010
90713 86615

DREAM WORLD TRAVELS Mysore

Jammu & Kashmir
7 Nights 8 Days
Last 6 Seats available

PACKAGE COST: **Rs.56,800/-**
DEPARTURE DATE **March 31st 2025**



For More Details Contact :
994 5242 427

Congratulations



DR. CHINMAYEE CHOWDE GOWDA

Thesis Title: Development of Two-Dimensional Magnetic Transition Metal Tellurides for Energy Applications.
Date of Completion: May 3rd 2024
Degree awarded at the 70th convocation on 30th December 2024
Guide's name: Prof. Chandra Sekhar Tiwary and Prof. Amreesh Chandra
Department: School of Nano Science and Technology
Institute: Indian Institute of Technology Kharagpur, West Bengal, Irdia

Best wishes from
Parents: Dr. M. Chowdegowda & M. B. Anuradha
K. C. Layout, Mysuru



ಮೊದಲನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ಹೃತ್ವಿಕ್.ಆರ್.ಗೌಡ

ಶುಭಾಶಯ ಕೋರುವವರು
ರವಿಕುಮಾರ್ ಪೂರ್ಣಿಮ, ಮುಕುಂದ ರಾಜೇಶ್ವರಿ ಮಾಯಿಗೌಡ್ರು ಗಾಂಿತ್ರಿ, ತೇಜಸ್, ಉದ್ವಿತ ಆರ್ ಗೌಡ

ವಿನಿಮಯ ಕೊಡುಗೆಗಳು

ನಿಮ್ಮ ಹಳೆಯ ಮಿಕ್ಸರ್ ಮತ್ತು ಗ್ರೈಂಡರ್‌ಗಳನ್ನು ವಿನಿಮಯ ಮಾಡಿಕೊಳ್ಳಿ ಹಾಗೂ ಹೊಸ ಮಿಕ್ಸರ್ ಮತ್ತು ಗ್ರೈಂಡರ್ ಮೇಲೆ

₹3500/- ವರೆಗೆ ರಿಯಾಯಿತಿ ಪಡೆಯಿರಿ

Prestige | Butterfly | Vidiem | Preethi | Panasonic

ಹಾಗೂ ಇತ್ಯಾದಿ....



ಮೋಹನ್ ಭಂಡಾರ್®
ಸಯ್ಯಾಜಿ ರಾವ್ ರಸ್ತೆ
ಮೈಸೂರು
ಫೋನ್ : 9606233433, 0821–2445566

ವಿದ್ಯುತ್ ಉಪಕರಣಗಳು, ಗ್ಯಾಸ್ ಸ್ಟೌವ್, ಕುಕ್ಕರ್ ಮತ್ತು ವೆಟ್ ಗ್ರೈಂಡರ್‌ಗಳ ಅಧಿಕೃತ ಸರ್ವೀಸ್ ಸೆಂಟರ್

ನಮ್ಮದು ಯಾವುದೇ ಶಾಖೆಗಳಿಲ್ಲ

BNI MYSORE
PRESENTS
MYBIZ 2025
An Expo of Diverse Businesses Under One Roof

28th Feb, 1st & 2nd March
Scouts & Guides Ground, Mysore

ENTRY FREE

Platinum Sponsors: JAGAJYOTHI LAND DEVELOPERS, Ananda Assets Pvt Limited
Gold Sponsors: SHINESTAR FGC FGC, R.P. ARTS
Silver Sponsors: RK BUILD PRO, K.S.K Interiors & Furnitures, TECQNIO
Associate Sponsors: KRISHI & SANUMA ASSOCIATES, VARALAKSHMI SILKS

Sri Shambhulingeshwara Residential PU College
Jayanthinagara, Pandavapura Tq, Mandya Dist.

Faculty Recruitment :2025-26

Requires motivated, experienced and dynamic candidates in the following discipline

NEET & KCET- Sr Faculty — Min 8+ Yrs exp
Physics | Chemistry | Mathematics | Biology
Full time/Part time positions, — Interview- 1/3/2025 @9.30am

PU- Lecturers — Min 5+ years Exp
Physics | Chemistry | Mathematics
Full time — Interview- 2/3/2025 @9.30am

PU- Lecturers — Min 3+ years Exp
Accountancy | Computer science | Economics | English | Kannada | Mathematics
Full time — Interview- 8/3/2025 @9.30am

Salary is not a constraint for the right candidates
Food & accommodation will be provided
Interested candidates can send their resume on the following whatsApp number or E-mail address
ssetrust.hrt@gmail.com | Ph +91 7338138083